Personal

# ಭಾರತೀಯ ಮೂರ್ತಿಶಿಲ್ಪ



—ತ್ರಿಮೂರ್ತಿ, ಎಲಿಫಂಟಾ

ಲೇಖಕ :

**ಪ್ರೊ|| ಬಿ. ಎಚ್. ಶ್ರೀಧರ,** ಎಂ. ಎ.

ನಿವೃತ್ತ ಪ್ರಿನ್ಸಿಪಾಲ್, ಶಿರಸಿ

21-5-1988 (1)
Personal copy
B.H. Sreedhara

# ಭಾರತೀಯ ಮೂರ್ತಿಶಿಲ್ಪ

ಲೇಖಕ :

ಪ್ರೊ|| ಬಿ. ಎಚ್. ಶ್ರೀಧರ, ಎಂ. ಎ.
ನಿವೃತ್ತ ಪ್ರಿನ್ಸಿಪಾಲ್, ಶಿರಸಿ

ಪ್ರಕಾಶಕರು :

ಶಿರಸಿಯ ರಂಗಸಂಗ ಮತ್ತು ಕಲಾರಂಗ

1988

# ಕೃತಜ್ಞತೆ

ಮೊದಲನೆಯದಾಗಿ ಈ ಗ್ರಂಥವನ್ನು ಪ್ರಕಾಶನಕ್ಕೆ ತಂದ ಶಿರಸಿಯ ರಂಗಸಂಗ ಮತ್ತು ಕಲಾರಂಗದವರಿಗೆ ಕೃತಜ್ಞತೆ ಸಲ್ಲಿಸಲೇಬೇಕು. ಎರಡನೆಯದಾಗಿ ಅವರಿಗೆ ಪ್ರಕಾಶನಕ್ಕೆ ಬೇಕಾದ ಮೊಬಲಗನ್ನು ಒದಗಿಸಿಕೊಟ್ಟ ಶ್ರೀಮಾನ್ ಎಸ್. ಆರ್. ಹೆಗಡೆ, ಶ್ರೀಮಾನ್ ಡಿ. ವೀರೇಂದ್ರ ಹೆಗ್ಗಡೆ, ಡಾ|| ಶಿವರಾಮ ಕಾರಂತ ಮುಂತಾದ 60ಕ್ಕೂ ಮಿಕ್ಕಿದ ಮಹನೀಯರಿಗೆ ನಾನು ಕೃತಜ್ಞನಾಗಿರಬೇಕಾದುದು ನನ್ನ ಕರ್ತವ್ಯ. ಮೂರನೆಯದಾಗಿ ಈ ಗ್ರಂಥಕ್ಕೆ ಬೇಕಾದ ರೇಖಾಚಿತ್ರಗಳನ್ನು ಒದಗಿಸಿಕೊಟ್ಟ ದಿ. ನರೋನಾ ಮಾಸ್ತರರಿಗೆ ನಾನು ಋಣಿ. ನಾಲ್ಕನೆಯದಾಗಿ ಮುದ್ರಣ ಕಾರ್ಯದಲ್ಲಿ ಸಹಕರಿಸಿದ ಪ್ರೊ|| ಜಿ. ಕೆ. ಹೆಗಡೆ ಅವರಿಗೂ ಶಿರಸಿಯ ಸಹಕಾರಿ ಮುದ್ರಣಾಲಯದವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಶಿರಸಿ,
ದಿ. 1-3-1988

ಇತಿ ಗ್ರಂಥದ ಸರ್ವ ಹಕ್ಕುಗಳನ್ನೂ ಪಡೆದಿರುವ,
**ಬಿ. ಎಚ್. ಶ್ರೀಧರ**

ಗ್ರಂಥ:

# ಭಾರತೀಯ ಮೂರ್ತಿ ಶಿಲ್ಪ


ಪ್ರಕಾಶಕರು:

ರಂಗಸಂಗ ಮತ್ತು ಕಲಾರಂಗ

ಮುದ್ರಣ:

ಸಹಕಾರಿ ಮುದ್ರಣಾಲಯ, ಶಿರಸಿ (ಉ. ಕ.)





ಪುಸ್ತಕ ದೊರೆಯುವ ಸ್ಥಳ:

ಶ್ರೀ ಆರ್. ಎಸ್. ಹೆಬ್ಬಾರ
ಸಾಹಿತ್ಯ ಭವನ
714/A, ಟಿ. ಎಸ್. ಎಸ್. ಕಾಲನಿ, ಶಿರಸಿ (ಉ. ಕ.)

ಬೆಲೆ: ಒಂದು ಪ್ರತಿಗೆ ರೂ. ೩೦=೦೦

# ನಿವೇದನೆ

ಯಾವುದೇ ದೇವಾಲಯವನ್ನು ಹೊಕ್ಕರೂ ಹೊಕ್ಕವನು ತಾನೇ ಅಲ್ಲಿರುವ ವಿಗ್ರಹಗಳನ್ನು ಗುರುತಿಸುವ ಜ್ಞಾನವುಳ್ಳವನಾಗಿರಬೇಕು ಎಂಬುದೇ ಈ ಗ್ರಂಥದ ಉದ್ದೇಶವಾಗಿದೆ. ಇಂದಿನ ಮುದ್ರಣದ ಖರ್ಚು ಮುಂತಾದವುಗಳನ್ನು ಗಮನಿಸಿ ಗ್ರಂಥದ ವಿಸ್ತಾರವನ್ನು ಕಡಿಮೆ ಮಾಡಲಾಗಿದೆ. ಇಲ್ಲವಾದರೆ ಈ ಗ್ರಂಥವು ಇನ್ನಷ್ಟು ಶಾಸ್ತ್ರೀಯ ವಿವರಣೆಗಳನ್ನೂ ಚಿತ್ರೋದಾಹರಣೆಗಳನ್ನೂ ಒಳಗೊಂಡಿರುವಂತೆ ಮಾಡಿದ ಯೋಜನೆಯನ್ನು ಜಾರಿಗೆ ತರಲಾಗುತ್ತಿತ್ತು.

ಗರ್ಭಗುಡಿಯಲ್ಲಿರುವ ಮುಖ್ಯ ದೇವತೆಯಿಂದ ಹಿಡಿದು ದ್ವಾರಪಾಲಕರವರೆಗೆ ಅವರವರ ಆಯುಧ, ವಾಹನ, ಅಲಂಕಾರ, ಆಸನ ಮುಂತಾದವುಗಳು ವಿವಿಧ ಮತ್ತು ವಿಶಿಷ್ಟ. ಸಾಧಾರಣಗಳ ನಡುವೆ ವಿಶಿಷ್ಟಗಳನ್ನು ಗಮನಿಸಿ ವಿಗ್ರಹಗಳನ್ನು ಗುರುತಿಸುವುದು ಸುಲಭ; ಜೊತೆಗೆ ಅವರವರ ಪೌರಾಣಿಕ ಹಿನ್ನೆಲೆ ಗೊತ್ತಿದ್ದರೆ ಮತ್ತೂ ಸುಲಭ. ಭಾರತದಲ್ಲಿ ಯಜ್ಞಸಂಸ್ಥೆಯು ಜನಪ್ರಿಯತೆ ಕಳೆದುಕೊಂಡಾಗಲೇ ದೇವರ ದೇವಸ್ಥಾನಗಳು ಬಂದು ಹೋಮ, ನೇಮಗಳು ಪರ್ಯಾಯವಾದವು, ಪೂಜೆ-ಪುರಸ್ಕಾರಗಳು ರೂಢಿಗೆ ಬಂದವು, ರಥೋತ್ಸವಾದಿಗಳು ರಂಜಕವಾದವು—"ವೀಣಾ ಭೇರಿ ಮೃದಂಗ ಕಾಹಲಕಲಾ ನತ್ಯಂ ಚ ಗೀತಂ ತಥಾ" ಮುಂತಾದ ಕಲಾಪ್ರದರ್ಶನಗಳು ದೇವರ ಹೆಸರಿನಲ್ಲಿ ನಡೆಯತೊಡಗಿದವು. ಇವೆಲ್ಲಾ ೨೫೦೦ (ಕ್ರಿ. ಪೂ) ವರ್ಷಗಳಿಂದೀಚೆಗೆ. ದೇವಾರಾಧನೆಯ ಪೂರ್ಣಾಂಗಗಳು ಈ ಮಾನಸಪೂಜೆಯಲ್ಲಿ ವಿವರವಾಗಿ ಬಂದಿವೆ:—

"ರತ್ನೈಃ ಕಲ್ಪಿತಮಾಸನಂ ಹಿಮಜಲೈಃ ಸ್ನಾನಂಚ ದಿವ್ಯಾಂಬರಂ
ನಾನಾರತ್ನವಿಭೂಷಿತಂ ಮೃಗಮದಾಮೋದಾಂಕಿಂತಂ ಚಂದನಂ ।
ಜಾತೀ ಚಂಪಕಬಿಲ್ವಪತ್ರರಚಿತಂ ಪುಷ್ಪಂಚಧೂಪಂ ತಥಾ
ದೀಪಂ ದೇವದಯಾನಿಧೇ ಪಶುಪತೇ ಹೃತ್ಕಲ್ಪಿತಂ ಗೃಹ್ಯತಾಂ ॥

ಸೌವರ್ಣೇ ಮಣಿಖಂಡರತ್ನರಚಿತೇ ಪಾತ್ರೇ ಘೃತಂ ಪಾಯಸಂ
ಭಕ್ಷ್ಯಂ ಪಂಚವಿಧಂ ಪಯೋದಧಿಯುತಂ ರಂಭಾಫಲಂ ಪಾನಕಂ |
ಶಾಕಾನಾಮಯುತಂ ಜಲಂ ರುಚಿಕರಂ ಕರ್ಪೂರ ಖಂಡೋಜ್ವಲಂ
ತಾಂಬೂಲಂ (ಮನಸಾ) ಮಯಾವಿರಚಿತಂ ಭಕ್ತ್ಯಾಪ್ರಭೋಸ್ವೀಕುರು |

ಛತ್ರಂಚಾಮರಯೋರ್ಯುಗಂ ವ್ಯಜನಕಂಚಾದರ್ಶಕಂ ನಿರ್ಮಲಂ
ವೀಣಾಭೇರಿಮೃದಂಗಕಾಹಲ ಕಲಾನೃತ್ಯಂಚ ಗೀತಂ ತಥಾ |
ಸಾಷ್ಟಾಂಗಂ ಪ್ರಣತಿಸ್ಸ್ತುತಿರ್ಬಹುವಿಧಾಹ್ಯೇತತ್ಸಮಸ್ತಂ ಮಮಾ
ಸಂಕಲ್ಪೇನ ಸಮರ್ಪಿತಂ ತವವಿಭೋ ಪೂಜಾಂ ಗೃಹಾಣ ಪ್ರಭೋ ||

ಆತ್ಮಾ ತ್ವಂ ಗಿರಿಜಾ ಮತಿಃ ಸಹಚರಾಃ ಪ್ರಾಣಾಃ ಶರೀರಂ ಗೃಹಂ
ಪೂಜಾ ತೇ ವಿಷಯೋಪಭೋಗರಚನಾ ನಿದ್ರಾ ಸಮಾಧಿಸ್ಥಿತಿಃ |
ಸಂಚಾರಃ ಪದಯೋಃ ಪ್ರದಕ್ಷಿಣವಿಧಿಸ್ ಸ್ತೋತ್ರಾಣಿ ಸರ್ವಾಗಿರಃ
ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಂ ||

# ನಿವೇದನಂ

I

ಆಯುಧ ಭೂಷಣ ವಾಹನ-
ರೂಪಂ। ಚಾವಯವ ಚೇಷ್ಟಾಲಕ್ಷ್ಯಾ ।
ಮೂರ್ತಿರ್ವರಧೀ ಕಲ್ಪಿತ-
ಸುನಾಮಧೇಯಾ ಸುನಿಶ್ಚಿತಾ ಮಾನೇ ಚ ॥೧॥

ಮನುಜಸ್ಯ ಮನಃ ಕಲ್ಪಿತ-
ಮೂರ್ತೀವ ಧಿಯಾ ಪರೋಕ್ಷ ಶಕ್ತ್ಯಾಽಹಂತ್ವಾತ್ ।
ವಿಕೃತಿವಿಶೇಷಂ ತೇನ ಚ
ಸಹಸ್ರದೇವಾಕೃತಿಪ್ರಪಂಚಃ ಸುಕೃತಃ ॥೨॥

ಶೂನ್ಯಸಮುದೃಶ್ಯಮಾನಾತ್
ಪ್ರೋಪೋಪಾಧ್ಯಾ ವಸ್ತುಸೃಷ್ಟಿರಾದಾ ಸೃಷ್ಟಾ ।
ತ್ರಚಕ್ರೋಪಾದಾನಹರಃ
ಕರೋತಿ ರೂಪಾಣ್ಯನೇಕಧಾ ನರಶಿಲ್ಪೀ ॥೩॥

ನರಸದೃಶಂ ನರಭಿನ್ನಂ
ರೂಪಂ ಕಾರ್ಯಾಣಿ ಸಾವಯವಮತಿಚಿತ್ರಂ ।
ಉಪಮಾನೇನ ಪ್ರಾಕೃತ-
ಮತಿಶೀತೇ ರಮ್ಯತಾವಿಷ್ಕಾರೇ ॥೪॥

ದಿವ್ಯಸ್ಫೂರ್ತಿಬಲಾದ್ಯೋ
ಸ ವಿಶ್ವರೂಪಂ ವಿಚಿತ್ರಮಂಗೋಪಾಂಗಂ ।
ನವರಸಭಾವವ್ಯಂಜನ
ಚತುರಃ ಶಿಲ್ಪೀ ಸಮರ್ಚನಾರ್ಥೇ ಕೃತವಾನ್ ॥೫॥

ಶೂನ್ಯೋಪಾಸನಕುಶಲಾ
ವಿರಲಾಲೋಕೇ ಯತ್ರಸ್ತತ್ರ ಸ್ತತ್ಪ್ರೀತ್ಯರ್ಥೇ ॥
ಕುರುತೇ ರೂಪಂ ಶಿಲ್ಪೀ
ನಿರಾಕೃತೇರ್ಬ್ರಹ್ಮಣಃ ಸತ್ಯಸ್ಯ ॥೬॥

ಕಶ್ಚಿದ್ದೇವೋ ಬ್ರಹ್ಮಚಾರೀ ವ್ರತೀಸ್ಯಾತ್
ಕಶ್ಚಿತ್ ಪತ್ನೀರಾಜಮಾನಃ ಪ್ರಸಿದ್ಧಃ ॥
ಕಶ್ಚಿದ್ ಯೋಧಾ ಸದ್ಗುರುಃ ಸತ್ ಪಿತಾ ಸ್ಯಾತ್
ಶಿಷ್ಯೋದ್ಧಾರೇ ಸರ್ವದೇವಾಃ ಸುಲಗ್ನಾಃ ॥೭॥

ದಿವ್ಯೋ ಮಾನವ್ಯೋ ದಾ-
ನವ್ಯೋ ಭಕ್ತೋ ಸ್ವಕಾರ್ಯಸಿದ್ಧ್ಯರ್ಥೇ ವಾ ॥
ಬ್ರಹ್ಮೇಂದ್ರರುದ್ರವಿಷ್ಣೂನ್
ಯಜತೇ ಕಾಯೇನ ಮಾನಸೇನ ಚ ವಚಸಾ ॥೮॥

ಅವಲಂಬತೇ ಹಿ ಭಕ್ತೇಃ
ಶ್ರದ್ಧಾಯಾಃ ಶುದ್ಧಿಪೂರ್ಣತಾಂ ಭಕ್ತಸ್ಯ ॥
ಇಷ್ಟಸ್ಯ ಸತಃ ಸಿದ್ಧಿರ್
ಮಾನಸಶಾಸ್ತ್ರೀಯ ಬೋಧಸಿದ್ಧಮಿದಂ ಸ್ಯಾತ್ ॥೯॥

ಆಗಮವಿಪಿನ ಮಯೂರ್ಯೋ
ದೇವ್ಯಸ್ತಾವತ್ ತ್ರಿಲೋಕವಂದ್ಯಾ ದುಷ್ಟಾನ್ ॥
ಘ್ನಂತಿ ಸುಶಿಕ್ಷಣಫಲದಾಃ
ಸದಯಾಃ ಸರ್ವತ್ರ ಭಕ್ತಿಗಮ್ಯಾ ಭುವನೇ ॥೧೦॥

II

ಅಹಿಂಸಯಾ ಕೃತಾ ಪೂಜಾ ಧ್ಯಾನಯುಕ್ತಾ ಮನೀಷಿಣಾಂ
ಇಷ್ಟಪ್ರದಾ ತದ್ವಿರುದ್ಧಾ ಹಂತಿ ಪೂಜಕಮಂತತಃ ॥೧॥
ಪ್ರಿಯಂ ನ ಹಿತಮಶ್ನೋತಿ ಪರಹಿಂಸಾ ಪರಾಯಣಃ
ದೇಹಸ್ವಾರ್ಥೀ ತಿರಸ್ಕೃತ್ಯ ಧರ್ಮಾಯುಃ ಸ ವಿಮೂಢಧೀಃ ॥೨॥

ಧರ್ಮೋ ಋತಂ ಸತ್ಯಮುಖಂ ಜ್ಞಾನಾಜ್ಞಾನವಿವೇಕದೃಕ್
ಸುಕ್ರಮೋಽಂತೇ ದುರ್ವಿಧಾನಾದ್ವಿನಶ್ಯತಿ ಚ ದುಷ್ಕ್ರಮಃ ॥೩॥
ಶಿಷ್ಟಾನಾಂ ದೈನಿಕಾಚಾರೇಷ್ವಗ್ರಂ ಸುಜನ ತರ್ಪಣಂ
ಅನಂತರಂ ಚಾರ್ಚನಂ ಚ ದಿವ್ಯಚಿಂತನಮಗ್ನತಾ ॥೪॥
ಅಂತಃಶುಚಿಃ ಸ್ಯಾತ್ ಪ್ರಥಮಾ ದ್ವಿತೀಯಾ ಕರ್ಮಶುದ್ಧತಾ
ಸತ್ಕರ್ಮಣ್ಯನುರಾಗಸ್ಯ ಪ್ರೇರಕಂ ಧ್ಯಾನಮರ್ಚನಂ ॥೫॥
ಸುಶಿಲ್ಪಿಕೃತ ಮೂರ್ತಿಃ ಸ್ಯಾತ್ ಸ್ವಾಕಾರೇಣೇಂಗಿತೇನ ಚ
ವಿಭೂತಿರ್ ದೇವದೇವಸ್ಯ ಸಾ ಶ್ರದ್ಧಾದಾರ್ಢ್ಯಕಾರಿಕಾ ॥೬॥
ಶ್ರದ್ಧಾಮೂಲಂ ಸರ್ವಕರ್ಮ ಬಾಲ್ಯಾನ್ನಾಸ್ತ್ಯವಲಂಬನಂ
ಸದೃಶಂ ತಸ್ಯ ತಿತಉಸ್ ತತ್ಪಾವಯತಿ ಶೇಮುಷೀ ॥೭॥
ಬುದ್ಧಿಃ ಕರ್ಮಾನುಸಾರಿತ್ವಾದ್ದುಷ್ಟ-ಶಿಷ್ಟ ಪ್ರಕಾರಿಕಾ
ಸುಕೃತೀ ಸಹವಾಸೇನ ಸಂಬುದ್ಧಿಂ ಲಭತೇ ನರಃ ॥೮॥
ಸಾ ಪ್ರಾರ್ಥನಾ ಚಾಗ್ರಗಣ್ಯಾ ಪೂಜಂತೇ ಗೃಹಮೇಧಿನಾಂ
ಗೃಹೇಷು ಧ್ಯಾನ ಯೋಗೇನ ಶಿಲ್ಪಿಕಲ್ಪಿತ ವಿಗ್ರಹಂ ॥೯॥
ಅದ್ಭುತಂ ಶಿಲ್ಪಚಾತುರ್ಯಂ ಶಿಲ್ಪೀ ಬ್ರಹ್ಮಾ ಚತುರ್ಮುಖಃ
ಆಗಮಾನಾಂ ಪುರಾಣಾ[illegible]ತಾತ್ಪರ್ಯಗ್ರಹಣೇ ಪಟುಃ ॥೧೦॥
ಆಪಾತತೋಽಶ್ಲೀಲಮೂರ್ತಿರಂತತಃ ಶುದ್ಧದೈವತಂ
ಭಕ್ತ ಬುದ್ಧಿಪರೀಕ್ಷಾರ್ಥಂ ದೃಷ್ಟೃಭಿಃ ಕಲ್ಪಿತಂ ಪುರಾ ॥೧೧॥
ಸತ್ಯೇನ ದೇವಕಾಯಶ್ಚ ಸೂರ್ಯಜ್ಯೋತಿಃ ಸ್ವರೂಪವಾನ್
ಅಮರಾ ನಿರ್ಜರಾ ದೇವಾಸ್ತ್ರಿದಶಾವಿಬುಧಾಃ ಸುರಾಃ ॥೧೨॥
ಮಾನವ್ಯ ಚಿತ್ತ ದೌರ್ಬಲ್ಯ ಪರಿಹಾರಾಯ ಕಲ್ಪಿತಾಃ
ಮೃದಾ ದಾರುವಿಶೇಷೇಣ ಶಿಲಯಾ ದೇವವಿಗ್ರಹಾನ್ ॥೧೩॥
ಲೋಹಪ್ರಭೇದೈಶ್ಚ ತಥಾ ಕುರ್ವಂತಿ ವಿವಿಧಾಕೃತೀನ್
ತಸ್ಮಾತ್ ಪುನಃಪ್ರತಿಷ್ಠಾಂ ಚ ಕುರ್ವಂತಿ ಚ ಪುರೋಹಿತಾಃ ॥೧೪॥
ದೈವೀಕಲಾ ಪೂರಣಾಯ ದೇವಾಗಾರೇಷು ತದ್ವಿಧಾಃ
ಕಾಲೇ ಕಾಲೇ ಯಥಾಶಾಸ್ತ್ರಂ ಪಾವಿತ್ರ್ಯಾವಾಹನಾಯ ಚ ॥೧೫॥
ಪಾವಿತ್ರ್ಯಂ ಸಕಲಂ ಕಾಲಾದ್ ವಿಸ್ಮರಂತಿ ಜನಾ ಯತಃ
ಅನುಸ್ಮರಣಸಿದ್ಧ್ಯರ್ಥಂ ಪುನರಾವಾಹನಂ ತತಃ ॥೧೬॥

ತಾ: ೧-೩-೧೯೮೮
ಶಿರಸಿ (ಉ. ಕ.)

**—ಭಾರದ್ವಾಜ ಶ್ರೀಧರಸ್ಯ**
**ಶಿರೀಷ ಪುರವಾಸಿನಃ**

## ಪ್ರಮಾಣ ಗ್ರಂಥಾವಳಿ


1. ಕಾಮಿಕಾದ್ಯಾಗಮಗಳು—೧೧
2. ಅಗ್ನಿ ಪುರಾಣ
3. ವಿಷ್ಣುಧರ್ಮೋತ್ತರ ಪುರಾಣ
4. ಮಾನಸಾರಶಿಲ್ಪ
5. ಭರತನಾಟ್ಯ ಶಾಸ್ತ್ರ
6. Indian Sulpture—by Stella Kramrisch
7. South Indian Iconography
   by Gopinatha Rao
8. The Art Heritage of India
   by E. B. Havell
9. ಮಯಮತ
10. ಆದಿತ್ಯ ಪುರಾಣ
11. ವಿಷ್ಣು ಪುರಾಣ
12. ಪಾಂಚರಾತ್ರಾಗಮ
13. ಬೃಹತ್ಸಂಹಿತೆ
14. ಲಲಿತೋಪಾಖ್ಯಾನ
15. ಶಿವತತ್ವರತ್ನಾಕರ
16. ಮಲ್ಲಾರಿ ಮಾಹಾತ್ಮ್ಯ
17. ಬಟುಕ ಭೈರವ ಕಲ್ಪ
18. ರೂಪಮಂಡನ
19. ಶ್ರೀತತ್ವನಿಧಿ
20. ಸಕಲಾಗಮಸಾರ ಸಂಗ್ರಹ
21. ಶಿಲ್ಪರತ್ನ
22. ಸಿದ್ಧಾಂತ ಸಾರಾವಳಿ
23. ಬೃಹಸ್ಪತಿ ಶಿಲ್ಪಶಾಸ್ತ್ರ
24. ವಿಶ್ವಕರ್ಮಶಿಲ್ಪ
25. ಮತ್ಸ್ಯಪುರಾಣ

## ಈ ಲೇಖಕರ ಇತರ ಕೃತಿಗಳು

1. ಕಾವ್ಯಸೂತ್ರ (ತ್ರಿಬಹುಮಾನಿತ)
2. ರಾಷ್ಟ್ರಸೂತ್ರ
3. ಜ್ಞಾನಸೂತ್ರ (ಬಹುಮಾನಿತ)
4. ಜೆ. ಎಸ್. ಮಿಲ್ಲನ ಸ್ವಾತಂತ್ರ್ಯ ಮೀಮಾಂಸೆ
5. ಶ್ರೀ ಅರವಿಂದರ
   (1) ಭಾರತೀಯ ರಾಜ್ಯಶಾಸ್ತ್ರದ ಸತ್ವ ಮತ್ತು ಸ್ವರೂಪ
   (2) ಭಾರತೀಯ ವಾಙ್ಮಯ
   (3) ವೇದರಹಸ್ಯ (ಅಚ್ಚಿನಲ್ಲಿ)

   (4–5: ಭಾಷಾಂತರ)
6. ಹೊಸಗನ್ನಡ ಸಾಹಿತ್ಯ ಶೈಲಿ
7. ಭಾನುಮತೀ ಕಲ್ಯಾಣ (ಸಂಪಾದಿತ)
8. ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ
9. ಉತ್ತರ ಕನ್ನಡದ ಪ್ರೇಕ್ಷಣೀಯ ಸ್ಥಳಗಳು
10. ಭಾರತೀಯ ಶಿಲ್ಪಶಾಸ್ತ್ರ
11. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ
12. ಕದಂಬ ವೈಭವ (ಅಚ್ಚಿನಲ್ಲಿರುವ ಪದ್ಯ)
13. ಬನವಾಸಿಯ ಕದಂಬರು
14. ಬತ್ತಲೇಶ್ವರ ರಾಮಾಯಣ (ಮಕ್ಕಳಿಗಾಗಿ)
15. ರಮಣ ಮಾರ್ಗ (ಅಚ್ಚಿನಲ್ಲಿ)
16. ನಾವಿಕನ ಹಾಡು ( ” ) ಬಹುಮಾನಿತ
17. ದಿಙ್ನಾಗನ ಕುಂದಮಾಲೆ [ನಾಟಕ] (ಭಾಷಾಂತರ)
18. ಕವೀಂದ್ರ–ರವೀಂದ್ರ (ಸಮೀಕ್ಷೆ)
19. ಸಂಸ್ಕೃತ ಸುಭಾಷಿತ ಸಂಗ್ರಹ (ಕನ್ನಡ ಭಾಷಾಂತರ ಸಹಿತ)
20. ಮೇಘನಾದ, ಅಮೃತಬಿಂದು, ರಸಯಜ್ಞ (ಬಹುಮಾನಿತ), ಕಿನ್ನರಗೀತ, ಮುತ್ತುರತ್ನ (ಮಕ್ಕಳ ಪದಗಳು), ಕಂಟಕಾರಿ ಮಹಾಕಾವ್ಯ (ವಿಡಂಬನೆ) ಟಿ. ಎಸ್. ಎಲಿಯಟ್, ಬೇಂದ್ರೆ —ಇತ್ಯಾದಿ, ಇತ್ಯಾದಿ.

## ಪ್ರೊ|| ಬಿ. ಎಚ್. ಶ್ರೀಧರರ ಅಭಿಮಾನಿಗಳ
## ಮತ್ತು ಮಹಾದಾನಿಗಳ ಪಟ್ಟಿ

| | | | |
|---|---|---|---|
| 1. | | ತೋಟಗಾರ್ಸ ಸೊಸೈಟಿ, ಶಿರಸಿ | 2,501/- |
| 2. | ಶ್ರೀ | ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ | 2,000/- |
| 3. | ಡಾ|| | ಕೆ. ಶಿವರಾಮ ಕಾರಂತ | 1,000/- |
| 4. | ಶ್ರೀ | ಟಿ. ಕೆ. ಭಟ್ಟ ಮಂಗಳೂರು | 850/- |
| 5. | ಶ್ರೀ | ಎಸ್. ಜಿ. ಭಟ್ಟ, ಬೆಂಗಳೂರು | 500/- |
| 6. | ಶ್ರೀ | ಹೆಗಡೆ ವಕೀಲರು, ಕುಮಟಾ | 250/- |
| 7. | ಶ್ರೀ | ಅರವಿಂದ ನಾಡಕರ್ಣಿ | 251/- |
| 8. | ಡಾ|| | ಎ. ಎನ್. ಪಟವರ್ಧನ | 201/- |
| 9. | ಶ್ರೀ | ವಿ. ಜೆ. ನಾಯ್ಕ, ಅಂಕೋಲಾ | 201/- |
| 10. | „ | ಗುರುಪಾದ ಕೆ. ಹೆಗಡೆ, ಸಾಗರ | 201/- |
| 11. | „ | ಮೆಂಡನ್ ಬಾಂಬೆ | 200/- |
| 12. | „ | ಎಸ್. ಆರ್. ಹೆಗಡೆ ಬಾಂಬೆ | 151/- |
| 13. | „ | ವಿ. ಟಿ. ಹೆಗಡೆ, ಜಾನ್ಮನೆ | 101/- |
| 14. | „ | ಎಸ್. ವಿ. ದೀಕ್ಷಿತ ಸಿದ್ದಾಪುರ | 101/- |
| 15. | „ | ಜಿ. ಎಸ್. ಭಟ್ಟ, ಗುಂಜಗೋಡ | 101/- |
| 16. | „ | ಗೋವಿಂದ ಶಾನಭಾಗ, ಸಿದ್ದಾಪುರ | 101/- |
| 17. | „ | ಡಿ. ಎನ್. ಶಾನಭಾಗ, ಧಾರವಾಡ | 101/- |
| 18. | „ | ಕೆ. ಎಸ್. ಭಡತಿ, ಬಾಂಬೆ | 101/- |
| 19. | „ | ಶ್ರೀನಿವಾಸ ದೇಶಪಾಂಡೆ | 101/- |
| 20 | „ | ಜಿ. ವಿ. ಭಟ್ಟ, ಕಾರವಾರ | 100/- |
| 21. | „ | ರಾ. ಭ. ಹಾಸಣಗಿ | 100/- |
| 22. | „ | ಪಿ. ಜಿ. ಭಟ್ಟ ಹಾಸಣಗಿ | 100/- |
| 23. | „ | ಎಲ್. ಆರ್. ಭಟ್ಟ, ದಾಂಡೇಲಿ | 100/- |
| 24. | „ | ಎಸ್. ಜಿ. ಶಾನಭಾಗ, ಕಡತೋಕಾ | 100/- |
| 25. | „ | ಎಂ. ಎಸ್. ಹೆಗಡೆ | 51/- |
| 26. | „ | ಆರ್. ಟಿ. ಹೆಗಡೆ, ಹೂವಿನಮನೆ | 51/- |
| 27. | „ | ದೇಸಾಯಿ ಗೌಡರು, ಸಿದ್ದಾಪುರ | 51/- |
| 28. | „ | ವಿ. ಎನ್. ಹೆಗಡೆ, ಬೆದೆಹಕ್ಲ | 51/- |
| 29. | „ | ಸಿ. ಟಿ. ನಾಗಜ್ಜನವರ ಧಾರವಾಡ | 51/- |
| 30. | „ | ಸಿದ್ದಯ್ಯ ಪುರಾಣಿಕ ಬೆಂಗಳೂರು | 51/- |

31. ಶ್ರೀ ಸುಂದರ ನಾಡಕರ್ಣಿ, ಬಾಂಬೆ 51/-
32. „ ವಿ. ಟಿ. ಹೆಗಡೆ, ಶಿರಸಿ 51/-
33. „ ಸುರೇಂದ್ರ ದಾನಿ, ಹುಬ್ಬಳ್ಳಿ 50/-
34. ಡಾ|| ಎಲ್. ಎಚ್. ಪೈ, ಶಿರಸಿ 50/-
35. ಶ್ರೀ ಆರ್. ಎನ್. ಹೆಗಡೆ, ಗೋರ್ಸಗದ್ದೆ 50/-
36. „ ಶಿವರಾಮ ಹೆಗಡೆ 50/-
37. „ ಕೆರೆಮನೆ ಮಹಾಬಲ ಹೆಗಡೆ 50/-
38. „ ಎಮ್. ಎಚ್. ಸರಾತೆ 50/-
39. „ ಎಸ್. ಜಿ. ಕೊಡ್ಲಕೆರೆ 25/-
40. „ ವಿ. ಆರ್. ಹೆಗಡೆ 25/-
41. „ ಎಂ. ವಿ. ದೋಶೆಟ್ಟಿ, ಸಿದ್ದಾಪುರ 25/-
42. „ ಪ್ರಕಾಶ ಬಿ. ಹೊಸೂರು, ಸಿದ್ದಾಪುರ 25/-
43. „ ಎಂ. ಎಸ್. ಹೆಬ್ಬಾರ 25/-
44. „ ವೆಂಕಟರಮಣ ಹೆಗಡೆ, ಕೊಂಕಣಕೆರೆ 25/-
45. „ ಎಸ್. ಜಿ. ಹೆಗಡೆ, ಶಿರನಾಳ 25/-
46. „ ರಾಮಕೃಷ್ಣ ಹೆಗಡೆ, ಮಳಗಿಮನೆ 25/-
47. ಶ್ರೀಮತಿ ಮಹಾದೇವಿ ಭಟ್ಟ, ಹಾಸಣಗಿ 25/-
48. ಶ್ರೀ ಮಹಾಬಲೇಶ್ವರ ಹೆಗಡೆ, ಗೋರ್ಸಗದ್ದೆ 25/-
49. „ ಎ. ಎನ್. ಹೆಗಡೆ, ಬಿದಿಹಕ್ಕಲು 25/.
50. „ ಜಿ. ಟಿ. ಭಟ್ಟ, ಬೊಮ್ಮನಳ್ಳಿ 25/-
51. ಡಾ|| ಮಾರಿಗೋಳಿ ಉಮ್ಮಚಗಿ 25/-
52. ಶ್ರೀ ಆರ್. ಆರ್. ಹೆಗಡೆ, ಶೀಗೆಮನೆ 25/-
53. „ ಆರ್. ಎಸ್. ಹೆಗಡೆ, ಕಂಪ್ಲಿ 25/-
54. „ ವಿ. ಆರ್. ಪರಮಾನಂದ; ಯಲ್ಲಾಪುರ 25/-
55. „ ಡಿ. ಎ. ಹೆಗಡೆ, ಬೆಳಗಾಂವ 25/-
56. „ ದೇವರು ಹೆಗಡೆ, ಶಿರಸಿ 25/-
57. „ ಜಿ. ವಿ. ಭಟ್ಟ, ಹಾಸಣಗಿ 20/-
58. „ ಎಸ್. ಜಿ ಹೆಗಡೆ 20/-
59. „ ವಿ. ಆರ್. ಹೆಗಡೆ 20/-
60. „ ನೆಬ್ಬೂರು 15/-

—ಇತ್ಯಾದಿ ಮಹನೀಯರಿಗೆಲ್ಲ ರಂಗಸಂಗ ಹಾಗೂ ಕಲಾಸಂಗದ ಕೃತಜ್ಞತೆಗಳು.

[illegible] 150/-

# : ಉಪಕ್ರಮಣಿಕೆ :

# ತಿದ್ದುಪಡಿ

| ಪುಟ | ಸಾಲು | ಅಶುದ್ಧ | ಶುದ್ಧ |
|---|---|---|---|
| i | 20 | ಹಿಮಜಲಂ | ಹಿಮಜಲೈಃ |
| ii | 4 | ಪ್ರುಭೋ | ಪ್ರಭೋ |
| ii | 6 | ಮೃದಂಗಕಾಹಲಾ | ಮೃದಂಗಕಾಹಲಕಲಾ |
| ii | 8 | ಗೃಹಾಣಾ ಪ್ರುಭೋ | ಗೃಹಾಣ ಪ್ರಭೋ |
| iv | 2 | ಯತಸ್ತತ್ಸ್ತತ | ಯತಸ್ತತಃ ತತ್ಪ್ರೀತ್ಯರ್ಥೇ |
| iv | 16 | ಸಿದ್ಧಿಮಿದಂ | ಸಿದ್ಧಮಿದಂ |
| iv | 24 | ಧರ್ಮರಾಯಃ | ಧರ್ಮಂ ಯಃ |
| v | 11 | ಕರ್ಮಾನುಸಾಂತ್ವಾತ್ | ಕರ್ಮಾನುಸಾರಿತ್ವಾತ್ |
| v | 14 | ಗೃಹೇಮೇ | ಗೃಹೇಷು |
| vi | 9 | ಮಬುಮತ | ಮಯಮತ |
| vi | 22 | ಸಾಶಾವಳಿ | ಸಾಂಣಾವಳಿ |
| vii | 3 | ಚಾನಸೂತ್ರ | ಜ್ಞಾನಸೂತ್ರ |
| vii | 24 | ಅದ್ಭುತಬಿಂದು | ಅಮೃತಬಿಂದು |
| 3 | 1 | ಸಾಕುರ | ಸಾಕಾರ |
| 5 | 5 | ಕ್ರಿಯತೇ | ವರ್ತತೇ |
| 13 | 1 | ಪೀಠಸ್ಥವಾಗಿರಬಹುದು | ಪೀಠಸ್ಥವಾಗಿಯೂ ಇರಬಹುದು |
| 14 | 28 | ಆಮುಖ | ಅಮುಖ್ಯ |
| 17 | 19 | ಬ್ರಹ್ಮೆ | ಬ್ರಹ್ಮ |
| 19 | 9 | ಗದೆಗಳನ್ನೂ | ಗದೆಗಳನ್ನು |
| 19 | 15 | ಕಾಣಿಸುತ್ತಷೆ | ಕಾಣಿಸುತ್ತವೆ |
| 19 | 27 | ವಿರಾಸನ | ವೀರಾಸನ |
| 33 | 11 | ಒಂದರ | ಒಂದೊಂದರ |
| 39 | 3 | ಲಂಧ್ಯವಾಸಿನಿ | ವಿಂಧ್ಯವಾಸಿನಿ |
| 39 | 13 | ಯೋಗೇಶ್ವರ | ಯೋಗೇಶ್ವರಿ |
| 39 | 27 | ದೇವಿಶಕ್ತಿ | ದೇವೀಶಕ್ತಿ |
| 39 | 31 | ದೈತ್ಯದಾಶಿನಿ | ದೈತ್ಯನಾಶಿನಿ |
| 42 | 2 | ಕಮಲಧಾರಣಿ | ಕಮಲಧಾರಿಣಿ |
| 46 | 12 | ಮುನ್ನೆಡ | ಮುನ್ನೆರಡು |
| 56 | 16 | ಚೈವಾಪ್ಯುರಂಫತೀ | ಚೈವಾಪ್ಯರುಂಧತೀ |
| 62 | 21 | ಮುಂತಾದ | ಮುಂತಾಗಿ |
| 65 | 13 | ಲಿಂಗಳು | ಲಿಂಗಗಳು |

# ಉಪಕ್ರಮ

1. ದ್ರವಿಡ, ದ್ರಾವಿಡ=ಕೀಳು ಕ್ಷತ್ರಿಯರು; ವೃಷಭಸ್ವಾಮಿ ಪೌತ್ರರು; ದಕ್ಷಿಣಭಾರತದ ಒಂದು ಜಿಲ್ಲೆಯವರು; ಆಂಧ್ರ-ಕರ್ನಾಟಕ-ಗುರ್ಜರ-ತ್ರೈಲಂಗ-ಮಹಾರಾಷ್ಟ್ರರು; ಕೃಷ್ಣಪುತ್ರ; ಒಬ್ಬ ಗ್ರಂಥಕರ್ತೃ; ವೈಯಾಕರಣರದೊಂದು ವರ್ಗ; ಒಂದು ರಾಗಿಣಿಯ ಹೆಸರು; ಒಂದು ಉಪನಿಷತ್ತು; ದ್ರಾವಿಡ ಕುಲ; ಪೂರ್ವೋಕ್ತ ಪಂಚದ್ರಾವಿಡ ಕುಲಗಳು ಹಾಗೂ ಪಂಚ ದ್ರಾವಿಡ ಭಾಷೆಗಳು; ಸಸ್ಯವಿಶೇಷ; ಸಣ್ಣ ಜಾತಿಯ ಏಲಕ್ಕಿ ಎಂಬ ೧೫ ಅರ್ಥಗಳು ದ್ರಮಿಡ ಅಥವಾ ತಮಿಳ ಎಂಬ ಶಬ್ದಕ್ಕಿದೆ. ಆಧುನಿಕರು ಕುಲ ವಾಚಕವಾದಾಗ ದ್ರವಿಡರನ್ನು Mediterranean People ಭೂಮಧ್ಯ ಸಾಮುದ್ರಿಕರು ಎಂದು ಹೇಳುವುದುಂಟು. ಶ್ರೀ ಅರವಿಂದರು ದ್ರಾವಿಡ ಭಾಷೆ-ಕುಲಗಳನ್ನು ಆರ್ಯಜವೆಂದು ಸಪ್ರಮಾಣವಾಗಿ ಸಾಧಿಸಿದ್ದರಿಂದ ಶಿಲ್ಪದಲ್ಲಿ ದ್ರಾವಿಡವು ಗಾಂಧಾರ, ವೇಸರ ಶೈಲಿಗಳ ಸಹೋದರ ಎಂದು ತಿಳಿಯುತ್ತೇವೆ; ಅದು ಆರ್ಯಭಿನ್ನಕುಲೀನವಲ್ಲ.

2. ಗಾಂಧಾರ=ಗಾಂಧಾರಿಗಳ (ಕಾಂದಹಾರಿಗಳ) ಒಬ್ಬ ದೊರೆ; ಸಪ್ತ ಸ್ವರಗಳಲ್ಲಿ ಮೂರನೆಯದು; ಒಬ್ಬ ವಿದ್ಯಾದೇವತೆ; ಒಂದು ಜಾತಿಯ ನೊಣ; ಶಿಲ್ಪದಲ್ಲಿ ಔತ್ತರೇಯ ಪ್ರದೇಶದ ಒಂದು ಶೈಲಿ; ಗಂಧರ=ವಿಶ್ವಾವಸು, ವಾಯುಕೇಶ; ದಿವ್ಯ ಜಲವಾಯುಪ್ರದೇಶ; ಗಂಧರ್ವನು ಸೋಮಪಾಲಕನು, ಸೋಮವಿಜ್ಞಾನಿ, ಸೋಮೌಷಧನಿರ್ಮಾಪಕ ಅಥವಾ ಸ್ವತಃ ಸೋಮ (ಚಂದ್ರ ಯಾ ದಿವ್ಯೌಷಧ); ಯಮಯಮಿಗಳೆಂಬ ಪ್ರಥಮ ಮಾನವದ್ವಯದ ತಂದೆ; ಗಂಧರ್ವರು ವರುಣಸೇವಕರು (ಅಪ್ಸರೆಯರು ಸೋಮಸೇವಿಕೆಯರು); ನಕ್ಷತ್ರಗತಿನಿಯಾಮಕರು; ದಿವ್ಯಗಾಯಕರು; ಪ್ರಜಾಪತಿಪುತ್ರರು; ದೇವರ್ಷಿ ಪುರೋಹಿತರು; (ಪ್ರಜಾಪತಿ=ಬ್ರಹ್ಮ=ಕಶ್ಯಪ) ಮುನಿ; ೧೪ನೆಯ ಕಲ್ಪ; ಭಾರತದ ಒಂಭತ್ತು ಖಂಡಗಳಲ್ಲಿ ಒಂದು; ಶಿಲ್ಪದಲ್ಲಿ ಗಾಂಧಾರವು ವೇಸರ ದ್ರಾವಿಡಗಳಿಂದ ಬೇರೆಯಾದ ಶೈಲಿ.

3. ವೇಸರ=ಗಾಂಧಾರ ಕುದುರೆಯಾದಾಗ ವೇಸರವು ಹೇಸರಕತ್ತೆ. ಶಿಲ್ಪದಲ್ಲಿ ಗಾಂಧಾರ-ದ್ರಾವಿಡಮಧ್ಯವರ್ತಿ, ಉಭಯಲಕ್ಷಣಗಳನ್ನು ತೋರಿಸಲರ್ಹತೆಯುಳ್ಳದ್ದು. ಒರಿಸ್ಸದಲ್ಲಿ ೪ನೆಯದೆಂದು ಹೇಳಬಹುದಾದ ನಾಗರಶೈಲಿ ರೂಢ.

4. ದ್ರಾವಿಡೇತರ ಶೈಲಿಯಲ್ಲಿ ಗರ್ಭಗುಡಿಗೆ ಶಿಖರವೇ ಪ್ರಧಾನವು. ಬೌದ್ಧರ ಗಾಂಧಾರವು ಕುಸುರುಗೆಲಸಕ್ಕೇ ಮೀಸಲು. ವೇಸರವು ಶಿಖರ ಪ್ರಧಾನ (ವಿಮಾನಪ್ರಧಾನ); ಅದಕ್ಕೆ ದ್ರಾವಿಡದ ಶಿಖರರಹಿತ ದ್ವಾರಗೋಪುರಗಳಿಲ್ಲ. ಗಾಂಧಾರವನ್ನು ಬೌದ್ಧಶಿಲ್ಪವೆಂದೂ ಎನ್ನಬಹುದು; ದ್ರಾವಿಡವನ್ನು ದಾಕ್ಷಿಣಾತ್ಯ ಶಿಲ್ಪವೆಂದೂ ಹೇಳಬಹುದು; ವೇಸರ ಸಂಮಿಶ್ರ, ಪರಿವರ್ತನೀಯ, ಕಲೈಕೋದ್ದೇಶಬದ್ಧ; ಕದಂಬಾದಿ ರಾಷ್ಟ್ರಕೂಟ ಹೊಯ್ಸಳಾಂತ ಕರ್ಣಾಟಕೀಯವು ವೇಸರ ಅಥವಾ ನಾಗರ; ಈ ಶಿಖರಗಳಲ್ಲಿ ವೈವಿಧ್ಯವಿದೆ.

5. ಇವೆಲ್ಲಾ ಗಣ್ಯವಾಗಿ ಸೌಧರಚನಾ ಶೈಲಿಗಳಾದುದರಿಂದ ಭಿನ್ನವಾಗಿವೆ. ಇವು ವಾಸ್ತುಶಿಲ್ಪಗಳು. ಗರ್ಭಗುಡಿಯು ಯಜ್ಞವೇದಿಕೆಯ ಪರ್ಯಾಯವು. (ಸು. ಕ್ರಿ. ಶ. ೪ನೆಯ ಶತಮಾನದಲ್ಲಿ ಆರಂಭ) ಗರ್ಭಗುಡಿಯು ಈ ರೂಪಗಳನ್ನು ಬ್ರಹ್ಮಾದಿಸ್ಥಾನಗಳ ಮೂಲಕ ರಚನಾಯೋಜನೆಯಲ್ಲಿ ಅದು ತೋರಿಸುತ್ತದೆ. ದೇವತಾಮೂರ್ತಿಗಳ ಆಕೃತಿಗಳು, ಆಯುಧಗಳು ಮತ್ತು ವಾಹನಗಳು ಮಾತ್ರ ಸರ್ವಭಾರತಸಾಧಾರಣ. ಲಿಂಗವು ನಿರಾಕಾರ ಸೂಚಕ, ಮೂರ್ತಿಯು ಸಾಕಾರ ಸೂಚಕ. ಪೀಠಗಳಲ್ಲಿ ಚತುರ್ಭುಜಾಕೃತಿಯವು ನಾಗರ; ಅಷ್ಟಪಟ್ಟಿಯಾಕೃತಿಯವು ದ್ರಾವಿಡ; ವೃತ್ತಾಕೃತಿಯವು ವೇಸರ; ಧಾರಾಪೀಠವು ಸರ್ವಸಾಧಾರಣ. ಉಪವಿಭಾಗಸಮೇತವಾಗಿ ಎಲ್ಲ ಪೀಠಜಾತಿಗಳ ಸಂಖ್ಯೆಯು ಒಟ್ಟು ೧[illegible]—ಚತುರ್ಭುಜದಿಂದ ಷೋಡಶಭುಜದವರೆಗೆ ಇವು ಅಪರಿವರ್ತನೀಯ. ಮೂರ್ತಿಗಳ ಅಭಯ–ವರದಹಸ್ತಾದಿಗಳೂ ಹಾಗೇ ಏಕೈಕ ಮಾದರಿಯವುಗಳು. ಚಿನ್ಮುದ್ರಾ-ಧ್ಯಾನಮುದ್ರಾದಿಗಳೂ ತದ್ವದಪರಿವರ್ತನೀಯ. ಆಯಾ ದೇವತೆಗಳ ವಾಹನ-ಆಯುಧಾದಿಗಳೂ ಪರ್ಯಾಯರಹಿತ. ಕಿರೀಟಗಳ ವೈವಿಧ್ಯವು ವೇಸರಸೂಚಕವಾದರೂ ಸರ್ವಸಾಧಾರಣ; ವೈಯಕ್ತಿಕ ಶಿಲ್ಪಿ ಇವುಗಳ ರಚನೆಯ ವೈವಿಧ್ಯದ ಯೋಜನೆಯ ಔಚಿತ್ಯ ನಿರ್ಣಯದಲ್ಲಿ ಸ್ವತಂತ್ರನಾಗಿ ತೋರುತ್ತಾನೆ; ಅಲಂಕಾರ ನಿರ್ಮಾಣದಲ್ಲೂ ಹಾಗೇ. ಮೂಲತಃ ಅಷ್ಟದಿಕ್ಪಾಲಕರೂ ತ್ರಿಮೂರ್ತಿಗಳೂ ಸಪತ್ನೀಕರಾಗಿ ಸುಸಿಜ್ಜಿತಸ್ವರೂಪವುಳ್ಳವರು; ಅವರ ಆಭರಣಗಳು ಭಿನ್ನವಾಗಬಲ್ಲವು. ಇಂದ್ರಾದಿಗಳ ಬಗೆಗಿನ ಯಜ್ಞಕ್ಕೆ ಪರ್ಯಾಯವಾಗಿ ಕ್ರಿ. ಪೂ. ೪ನೆಯ ಶತಮಾನದಲ್ಲಿ ತ್ರಿಮೂರ್ತಿಗಳು ಮುಖ್ಯರೂ, ಇಂದ್ರಾದಿಗಳು ದೇವಸ್ಥಾನದ ಕಾವಲುಗಾರರೂ ಆದರು. ದೇವತೆಗಳಲ್ಲಿ ತ್ರಿಮೂರ್ತಿಗಳು ಸಪತ್ನೀಕರಾಗಿ ಪ್ರಧಾನ ಆದರು. ಸೃಷ್ಟಿ-ಸ್ಥಿತಿ-ಲಯಕರ್ತರಾದ ತ್ರಿಮೂರ್ತಿಗಳು ಅವರವರ ಕ್ಷೇತ್ರಗಳಲ್ಲಿ ಏಕೈಕ ವೀರರು; ಅವರ ಪತ್ನಿಯರು ಅವರ

ಸಾಕಾರ ಶಕ್ತಿಗಳು; ಈ ಮಹಾದೇವತ್ರಯದಲ್ಲಿ ಸದಾ ಸಹಕಾರವೇ ಗಣ್ಯ ಮತ್ತು ಅತ್ಯಂತಿಕ. ದೇವತೆಗಳಾದ ಅವರೂ ಅವಿಚ್ಛಿನ್ನಾಕಾರರು, ನಿತ್ಯ ಯೌವನಯುಕ್ತರು ಮತ್ತು ಅನಿಮಿಷರು ಹಾಗೂ ಸತ್ವವಿಭೂತಿಪ್ರಧಾನರು; ಅಲ್ಲದೆ ಮೃತ್ಕಾಯ, ದಾರುಕಾಯ, ಅಶ್ಮಕಾಯ ಹಾಗೂ ಲೋಹಕಾಯಗಳ ನ್ನುಳ್ಳವರು. ಲಿಂಗ (ಸಾಲಿಗ್ರಾಮಾದಿ) ರೂಪಗಳಲ್ಲಿ ಲಿಂಗಭೇದವಿಲ್ಲ.* ರೂಢಿಬಲ ದಿಂದ ಶಿವ-ಬ್ರಹ್ಮರಿಗೆ ಲಿಂಗವನ್ನೂ, ವಿಷ್ಣುವಿಗೆ ಸಾಲಿಗ್ರಾಮವನ್ನೂ ಮೀಸಲಿಡ ಲಾಗಿದೆ. ಆದರೆ ಪ್ರಾಚೀನ ಕಾಲದಲ್ಲಿ ಸರ್ಜನಸೂಚಕತೆಯ ಪೀಠಸ್ಥಿತಿ ಇಲ್ಲ.† ಲಿಂಗಗಳು ಮೇಲ್ಮುಖ (ಊರ್ಧ್ವಮುಖ) ಆಗಿರುತ್ತವೆ. ಸರ್ವದೇವತೆಗಳೂ ಊರ್ಧ್ವರೇತಸರಲ್ಲದೆ ಅದಿವ್ಯರಂತೆ ಅಧೋರೇತಸರಲ್ಲ. ಅವರ ಸಂತತಿ ಹೆಚ್ಚಾಗಿ ಮನಃಸಂಕಲ್ಪರೇತೋಜಾತ. ರೇತಃ ಕಾಮಃ ಕ್ರಿಯಾಶಕ್ತಿರಿತ್ಯನರ್ಥಾಂತರಂ; ಪೃಷೋದರೂಪಂ. ಅವತಾರದ ಉದ್ದೇಶವು ಭಗವದ್ಗೀತೆಯಲ್ಲಿ ಹೇಳಿದ ಭಯ ವನ್ನು ತಪ್ಪಿಸುವುದು—"ಉತ್ಸೀದೇಯುರಿಮೇಲೋಕಾಃ" "ಧರ್ಮಸಂಸ್ಥಾಪ ನಾರ್ಥಾಯ"; ಮಾನವತೆಯ ದೈವೀಕರಣ—("The aim of life is always better life morally") ಅದರಿಂದಲೇ ಮಾನಸಾರ ಮಹರ್ಷಿಯು ಮನಸ್ಸಿನ ಅವ್ಯಗ್ರತೆಯ ಯಾ ಕೇಂದ್ರೀಕರಣದ ಸಲುವಾಗಿ ಸಾಧಕರಿಗೆ (Spiritual Aspirants) ಶಿಲ್ಪಾಕಾರವು ಅಗತ್ಯವೆಂದದ್ದು ಸಮರ್ಥನೀಯ. ಬುದ್ಧ್ಯತೀತ ಆದಿಕಾರಣವನ್ನು ಗ್ರಹಿಸಲು ಬೇಕಾದ ಬುದ್ಧಿಸ್ವರೂಪವನ್ನು ರೂಪಿಸಿಕೊಳ್ಳುವುದೇ ಉಪಾಸನಾದಿ ಸಾಧನಗಳ ಉದ್ದೇಶವು. ಪ್ರತಿಯೊಂದೂ ಇಲ್ಲಿ ಅಸೀಮ ಸತ್ಯದ ಸಂಕೇತ. ಇದಕ್ಕೆ ವೇದವೇ ನಿದರ್ಶನವಾಗಿದೆ. ಅದು ಆದಿಕಾರಣದ ಬಹುತ್ವವನ್ನು ಖಂಡಿಸಿದೆ, ಆದರೆ ದುರ್ಬಲಾತ್ಮರ ಮೇಲಿನ ಕರುಣೆಯಿಂದ ಜ್ಞಾನಯುಕ್ತ ಭಕ್ತಿಗೆ ಗುರಿಯನ್ನಾಗಿ ತಿಳಿದು ಕೊಳ್ಳಲು ದೇವತಾನಾಮರೂಪಗಳನ್ನು ಆದಿಕಾರಣಕ್ಕೆ ಹೇಳಿದೆಯಲ್ಲವೇ? "ಸರ್ವಕಾರಣಮೀಶ್ವರಂ" (The source or cause of all kinds of energies is the Supreme One)

6. ಶಿಲ್ಪ = ರಂಗುರಂಗಾಗಿ ಮಾಡುವುದು, ಬಣ್ಣಬಣ್ಣದ ನೋಟ, ಅಲಂಕರಣ, ಆಭರಣ, ಕಲಾಕೃತಿ ("ಕಲಾಸಂಕಲನ ಪ್ರಜ್ಞಾ ವಿದ್ಯಾಃ ಶಿಲ್ಪಾದಿ ಕರ್ಮಸು"), ಮಾನವನ ಕೈಕೆಲಸ, ಮಾನವನಿರ್ಮಿತ ಕುಶಲಕರ್ಮ.

---

* ಅವು ಸ್ತ್ರೀ-ಪುರುಷದೇವತೆಗಳಿಬ್ಬರಿಗೂ ಸಂಕೇತವಾಗಿವೆ.

† ಪೀಠವು ಸ್ತ್ರೀಯೋನಿಯಲ್ಲ, ಲಿಂಗವು ಪುರುಷಜನನೇಂದ್ರಿಯವಲ್ಲ; ಅದು ನಿಜವಾಗಿದ್ದರೆ ಸ್ತ್ರೀ ದೇವತೆಯನ್ನೇಕೆ ಪುಂಜನನೇಂದ್ರಿಯ ರೂಪದ ಪೀಠದಲ್ಲಿ ಪ್ರತಿಷ್ಠಾಪಿಸಲಿಲ್ಲ? ಲಿಂಗವನ್ನು ಏಕೆ ತಲೆ ಕೆಳಗೆ ಮಾಡಿ ಪೀಠದಲ್ಲಿ ಪ್ರತಿಷ್ಠೆ ಮಾಡಲಿಲ್ಲ?

ಗುಡಿಗಾರಿಕೆ, ಬಡಿಗಕಲೆ, ವಾಸ್ತುಶಿಲ್ಪ, ಸುವರ್ಣಶಿಲ್ಪ, ಕಮ್ಮಾರಿಕೆ, ನಟನೆ, ನರ್ತನ, ಸಂಗೀತ, ವೈದ್ಯಕೀಯ, ಕವಿತಾನಿರ್ಮಾಣ ಮುಂತಾದ ಬಾಹ್ಯ ಕಲೆಗಳಲ್ಲದೆ, ಮುತ್ತು ಕೊಡುವುದು, ಆಲಿಂಗನ, ಹಾವಭಾವಾದಿಪ್ರದರ್ಶನ ಮುಂತಾದ ಗುಪ್ತಕಲೆಗಳೂ "ಶಿಲ್ಪಗಳು". ಪುಂಸ್ತ್ರೀ ವಿಗ್ರಹಗಳ ಭಂಗಿಗಳು ಬೇರೆಯಾಗಿರುವುದು ಹೆಚ್ಚು. "ಶಿಲ್ಪಸರ್ವಸ್ವಸಂಗ್ರಹ" ಎಂಬುದು ಒಂದು ಪ್ರಸಿದ್ಧ ಶಿಲ್ಪಶಾಸ್ತ್ರಗ್ರಂಥ; ಹಾಗೇ ಶಿಲ್ಪಾರ್ಥ ಸಾರವೂ. ಶಿಲ್ಪಿ = Professional Architect or Sculptor. √ಶಿಲ್ = ಶಿಲತಿ = ಹೆಕ್ಕು, ಸಂಕಲಿಸು. ಅದೇ ಮೇರೆಗೆ ಮೂರ್ತ = ಸಾಕಾರ, ಸಕ್ರಿಯ; ಒಂದು ನಿರ್ದಿಷ್ಟ ಆಕೃತಿಯುಳ್ಳ ಪದಾರ್ಥ; ಜಾತವಾದ ಅವಯವಿ. ಪೃಥಿವಿ, ಅಪ್, ತೇಜಸ್ಸು, ವಾಯುಗಳು ಮೂರ್ತದ್ರವ್ಯಗಳು; ಗಡಿಮಿತಿಗಳಿರುವ ವಸ್ತುಗಳು. ರೂಪವೆಂದರೆ ಆಕೃತಿ ಹಾಗೂ ಬಣ್ಣ; ನಿರ್ಮೂರ್ತಕ್ಕಿವುಗಳಿಲ್ಲ; ರೂಪ = ಗುಣ; ಪ್ರತಿರೂಪ; ದನಕರು; ಧ್ವನಿ ಯಾ ವರ್ಣ. ಆಕಾರಯೋಜಕ ವಿನ್ಯಾಸಕಾರ ಇತ್ಯಾದಿ. ಶಿಲ್ಪಾಜೀವನು ಶಿಲ್ಪಿಯಾದರೆ, ರೂಪಾಜೀವೆಯು ಸೂಳೆ. ಕ್ರಿಯಾವತ್ತ್ವಂ ಮೂರ್ತತ್ವಂ; ಸಾಕಾರವು ನಿರಾಕಾರದ ಕಾರ್ಯಸಾಧನ.

7. ಶಿಲ್ಪದಲ್ಲಿ ಅವಯವವು ರೂಪ ಯಾ ಅಲಂಕಾರ. ಮೂರ್ತಿ ಜೀವಂತವಾಗಿ ತೋರಬೇಕಾದರೆ ಅದರ ಕಣ್ಣು-ಬಾಯಿಗಳ ಭಾವಾವಿಷ್ಕಾರವು ಭಾರತದಲ್ಲಿ ಬಹುಮುಖ್ಯ; ಕೈಕಾಲುಗಳ ಭಂಗಿಗಳೂ ಹಾಗೇ. ಬಡೋದೆಯ ವಸ್ತುಸಂಗ್ರಹಾಲಯದಲ್ಲಿ ನವರಸಗಳನ್ನು ಮುಖಾದಿಗಳ ಮೂಲಕ ಮೂಡಿಸುವ ಭಿತ್ತಿಚಿತ್ರಗಳಿವೆ. ಮುದ್ರೆಗಳು ಅಂತರ್ಭಾವ ವ್ಯಂಜಕಗಳು: ಅವುಗಳಲ್ಲಿ ಕಣ್ಣು-ತುಟಿಗಳು ಮುಖ್ಯ. "ಮೂರ್ತೀ ರಸಾತ್ಮಿಕಾ ಶಿಲ್ಪಾಕೃತಿಃ". ರಸವಿಲ್ಲದಲ್ಲಿ (ರಸಪ್ರೇರಕತೆ ಇಲ್ಲದಲ್ಲಿ) ಕಲಾತ್ವವೇ ಇಲ್ಲ. ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ, ಶಾಂತಿಗಳು ನವರಸಗಳು. ವಾಜಸನೇಯಿಸಂಹಿತೆಯಲ್ಲಿ 'ಶಿಲ್ಪ' ಶಬ್ದವು ಮೊದಲು ಪ್ರಯುಕ್ತವಾದುದು. ಶಿಲ್ಪಶಾಸ್ತ್ರವೆಂಬುದು ಕಾವ್ಯಶಾಸ್ತ್ರವಿದ್ದಂತೆ ಶಿಲ್ಪವಿದ್ಯಾವಿವರಣೆಯಾಗಿರುತ್ತದೆ.

8. ಉತ್ತರ ಭಾರತದಲ್ಲಿ ದೇವರು ದೊಡ್ಡವನು; ಆದರೆ ಸಾಮಾನ್ಯವಾಗಿ ದೇವಸ್ಥಾನ ಸಣ್ಣದು. ದಕ್ಷಿಣದಲ್ಲಾದರೋ ದೇವರೂ ದೊಡ್ಡವನು, ದೇವಸ್ಥಾನವೂ ದೊಡ್ಡದು. ಶ್ರೀ ಅರವಿಂದರು ಪಾಂಡಿಚೇರಿಯಲ್ಲಿ ಕಂಡ "ಋತಂಬೃಹತ್" ಎಂಬ ದಿವ್ಯ ಸಾಕ್ಷಾತ್ಕಾರಕ್ಕಿವು ಸಂಕೇತ. ಈ ಬೃಹದಾಕಾರದ ಹಾಗೂ

ಕುಸುರುಗೆಲಸದ ಕಲಾಪ್ರೇರಣೆಯು ಖಂಡಿತವಾಗಿಯೂ ಅವರ ದರ್ಶನಕ್ಕೆ ಪ್ರೇರಣೆ ಕೊಟ್ಟಿರಬೇಕೆನ್ನಿಸುತ್ತದೆ. ''ಮೂರ್ತಿಶಿಲ್ಪ'' ಎಂದರೆ ಏನೆಂಬುದನ್ನು ಜಗತ್ತು ಇಲ್ಲಿಯೇ ನೋಡಬೇಕು; ದೇವಾಲಯದ ಬೃಹದ್ ಗಾತ್ರವು ಕಾಂಚಿಯಿಂದ ಬನವಾಸಿಯ ಮಧುಕೇಶ್ವರ ದೇವಾಲಯದವರೆಗೂ ಎದ್ದುಕಾಣುತ್ತದೆ. ದೇವರ ಲಿಂಗವು ಪಟ್ಟದಕಲ್ಲಿನಲ್ಲೂ, ಬನವಾಸಿಯಲ್ಲೂ ಕಣ್ಣೆದುರೆದ್ದು ನಿಲ್ಲುತ್ತದೆ. ಹೆನ್ರಿಫೋರ್ಡ್, ರಾಕ್‌ಫೆಲ್ಲರುಗಳನ್ನು ಮೀರಿಸಿದ ತಿರುಪತಿಯ ತಿಮ್ಮಪ್ಪನು ಅಮೇರಿಕೆಯಲ್ಲಿ ಶಾಖೆಯನ್ನು ತೆರೆಯುತ್ತಾನೆ! ಯಕ್ಷಗಾನ ಆಟಗಳ ವೇಷ-ಭೂಷಣ, ಆಯುಧ, ಕಥಾವಸ್ತು, ನೃತ್ಯ, ಸಂಗೀತಾದಿಗಳಿಗೆ ಮೂಲಾದರ್ಶವಾಗಿದೆ ಮೂರ್ತಿಶಿಲ್ಪ. ಈ ಆದರ್ಶಗಳ ವಿಕಾರಗಳೀಗ ಯಕ್ಷರಂಗದಲ್ಲಿ ಅಧಿಕವಾಗುತ್ತಿವೆ. ಇದು ತಪ್ಪಬೇಕು.

9. ಸಾಕಾರೋಪಾಸನೆಯ ವಿಕೃತತೆಯನ್ನು ದೆವ್ವ-ಭೂತಗಳ, ಹರಕೆ-ಹಾಡಿಗಳ, ಬಲಿ-ವಧೆಗಳ ರೂಢಿಯಲ್ಲಿ ಕಾಣಬಹುದು. ಇದು ನಿಂದ್ಯ—ತಾಮಸಿಕವಾದುದರಿಂದ. ಆದರೆ 'ಮೆಸ್ಮೆರಿಜಂ'ಗತವಾದ ಮನಃಶಾಸ್ತ್ರದಂತೆ ಗುರೂಕ್ತ ಅಥವಾ ಬಲಿಷ್ಠ. ರೂಢಿಬದ್ಧ ದೇವತಾಕೃತಿ–ನಿರಾಕೃತಿ ಚಿಹ್ನಗಳ ಅಳತೆಯಾವಾಗಲೂ ಶಾಸ್ತ್ರಸಿದ್ಧವಾಗಿದ್ದರೆ ಮಾತ್ರ ಸಫಲ ಎಂಬುದು ಗೀತೋಕ್ತ (''ಯಃ ಶಾಸ್ತ್ರವಿಧಿಮುತ್ಸೃಜ್ಯ ~~ಕ್ರಿಯಾತೇ~~ ಕಾಮಕಾರತಃ'' ಇತ್ಯಾದಿ). ಆದುದರಿಂದ ಭಾರತೀಯ ಬುದ್ಧ, ಜಿನ, ಶಿವ, ವಿಷ್ಣು ಹಾಗೂ ಅವರ ಪತ್ನಿಯರನ್ನು ನಾವು ಎಲ್ಲಿ ಹೋದರೂ ಸುಲಭವಾಗಿ ಗುರುತಿಸಲು ಅನುಕೂಲವಾದ ಶಾಸ್ತ್ರಲಕ್ಷಣಗಳನ್ನು ಶಿಲ್ಪಶಾಸ್ತ್ರವು ತಿಳಿಸುತ್ತದೆ. ಇದು ಭಾರತೀಯ ಭಾವೈಕ್ಯದ ಶಿಲಾಲಿಪಿ; ಲಿಂಗವು ಸಮಾನ ಗೌರವದ ಭಾವೈಕ್ಯ ಶಿಲಾಲೇಖ.

10. ದಿ. ಸುರೇಂದ್ರನಾಥ ದಾಸಗುಪ್ತರು ಹೇಳಿದ ಪೌರಾಣಿಕ ಕ್ರಾಂತಿಯ ವಿಚಾರವನ್ನೂ ಉತ್ತರ ಭಾರತದಲ್ಲಿ ದೊರೆತ **ಮೊದಲ ದೇವಾಲಯದ ಅವಶೇಷದ ಕಾಲವನ್ನೂ** ಮಾನಸಾರ ಮಹರ್ಷಿಯ ಶಿಲ್ಪವ್ಯಾಖ್ಯೆಯನ್ನೂ ದಿ. ಸ್ಟೆಲ್ಲಾ ಕ್ರಾಂರಿಸ್ಕ್ ಬರೆದ ''Indian Architecture and Sculpture'' ಎಂಬ ಗ್ರಂಥವನ್ನೂ ದಿ. ಗೋಪೀನಾಥರಾಯರ The South Indian Iconography', ಎಂಬ ಉದ್ಗ್ರಂಥವನ್ನೂ, ಶ್ರೀ ಅರವಿಂದರ ''The Secret of the Veda'' ಎಂಬ ಮಾರ್ಮಿಕ ಹೆಬ್ಬೊತ್ತಗೆಯನ್ನೂ ಓದಿ ಜೀರ್ಣಿಸಿ, ರಕ್ತಗತಮಾಡಿಕೊಂಡು ಅನಂತರ ಇತರ ಪುರಾಣೋಕ್ತಿಗಳನ್ನೂ

ಇತರ ಶಿಲ್ಪಶಾಸ್ತ್ರಗಳನ್ನೂ ಅಳೆದು ನೋಡಿ, "God made man on his own image but Man made God on his own images" ಎಂಬ ಮಹಾತ್ಮಾ ಗಾಂಧಿದರ್ಶನವನ್ನು ಈ ಗ್ರಂಥಕ್ಕೆ ಹಿನ್ನೆಲೆಯನ್ನಾಗಿ ತೆಗೆದುಕೊಳ್ಳಲಾಗಿದೆ. ಮಹಾಭಾರತ-ರಾಮಾಯಣಗಳಂತೂ ಅವಿಸ್ಮರಣೀಯ. ಅರ್ಜುನನ ಸ್ಥಂಡಿಲೋಪಾಸನೆ, ರಾಮನ ಆದಿತ್ಯಹೃದಯಜಪ ಎಂಬಿವು ಮೂರ್ತಿಗಳ ಅರ್ಚನೆ ಹಾಗೂ ಧ್ಯಾನಗಳಿಗೆ ಮಹೋದಾರಣೆಗಳಾಗಿವೆ. ಆದರೆ ಈಯೆಲ್ಲಾ "ಏಕೋಽಹಂ ಬಹುಸ್ಯಾಂ ಪ್ರಜಾಯೇಯ" ಎಂಬುದರ ಎದುರಿಗೆ ಅರ್ಚಕನು ವೇದಾರ್ಥಾನುಸಾರವಾಗಿ "ಬಹುರಹಂ ರೂಪೇಷು ನಾಮಸು ಚ ಏಕ ಏವೋಽಹಂ ಪಾರಮಾರ್ಥಿಕತಯಾ" ಎಂಬ ಮಾತನ್ನು ಮರೆಯದಿರಬೇಕು : ಇಲ್ಲವಾದರೆ ಅವನು ಭೂತಸರ್ಪಪಿಶಾಚಾದಿಗಳ ಪೂಜೆಗಿಳಿದು ಅಧಃಪಾತ ಹೊಂದದಿರನು.

"ಏಕಂ ಸದ್ವಿಪ್ರಾ ಬಹುಧಾ ವದಂತಿ
ಅಗ್ನಿಂ ಯಮಂ ಮಾತರಿಶ್ವಾನಮಾಹುಃ........"
"ಸರ್ವಂ ಖಲ್ವಿದಂ ಬ್ರಹ್ಮ; ತಜ್ಜಲಾನಿತಿ ಶಾಂತ ಉಪಾಸೀತ"
"ಸದೇವಸೋಮ್ಯೇದಮಗ್ರೇ ಆಸೀತ್
ಏಕಮೇವಾದ್ವಿತೀಯಂ ಬ್ರಹ್ಮ"
"ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ"
"ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚಭವ್ಯಂ"

11. ಆಗಮ = ಪರಂಪರಾಗತ ವಿದ್ಯೆ; ಬ್ರಾಹ್ಮಣ ಗ್ರಂಥಗಳು, ಸಾಂಪ್ರದಾಯಿಕ ಪವಿತ್ರ ಗ್ರಂಥ; ಶಿವ-ಶಕ್ತಿಯರ ಯೌಗಿಕ ಪೂಜಾ ವಿಧಾನ, ಪೂಜಾತಂತ್ರ; ಆನುಬಂಧಿಕ ಪಥ್ಯ ಎಂಬೀ ಅರ್ಥಗಳಲ್ಲಿ ಪ್ರಸ್ತುತವಾದುದು ಪೂಜಾವಿಧಾನವೆಂಬುದು. ೬೪ ಆಗಮಗಳು (ತಂತ್ರಗಳು) ಇದ್ದ ಪ್ರತೀತಿಯಿದ್ದರೂ ಉಪಲಬ್ಧ ಸಾಂದರ್ಭಿಕ ತಂತ್ರಗಳು ಯಾ ಆಗಮಗಳು ೨೮. ಇವೇ ನಮ್ಮ ಪರಂಪರಾಗತ ಶಿಲ್ಪಶಾಸ್ತ್ರಗಳ ಆಧಾರಗಳು. ಆಗಮಗಳು ಪುರಾಣಗಳ ಮಾತಾಪಿತರು.

12. ಮೂರ್ತಿಶಿಲ್ಪಗಳ ಮೂಲ ಹೆಚ್ಚಾಗಿ ಪೌರಾಣಿಕ; ಮೂರ್ತಿಗಳು ಏಕಮೇವಾದ್ವಿತೀಯ ಸತ್ಯದ ಸಾಂದರ್ಭಿಕ ಅವತಾರಗಳು (DESCENT OF THE DIVINE). "ಧರ್ಮ ಸಂಸ್ಥಾಪನಾರ್ಥಾಯ" ಎಂಬುದು ಅವತಾರ

ಕಲ್ಪನೆಯ ಬೀಜವು. ಆಸುರೀ ಸಂಪನ್ನಾಶವೇ ವಿಷ್ಣು-ಶಿವಾದಿಗಳ ಹಾಗೂ ಅವರ ಪತ್ನಿಯರ ಮತ್ತು ಗಣಗಳ ಅವತಾರದ ಉದ್ದೇಶವಾಗಿದೆ. ಆಸುರಿಯು ತಮಸ್ಸು, ಅಜ್ಞಾನ, ಭೌತಮಹತ್ವಾಕಾಂಕ್ಷೆಯಿಂದ ಹಿಂಸೆಗಿಳಿವ ದುರಹಂಕಾರ. ಅದೇ ಪಾಪ, ಅಧರ್ಮ, ಲೋಕಹಿತವಿರುದ್ಧವಾದ ಆಚಾರ. ರುದ್ರ-ವಿಷ್ಣುಗಳಿಬ್ಬರೂ ದೈತ್ಯಸಂಹಾರಕರು, ಅಸಾಧುಹಂತಾರರು.

13. ವಿಗ್ರಹ, ಮೂರ್ತಿ, ಬೇರ ಎಂದರೆ ಒಂದೇ. ಅದು ಧರ್ಮವೀರರ ಮಹಾವಿಕ್ರಮಗಳ ಸ್ಮಾರಕ ಸಂಕೇತ. "ರಾಮಾದಿವತ್ ಪ್ರವರ್ತಿತವ್ಯಂ ನ ತು ರಾವಣಾದಿವತ್" ಎಂಬುದು ವಿಗ್ರಹಾರಾಧನೆಯು ಕಲಿಸುವ ಪಾಠ. ಈ ಉದ್ದೇಶವಿಲ್ಲದ ವಿಗ್ರಹಾರಾಧನೆ ಪೂರ್ಣ ಸಫಲವೆನ್ನಲು ಬಾರದು. ಪ್ರತೀಕ ಪೂಜೆಯು ಸಾಧಕನ ಐಕಾಗ್ರ್ಯವನ್ನಾಧರಿಸಿರುವುದರಿಂದ ಮತ್ತು ಅಹಂಕಾರ ತ್ಯಾಗಕ್ಕೆ ಬದ್ಧವಾಗಿರುವುದರಿಂದ ಅದನ್ನು ಉಪಾಸನೆ, ಭಕ್ತಿಯೋಗ ಎಂದೆಲ್ಲಾ ಹೇಳಿದರೂ ಅದು ಯಜ್ಞದ ಉದ್ದೇಶವನ್ನೇ ಉಳ್ಳದ್ದಾಗಿದೆ. ಯಜ್ಞವು ಸ್ವಸಮರ್ಪಣೆ.

14. ಮೂರ್ತಿಗಳ ನಿಲುವುಗಳು : ಅಕಂಪಿತ, ಕಂಪಿತ, ಧೂತ, ವಿಧೂತ, ಪರಿವಾಹಿತ, ಆಧೂತ, ಅವಧೂತ, ಆಚಿತ, ನಿಕುಂಚಿತ, ಪರಾವೃತ್ತ, ಉತ್‍ಕ್ಷಿಪ್ತ, ಅಧೋಗತ, ಲಲಿತ ಎಂಬ ೧೩ ಶಿರೋಭಂಗಿಗಳು. ಭ್ರುಕುಟೀ ಮುಖಗಳು ೭; ವಿಭಾವ, ಅನುಭಾವ, ಸ್ಥಾಯಿ, ಸಂಚಾರಿ ಎಂಬೀ ನಾಲ್ಕು ಅವಸ್ಥಾ ದೃಷ್ಟಿಭೇದಗಳು; ಕಣ್‍ಗುಡ್ಡೆಯ ನಮೂನೆಗಳು ಒಂಭತ್ತು; ಮೂಗಿನ ಮುಖಗಳು ೬; ನಿಃಶ್ವಾಸಭೇದಗಳು ೯; ತುಟಿಗಳ ಮುದ್ರೆಗಳು ೬; ಗಲ್ಲದ ನಮೂನೆಗಳು ೭; ಕುತ್ತಿಗೆಯ ನಿಲುವುಗಳು ೯; ಕ್ರುದ್ಧ ಮುಖಮುದ್ರೆಗಳು ೬; ಹಸ್ತಭಂಗಿಗಳು ಮುಖ್ಯವಾಗಿ ೨; ಅವುಗಳಲ್ಲದೆ ಪತಾಕ, ತ್ರಿಪತಾಕ, ಕರ್ತರೀಮುಖ, ಅರ್ಧಚಂದ್ರ, ಉತ್ಕರಾಲ ಮತ್ತು ಶುಕತುಂಡ, ಮುಷ್ಟಿ, ಶಿಖರ, ಕಪಿತ್ಥ, ಖೇಟಕಾಮುಖ, ಸೂಚ್ಯಾಸ್ಯ, ಪದ್ಮಕೋಶ, ಅಹಿಶಿರ, ಮೃಗಶೀರ್ಷಕ, ಕಾಂಬೂಲ, ಕಾಲಪದ್ಮ, ಚತುರಭ್ರಮರ, ಹಂಸಾಸ್ಯ, ಹಂಸಪಕ್ಷ, ಸಂದಂಶ, ಮುಕುಲ, ಊರ್ಣನಾಭ, ತಾಮ್ರಚೂಡ–ಎಂಬ ೨೪ ಉಪಭೇದಗಳಿವೆ. ಅಸಂಯುತ ಕರಭಂಗಿಗಳು ೧೩—ಅವಾವುವೆಂದರೆ: ಅಂಜಲಿ, ಕಪೋತ, ಕರ್ಕಟ, ಸ್ವಸ್ತಿಕ, ಕಟಕ, ವರ್ಧಮಾನ, ಅಸಂಗ, ನಿಷಧ, ದೋಲ, ಪುಷ್ಪಪುಟ, ಪ್ರಕರ, ಗಜದಂತ, ಬಹಿಸ್ತಂಭಗಳು. ಎದೆಯ ಆಕೃತಿಗಳು—ಆಭುಗ್ನ, ನರ್ತನ ಇತ್ಯಾದಿ ಐದು. ಹೊಟ್ಟೆ—ದುರತಿಕ್ಷಾಮ,

ಖಂಡ, ಪೂರ್ಣ ಎಂದು ತ್ರಿವಿಧ; ಎಡೆಯ ಮೇಲಿಡುವುದು ಐದು ಬಗೆಯ ಹಸ್ತಮುದ್ರೆಗಳು. ತ್ರಿಭಂಗಿಯಂತೆ ಆಭುಗ್ನವೊಂದು ನರ್ತನಭಂಗಿ—ಮುಗ್ಗುಲು ಗಳ ವರಸೆಗಳು ಐದು. ಹಾಗೆ ತೊಡೆಯ ನಿಲುವುಗಳೂ ಐದು; ಪಾದನ್ಯಾಸ ಗಳು ಅನೇಕ; ಅವುಗಳ ಬಗ್ಗೆ ನಾಟ್ಯಶಾಸ್ತ್ರವನ್ನೋದಬೇಕು. ಏಕೆಂದರೆ, ಶಿಲ್ಪಶಾಸ್ತ್ರದ ವಿಗ್ರಹಗಳ ಭಾವ-ಹಾವಾದಿಗಳಿಗೆ ಅದೇ ಪರಮಾಧಾರ.

15. ಮೇಲೆ ಹೇಳಿದ ಅಂಗೋಪಾಂಗ† ವಿನ್ಯಾಸಗಳು ಅಭಿವ್ಯಕ್ತಗೊಳಿಸು ವುದು ೯ ಸ್ಥಾಯಿಭಾವಗಳನ್ನು, ೧೧ ಸಾತ್ವಿಕ ಭಾವಗಳನ್ನು ಮತ್ತು ೩೩ ಸಂಚಾರಿ ಭಾವಗಳನ್ನು. ದೇವತಾ ಮೂರ್ತಿಗಳಲ್ಲೂ ಉತ್ತಮಾಧಮ ಮಧ್ಯಮ ಅಥವಾ ಸಾತ್ವಿಕ, ತಾಮಸ, ರಾಜಸ ಮೂದರಿಗಳಿವೆ, ಬ್ರಹ್ಮಗುಣ, ವಿಷ್ಣು ಗುಣ, ರುದ್ರಗುಣಗಳುಳ್ಳವುಗಳಾಗಿವೆ. ಕ್ಷುದ್ರದೇವತೆಗಳು, ಮಹಾದೇವತೆಗಳು ಎಂಬ ಭೇದವನ್ನು ಮಾಡಲಾಗಿದೆ. ಈ ಭೇದಗಳೆಲ್ಲಾ ಸಾಂಸ್ಕೃತಿಕ ತಾರತಮ್ಯದಿಂದ ಕಲ್ಪಿತವಾದವುಗಳು. ಆದರೆ ''ರುದ್ರಾಣಾಮಸ್ಮಿ ಶಂಕರಃ'' ಎಂದು ಗೀತೆ ಹೇಳಿರುವುದರಿಂದ ವಿಷ್ಣು-ಶಿವರಲ್ಲಿ ತಾರತಮ್ಯವಿಲ್ಲ. ಶಿವನು ವಿಷ್ಣುವಿನ ಅಕ್ಕನ ಗಂಡ; ಬ್ರಹ್ಮನು ವಿಷ್ಣುವಿನ ಮಗ ಎನ್ನುತ್ತದೆ ಪುರಾಣ. ಶಿವನಿಲ್ಲಿ ರುದ್ರನು.

16. ಮನಃಶಾಸ್ತ್ರದಂತೆ, ಎಷ್ಟು ಜನ ಭಕ್ತರಿದ್ದಾರೋ ಅಷ್ಟು ದೇವತಾಕಲ್ಪನೆಗಳಿವೆ. ಒಬ್ಬೊಬ್ಬ ದೇವತೆಯ ಕಲ್ಪನೆಯೂ ವಿವಿಧ ಜನರಿಗೆ ವಿವಿಧವಾಗಿ ತೋರಬಹುದು. ಆದರೆ ಈ ಅವ್ಯವಸ್ಥೆಯನ್ನು ತಪ್ಪಿಸಲೆಂದು ಶಿಲ್ಪಶಾಸ್ತ್ರಜ್ಞರು ಆ ಕಲ್ಪನೆಗಳನ್ನು ವಿಶಿಷ್ಟ ಲಕ್ಷಣಗಳಿಂದ ಪರಿಸೀಮನ ಗೊಳಿಸಿದ್ದಾರೆ. ಆದರೂ—

"ಗುಡ್ಡ ಗುಡ್ಡ ಸ್ಥಾವರ ಲಿಂಗ
ಅವಕ ಅಭ್ಯಂಗ
ಮಾಡ್ತಾವನ್ನೋ ಹಂಗ''

ಎಂದು ಅಂಬಿಕಾತನಯದತ್ತರು ಹೇಳಿದ್ದು ಸತ್ಯ. ಮೂರ್ತಿಪೂಜಕರಲ್ಲವೆಂಬ ವರಿಗೂ ಪ್ರಾರ್ಥನೆಗೆ ಆಯಾ ಮತಸ್ಥಾಪಕ ವರ್ಣಿಸಿದ ಲಕ್ಷಣಗಳನ್ನುಳ್ಳ

† ಅಂಗಗಳು ಆರು, ಉಪಾಂಗಗಳು ಹನ್ನೊಂದು=೧೭. ಈ ಅಂಗ ಪ್ರತ್ಯಂಗಗಳ ಮೂಲಕ ಭಾವಾಭಿವ್ಯಕ್ತಿಯನ್ನು ಮಾಡುತ್ತಿರುವಂತೆ ಮೂರ್ತಿರಚನೆ ಮಾಡುವುದೇ ಮೂರ್ತಿವಿದ್ಯೆಯು.

ಪ್ರತೀಕವೋ, ಪ್ರತಿಮೆಯೋ, ಸಂಕೇತವೋ, ಚಿಹ್ನವೋ ಮನದಲ್ಲಿ ಇಷ್ಟೇ ಇರುತ್ತದೆ. ಒಂದು ಸಣ್ಣ ಚುಕ್ಕೆ ಕೂಡಾ ಆಕಾರವೇ. ಈ ಅರ್ಥದಲ್ಲಿ ಜಗತ್ತಿನಲ್ಲಿ ಅಮೂರ್ತ್ಯುಪಾಸಕರೇ ಇಲ್ಲ. ಇದ್ದವರು ಜ್ಞಾನಿಗಳು; ಆರ್ತ, ಜಿಜ್ಞಾಸು, ಅರ್ಥಾರ್ಥಿಗಳಲ್ಲ. ಸ್ವಾಮಿ ವಿವೇಕಾನಂದರೆಂದರು : "ಸಾಮಾನ್ಯವಾಗಿ ನಮ್ಮ ಭಕ್ತಿಯು ಪ್ರಯೋಜನೋದ್ದೇಶವುಳ್ಳದ್ದು (utilitarian). ದೇವರು ಸರ್ವಶಕ್ತನಾದುದರಿಂದ ಮತ್ತು ಪೂರ್ಣ ದಯಾಶೀಲನಾದುದರಿಂದ ನಮ್ಮ ದುಃಖಗಳನ್ನು ಪರಿಹರಿಸಿ ಸುಖಗಳನ್ನು ಕೊಡಲಿ ಎಂಬುದು ಹತ್ತು ಸಮುಸ್ತರ ಉದ್ದೇಶ. ಇದು ನಿಜವಾದ ಭಕ್ತಿಯಲ್ಲ, ಆದರೆ ಕ್ಷಮ್ಯ. ಶ್ರೀ ಶಂಕರಾಚಾರ್ಯರೂ ಉಪನಿಷತ್ತುಗಳೂ ವಿವರಿಸಿದಂತೆ ಈ ಉಪಾಸನೆಗಳು ಉತ್ತರೋತ್ತರ ಉದಾತ್ತತರ ಭಾವನೆಗಳನ್ನು ಬೆಳೆಸಿಕೊಳ್ಳಲು ನೆರವಾಗಬಹುದು. "ತಪೋಯಜ್ಞದಾನಾದಿಭಿಃ ಶುದ್ಧ ಬುದ್ಧಿಃ" ಎಂದಂತೆ ಪೂಜೆಗಳ ಉನ್ನತೋನ್ನತತರ ಪ್ರಜ್ಞಾಸ್ತರಗಳ ಸಿದ್ಧಿಯಿಂದ ಸಂಪ್ರಜ್ಞಾತ ಸಮಾಧಿಯ ವಿವಿಧ ಹಂತಗಳನ್ನು ದಾಟಿ ಜನ್ಮಜನ್ಮಾಂತರದಲ್ಲಾದರೂ ಅಸಂಪ್ರಜ್ಞಾತ ಸಮಾಧಿಯೆಂಬ ಪರಾಕಾಷ್ಠೆಯನ್ನು ಜೀವಾತ್ಮನು ತಲುಪಬಹುದು, ಇದೇ ಆರ್ಯಧರ್ಮದ ಮಹತ್ತಮ ಆಶಾವಾದವು.

---

ಟಿಪ್ಪಣಿ : "ಭಕ್ತಾರ್ಥಂ ಸಗುಣೋ ಜಾತೋ ನಿರಾಕಾರೋಽಪಿ ಚಿನ್ಮಯಃ"
"ಚಿನ್ಮಯಸ್ಯಾದ್ವಿತೀಯಸ್ಯ ನಿಷ್ಕಲಸ್ಯಶರೀರಿಣಾಂ
ಉಪಾಸಕಾನಾಂ ಕಾರ್ಯಾರ್ಥಂ ಬ್ರಹ್ಮಣೋ ರೂಪಕಲ್ಪನಾ"
"ಅಹಂಕಾರಾವೃತಂ ವಿಶ್ವಂ ಸಂಬದ್ಧೇನಾನ್ಯತೇ ನ ಹಿ"
"ಆಪ್ತವಕ್ತ್ರಾಗತಂ ಶಾಸ್ತ್ರಂ ಆಗಮಶ್ಚಾಭಿಧೀಯತೇ
ಆಗಮಪ್ರತಿಮಾನಂ ಚ ತತ್ವನಿರ್ಣಾಯಕಂ ಸದಾ"

# ಮೂರ್ತಿಗಳ ತ್ರಿಗುಣಾತ್ಮಕತೆ

ಭಾರತೀಯರ ಪ್ರಕಾರ ಪ್ರತಿಯೊಂದಕ್ಕೂ ಮೂರು ಪ್ರಜ್ಞಾಸ್ತರಗಳ ನೆಲೆಗಳು ಇರುತ್ತವೆ: ಭೌತಿಕ ಅಥವಾ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಎಂದು. ಸ್ಥೂಲವು ಪಾಂಚಭೌತಿಕ; ಸೂಕ್ಷ್ಮವು ಭಾವನೆ ಮತ್ತು ಇಂದ್ರಿಯ ಪ್ರತ್ಯಕ್ಷಗಳ ಒಕ್ಕೂಟದ ಆಕಾರ, ಇವುಗಳ ಆಚೆಗಿನದು ಆತ್ಮಿಕ ನೆಲೆ ಅಥವಾ ಆಧಾರ. ಭಾರತೀಯ ಶಿಲ್ಪದಲ್ಲಿ ಭೌತಿಕ ನೈಜತೆಯು ಅಮುಖ್ಯವಾದುದು. ಆತ್ಮವನ್ನು (Spirit) ಭಾವನೆಗಳೂ ಪ್ರತ್ಯಕ್ಷಾನುಭವಗಳೂ ಬಲವಾಗಿ ಸೆಳೆದಿಡುತ್ತವೆ. ಆ ಸೆಳೆತದಿಂದ ಆತ್ಮಕ್ಕೆ ಆಕೃತಿಯುಂಟಾದಂತೆ ಭಾಸವಾಗುತ್ತದೆ. ಆ ಆಕೃತಿಯ ಕಲಾತ್ಮಕ ಹಾಗೂ ಸ್ಥೂಲದ್ರವ್ಯಸ್ವರೂಪವನ್ನು ತಾಳಿರುವ ಭಾವವು ನೋಟಕನಲ್ಲಿ ಮೂಡುತ್ತದೆ. ಏಕೆಂದರೆ, ಅದು ಸ್ಥೂಲದ್ರವ್ಯ ನಿರ್ಮಿತವಾದದ್ದು. ಈ ಆಕಾರವು ಅದರಿಂದ ಹಿಂಜಬಲ್ಲ ರೂಪವಾಗಿ ತೋರಿ ಮೂರ್ತಿಗಳೆನ್ನಿಸಿಕೊಂಡು ಪೂಜಾರ್ಹವಾಗುತ್ತದೆ. ಮೂರ್ತವು ಮೂರ್ತಿ, "ಸರ್ವವಿಭುದ್ರವ್ಯಸಂಯೋಗಿ" ಮತ್ತು ಕ್ರಿಯಾಪ್ರೇರಕ: ಪಾರ್ಥಿವ ಮೂರ್ತಿಯೊಂದೇ ಈ ಲಕ್ಷಣಕ್ಕೆ ಬದ್ಧ. ಮಣ್ಣು, ಕಲ್ಲು, ಮರ ಮತ್ತು ಲೋಹಗಳು ಕಾರ್ಯಜ ಮತ್ತು ಕಾರ್ಯೋಪಾದಾನವಾದವುಗಳು. ಅವುಗಳಿಂದ ಮೂರ್ತಿ, ವಿಗ್ರಹ, ಬೇರ ಎಂಬ ಅರ್ಥದ ಪುರ ಅಥವಾ ದೇಹ ಯಾ ಆಕೃತಿ ಶಿಲ್ಪದಲ್ಲಿ ಮೂಡುತ್ತದೆ. "ಪುರಿ ಶೇತೇ ಇತಿ ಪುರುಷಃ". ಆದುದರಿಂದ ಜೀವತ್ ಪದಾರ್ಥದ ಭಾವನೆಗಳನ್ನೂ ಸಂವೇದನೆಗಳನ್ನೂ ವಿಗ್ರಹವು ಸೂಚಿಸುತ್ತದೆ. ಅವು ತಾಮಸ ರಾಜಸ ಅಥವಾ ಸಾತ್ವಿಕ; ಆದರೆ ಅತಿಮಾನುಷ ಶಕ್ತಿಸಂಪನ್ನ; ಆ ಶಕ್ತಿಯು ತಾರತಮ್ಯವುಳ್ಳದ್ದು; ಅಥವಾ ಅಸಾಧಾರಣ ಕಾರ್ಯಸಾಮರ್ಥ್ಯವುಳ್ಳದ್ದು. ಆದುದರಿಂದ ಅವು ಮಾನುಷಪೂಜ್ಯ, ಮನುಷ್ಯರಿಂದ ಆರಾಧ್ಯ ಹಾಗೂ ಪ್ರಾರ್ಥನೀಯ. ದೇವ, ದಾನವ, ಗಂಧರ್ವ, ಯಕ್ಷ, ರಾಕ್ಷಸ, ಪನ್ನಗಗಳು ಅಥವಾ ವಿದ್ಯಾಧರ, ಅಪ್ಸರಸ್, ರಕ್ಷಸ್, ಗಂಧರ್ವ, ಕಿನ್ನರಗಳು ಪೂಜಕನ ತ್ರಿಗುಣಾನುಗುಣವಾಗಿ ಪೂಜಿಸಲ್ಪಡುತ್ತಾ ಬಂದಿವೆ.

## ವಿಗ್ರಹಗಳ ವಿನ್ಯಾಸಗಳು

ವಿಗ್ರಹಗಳಿಗೆ ಶಿರ, ಪಾಣಿ, ಉರ (ಎದೆ), ಪಾರ್ಶ್ವ, ಕಟಿ, ಅಂಘ್ರಿ (ಪಾದ) ಎಂಬಿವು ಅಂಗಗಳು; ಹುಬ್ಬು, ದೃಷ್ಟಿ, ಕಣ್ಗೊಂಬೆ, ಮೂಗು, ತುಟಿ, ಗಲ್ಲ, ಬಾಯಿ, ಕುತ್ತಿಗೆ, ಹಸ್ತ, ತೊಡೆ ಮತ್ತು ಬೆರಳುಗಳು ಎಂಬಿವು ಉಪಾಂಗಗಳು. ಅವುಗಳ ಭಂಗಿ, ವಿನ್ಯಾಸ, ದಿಕ್ಕುಗಳು ಭಾವಸೂಚಕಗಳು. ಶಿರೋವಿನ್ಯಾಸಗಳು ೧೩; ಭ್ರೂವಿನ್ಯಾಸಗಳು ಏಳು ಬಗೆಯುವುಗಳು: ದೃಷ್ಟಿ ವಿನ್ಯಾಸಗಳು ೩; ಅವು ೩೬ ಭಾವಗಳನ್ನು ಸೂಚಿಸುತ್ತವೆ; ಅವುಗಳಲ್ಲಿ ರಸ ಜನ್ಯವಾದವುಗಳು ಎಂಟು ಯಾ ಒಂಭತ್ತು; ನೇತ್ರತಾರಕೆಯ ವಿನ್ಯಾಸಗಳು ಒಂಭತ್ತು; ಓಷ್ಠಕರ್ಮಗಳು ೧೬; ಗಲ್ಲಗಳ ಕ್ರಿಯೆಗಳು ಏಳು; ಬಾಯಿಯ ವರಸೆಗಳು ೧೬; ಕುತ್ತಿಗೆಯ ವಿನ್ಯಾಸಗಳು ಒಂಭತ್ತು ರೀತಿಗಳವು; ಅಸಂಯುತ ಹಸ್ತಕ್ರಿಯೆಗಳು ೨೪; ಸಂಯುತ ಹಸ್ತಕರ್ಮಚಿತ್ರಣವು ೧೩ ತರಹದವು ಗಳಾಗಿ ವಿಂಗಡಿಸಲ್ಪಟ್ಟಿದೆ—ಉದಾ: ಕಟಕ, ವರ್ಧಮಾನ, ಅಸಂಗ, ನಿಷಧ, ಡೋಲ, ಪುಷ್ಪಪುಟ, ಪ್ರಕರ ಮುಂತಾದವು; ಗಜದಂತ, ಹಸ್ತಿಸ್ತಂಭಗಳು ಉಪವಿನ್ಯಾಸಗಳು. ಉರೋವಿನ್ಯಾಸಗಳು ಪಂಚವಿಧ; ಉದರದವು ತ್ರಿವಿಧ; ಪಾರ್ಶ್ವಕರ್ಮವು ಪಂಚವಿಧ—ಜಂಘಾವಿನ್ಯಾಸಗಳೂ ಅಷ್ಟೇ. ಪಾದ ವಿನ್ಯಾಸಗಳು ಅನೇಕ; ಇವೆಲ್ಲಾ ನೃತ್ಯಶಾಸ್ತ್ರೋಕ್ತ.

## ಉಪಾಸ್ಯಮೂರ್ತಿಗಳು ಅಭಿವ್ಯಕ್ತಿಸಾಧನಗಳು ಮತ್ತು ಇಷ್ಟಪ್ರಾಪಕಗಳು

ವಿಗ್ರಹಗಳಲ್ಲಿ ಅವವುಗಳ ಇಂಗಿತವನ್ನು ಮೂಡಿಸುವವನು ಭಾರತೀಯ ಶಿಲ್ಪಿ. ಜಗತ್ತು ಈಶಕಲ್ಪಿತವಾದರೆ ವಿಗ್ರಹಲೋಕವು ಶಿಲ್ಪಿಕಲ್ಪಿತವಾದುದು. ಉದ್ದಿಷ್ಟಭಾವವನ್ನು ರೂಪಿಸುವುದು, ಧ್ವನಿಸುವಂತೆ ಮಾಡುವುದು ಅವನ ಕೆಲಸ. "God has almost become the pantheistic deity of the Vedantins—ದೇವರು ವೇದಾಂತಿಗಳ ಬಹುದೇವತಾರಾಧನೆಗೆ ಅಥವಾ ಸರ್ವದೇವತಾರಾಧನೆಗೆ ಪಾತ್ರವಾದದ್ದು ಮಾನಸಶಾಸ್ತ್ರೀಯ. "ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ। ತಸ್ಯ ತಸ್ಯಾಚಲಾಂ ಭಕ್ತಿಂ ತಾಮೇವ ವಿದಧಾಮ್ಯಹಂ" ಎಂದಿದೆ ಗೀತೆ (೭ನೆಯ ಅಧ್ಯಾಯದ ೨೧ನೆಯ ಶ್ಲೋಕ).

ಪ್ರಸಿದ್ಧ ದೇವತೆಗಳು: ಬ್ರಹ್ಮನು ಹಂಸವಾಹನನು; ವಿಷ್ಣುವಿನ ನಾಭಿ ಎಂಬ ಕಮಲದಿಂದ ಹುಟ್ಟಿದವನು; ಅದಕ್ಕೂ ಪೂರ್ವದಲ್ಲಿ ಅಂಡಜನು—ಅರ್ಥಾತ್ ಬ್ರಹ್ಮಾಂಡಸ್ವರೂಪದಲ್ಲಿದ್ದ ಶಿವನ ಮಗ. ಅವನ ಹೆಂಡತಿ ಸರಸ್ವತಿ; ಅವಳು ಅವನು ಮಾಡಿದ ಯಜ್ಞದಿಂದ ಜನಿಸಿದವಳು. ಅವನದು ಸತ್ಯ ಲೋಕವು. ಅವನ ಪತ್ನಿಗೆ ಪುತ್ರರಿಲ್ಲ. ಅವನಿಗಿರುವವರು ಸನಕಾದಿ ಮಾನಸ ಪುತ್ರರು. ಅವನು ಸೃಷ್ಟಿಕರ್ತನು. ಅವನಿಗೆ ನಾಲ್ಕು ಮುಖಗಳು. ಹಂಸವು ಅವನ ವಿಶಿಷ್ಟ ಗುರುತು. ಅವನನ್ನು ಆತ್ಮಭೂ (ಸ್ವಯಂಜಾತ) ಎಂದೂ ಹೇಳಲಾಗಿದೆ. ಸರಸ್ವತಿಯು ಸರ್ವಕಲಾಧಿದೇವತೆಯು; ಅವಳು "ವೀಣಾಪಾಣಿ, ಶುಕ್ಲಾಂಬರೆ, ನೂಪುರಧಾರಿಣಿ, ಕಾಂಚೀದಾಮವತಿ, ಕಂಕಣವತಿ, ರತ್ನಹಾರಾಲಂಕೃತೆ, ಕರ್ಣಪೂರವತಿ, ಪುಸ್ತಕಪಾಣಿ".

ಕೌಸ್ತುಭಧಾರಿಯಾದ ಹಾಗೂ ಎದೆಗೂದಲಿನಲ್ಲಿ ಸುಳಿ ಇರುವ ಶ್ರೀವತ್ಸಲಾಂಛನದ ವಿಷ್ಣುವೂ ಸ್ವಯಂಭೂ; ಅವನು ಗರುಡವಾಹನನು. ಶಂಖ, ಚಕ್ರ, ಗದಾ, ಪದ್ಮಗಳನ್ನು ನಾಲ್ಕು ಕೈಗಳಲ್ಲಿ ಹಿಡಿದಿರುವವನು. ಅವನು ಶಾರ್ಙ್ಗಧನುರ್ಧಾರಿ. ಅವನ ಹೆಂಡಿರು ಶ್ರೀದೇವಿ-ಭೂದೇವಿಯರು. ಶ್ರೀಯು ಕಮಲಸ್ಥೆ, ಕಮಲಹಸ್ತೆ; ಶೇಷಶಾಯಿಯಾದಾಗ ವಿಷ್ಣುವಿನ ಪಾದಸೇವೆ ಮಾಡುವವಳು.

ಮನ್ಮಥನು ಕೃಷ್ಣ(ವಿಷ್ಣು) ಪುತ್ರ. ಅವನವು ಐದು ಹೂಬಾಣಗಳು. ಅವನ ಪತ್ನಿಯು ರತಿ. ಈ ದಂಪತಿಗಳು ಶೃಂಗಾರಾಧಿದೇವತೆಗಳು. ಇವರದು ಸಪತ್ನೀಕರಾದ ಬ್ರಹ್ಮ-ವಿಷ್ಣು-ಮಹೇಶ್ವರರ ಸ್ಥಾನಗಳಿಗಿಂತ ಕೆಳಗಿನ ಸ್ಥಾನವು.

ಜಟಾಜೂಟಧರ ಮುಕ್ಕಣ್ಣ ಶಿವನು ಪಾರ್ವತೀಪತಿಯು, ಚಂದ್ರಶೇಖರನು, ತ್ರಿಶೂಲಾಯುಧನು, ಪಿನಾಕಧನುರ್ಧಾರಿ, ವೃಷಭವಾಹನನು; ವೃಷಭವು ಶಿವನ ಹೆಗ್ಗುರುತು; ಹಾಗೇ ತ್ರಿಶೂಲವೂ, ಬಾಲಚಂದ್ರನೂ. ಇವು ಶಿವನ ಮುಖ್ಯ ಲಕ್ಷಣಗಳು. ಕಂಚಿಯ ಏಕಾಮ್ರೇಶ್ವರ ಮೂರ್ತಿಯೊಂದು ನಿದರ್ಶನ; ಸಿದ್ಧಲಿಂಗೇಶ್ವರರು ಗೋಕರ್ಣದ ವೀರಶೈವ ಮಠದ ಹತ್ತಿರ ಲಿಂಗದ ಮೇಲೆ ಕಡೆದಿಟ್ಟ ಶಿವಮೂರ್ತಿ ಇನ್ನೊಂದು ದೃಷ್ಟಾಂತ; ನಟರಾಜನದು ಮತ್ತೊಂದು ಉದಾಹರಣೆ.

ಪಾರ್ವತಿಯು ನಾರಾಯಣಿ. ಆದುದರಿಂದ ವಿಷ್ಣು-ಶಿವರಿಬ್ಬರ ಆಯುಧವನ್ನೂ ಆಕೆ ಬಳಸುತ್ತಾಳೆ. ಸಿಂಹವಾಹನವು ಅವಳ ಹೆಗ್ಗುರುತು; ಅದಕೆ

ಅವಳ ಮೂರ್ತಿಯು ನಿರ್ವಾಹನವಾಗಿಯೂ ಪೀಠಸ್ಥವಾಗಿರಬಹುದು. ಕೃಷ್ಣನ ವಿಶ್ವರೂಪ ಮತ್ತು ಅವಳ ಮಹಿಷಾಸುರಮರ್ದಿನೀತ್ವ ಇವುಗಳಲ್ಲಿ ಆಯುಧ ವೈವಿಧ್ಯ, ಮೂರ್ತಿವೈವಿಧ್ಯ, ಬಾಹುಗಳ ಸಂಖ್ಯೆ ಮತ್ತು ದೈತ್ಯಮರ್ದನಗಳು ಸಾಧಾರಣವಾಗಿರುವದುಂಟು.

ವಿಷ್ಣುವಿನ ಕೃಷ್ಣಾವತಾರದ ವಿಶ್ವರೂಪವನ್ನು ಬಿಟ್ಟರೆ ಮಿಕ್ಕ ೯ ಅವತಾರಗಳು ಸುದೃಶ್ಯ, ಸುಪ್ರಸಿದ್ಧ ಲಕ್ಷಣಗಳನ್ನು ಉಳ್ಳವುಗಳು; ಅರ್ಥಾತ್ ಅಪೂರ್ಣಾವತಾರಗಳು; ಮತ್ಸ್ಯ, ಕೂರ್ಮ, ವರಾಹ, ವಾಮನ-ತ್ರಿವಿಕ್ರಮ, ನರಸಿಂಹ: ರಾಮ, ಪರಶುರಾಮ, ಬುದ್ಧ (ದ್ವಾಪರಕಾಲೀನ) ಮತ್ತು ಕಲ್ಕಿಗಳು ನಿದರ್ಶನಗಳು. ಇವೆಲ್ಲಾ ವಿಷ್ಣುವಿನ ಅಂಶಾವತಾರಗಳು. ಶಿವಾವತಾರಗಳು ಅನೇಕ ಮತ್ತು ಪೂರ್ಣ; ಮೊದಲಿನ ವರ್ಗದವು ತದ್ಭವಗಳಾದರೆ, ಎರಡನೆಯವು ಅಂತ್ಯದಲ್ಲಿ ತತ್ಸಮಗಳು. ಶಿವಗಣಗಳ ಸಂಖ್ಯೆಯೂ ಹೇರಳ ಹಾಗೂ ತ್ರಿಗುಣಗಳಲ್ಲಿ ಯಾವುದಾದರೂ ಒಂದನ್ನು ಸಂದರ್ಭಾನುಸಾರ ಅವುಗಳಲ್ಲಿ ಕಾಣಬಹುದು. ವಿಷ್ಣುವು ಕೇವಲ ಸತ್ವಗುಣಪ್ರಧಾನನೆಂದೂ ಬ್ರಹ್ಮನು ರಜೋಗುಣಪ್ರಧಾನನೆಂದೂ ರುದ್ರನು ತಮೋದೇವತೆಯೆಂದೂ ಹೇಳುವುದು ರೂಢಿಯ ಮಾತಲ್ಲದೆ, ಪೌರಾಣಿಕ ನಿದರ್ಶನಗಳಿಂದ ಸಮರ್ಥನೀಯವಾಗಿಲ್ಲ.

“ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ”

ಎಂಬುದು ಸರ್ವದೇವತಾಸಾಧಾರಣವಾದ ನೀತಿ. ಕ್ಷುದ್ರದೇವತೆಗಳು ಮಾತ್ರ ಈ ಮಾತಿಗೆ ಕೆಲವೊಮ್ಮೆ ಅಪವಾದಗಳಾಗಿ ಕಾಣಿಸುತ್ತವೆ. ದೇವತೆಗಳೆಲ್ಲರೂ ವರದರು, ಇಷ್ಟಾರ್ಥಪ್ರಾಪಕರು.

ವಿಷ್ಣು-ಶಿವರಿಬ್ಬರಿಗೂ ಮಾತಾಪಿತೃಗಳಿಲ್ಲ; ಅವರು ಪರಬ್ರಹ್ಮನ ಮಾನಸಪುತ್ರರು. ಶಿವನ ಹೆಂಡತಿಯರ ಮಕ್ಕಳು ಅಯೋನಿಜರು. ದೇವೀತ್ವದ ಐಕ್ಯವು ದೇವತ್ವದಲ್ಲಿ ಕಂಡುಬರುವುದು ವಿರಳ. ಉದಾ: ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡೆಯರು ಎಂಬ ಸಪ್ತ ಮಾತೃಕೆಯರು. ಇನ್ನು ವಿಷ್ಣುವಿನ ಕೆಲ ಅವತಾರಗಳ ಪತ್ನಿಯರು ಲಕ್ಷ್ಮಿಯ ಅವತಾರಗಳು; ಹಾಗೇ ಶಿವನ ಕೆಲ ಅವತಾರಗಳ ಪತ್ನಿಯರು ಪಾರ್ವತಿಯ ಅವತಾರಗಳು. ಅವರವರ ಗಂಡಂದಿರ ಆಯುಧಗಳು ಅವರವರ ಹೆಂಡಂದಿರಿಗೆ ಲಭ್ಯವಾಗಿರುವ ಸಹಜತೆ ಕೆಲವೆಡೆ ಕಂಡುಬರುತ್ತದೆ.

ವಿಷ್ಣುವಿಗಿಂತ ಹೆಚ್ಚಾಗಿ ಶಿವನ ಹೆಂಡತಿಗೂ ಮಕ್ಕಳಿಗೂ ಈ ಲಕ್ಷಣಗಳು ಹೆಚ್ಚಾಗಿ ಅನ್ವಯಿಸುತ್ತವೆ. ಸೂರ್ಯನು ಶಿವ-ವಿಷ್ಣುಗಳಂತೆ ಮಹಾದೇವತೆ; ಏಕೆಂದರೆ ಅವನು ಕಾರ್ಯಬ್ರಹ್ಮ. ಮಹಾದೇವತೆಗಳ ಮತ್ತು ಅವರ ಪತ್ನಿಯರ ಹಾಗೂ ಮಹಾಪುತ್ರರ ಹೆಸರುಗಳಿಂದಲೇ ದೇವಾಲಯಗಳು ಪ್ರಸಿದ್ಧವಾಗಿವೆ. ಆ ದೇವಾಲಯಗಳಲ್ಲಿ ಇತರ ದೇವತೆಗಳು ಗೌಣ; ಅವುಗಳಿಗೆ ಗರ್ಭಗುಡಿಗಳಲ್ಲಿ ಸ್ಥಾನವಿಲ್ಲ. ದೇವಸ್ಥಾನಗಳೆಲ್ಲಾ ಯಜ್ಞವೇದಿಕೆಯ ಹೊಸ ಪರ್ಯಾಯಗಳೆಂಬುದನ್ನು ಗರ್ಭಗುಡಿಯ ರಚನೆಯಲ್ಲಿ ಕಾಣಬಹುದು. ಅಲ್ಲಿ ಸ್ತ್ರೀಪುರುಷ ದೇವತೆಗಳೆಲ್ಲರೂ ಯೋನಿಯ ಯಾ ಪೀಠದ ಮೇಲೆ ನಿಂತಿರುತ್ತಾರೆ ಅಥವಾ ಕುಳಿತಿರುತ್ತಾರೆ. ಲಿಂಗಗಳು ಸ್ತ್ರೀದೇವತೆ, ಪುರುಷದೇವತೆ ಎಂಬ ಭೇದವಿಲ್ಲದೆ ಪ್ರತಿನಿಧಿಸುವುವಲ್ಲದೆ, ಬ್ರಹ್ಮ-ವಿಷ್ಣು-ಶಿವರನ್ನೂ, ನಿರಾಕಾರ ಪರಬ್ರಹ್ಮವನ್ನೂ ಪ್ರತಿನಿಧಿಸುತ್ತವೆ. ಆದರೆ ಅವುಗಳಿಗೆ ಶಿವಪ್ರಾಧಾನ್ಯವನ್ನು ಹೇಳುವುದು ರೂಢಿ. ಏಕೆಂದರೆ ಲಿಂಗದಂತೆಯೇ ನಿರವಯವಿಯಾದ ಶಾಲಗ್ರಾಮವನ್ನು ವಿಷ್ಣುವಿಗೇ ಮೀಸಲಾಗಿಡುತ್ತಾಬಂದುದರಿಂದ ಮಾತ್ರ. ಶಾಲಗ್ರಾಮದ ಸಮವೃತ್ತವು ವಿಶ್ವಪಥಸೂಚಕವಲ್ಲ; ಲಿಂಗದ ದೀರ್ಘವೃತ್ತಾಕಾರವು ವಿಶ್ವಪಥ ಸೂಚಕ. ಆ ಸೂಚನೆಯು ಪೂರ್ಣವಾಗಿರುವುದು ಚಿತ್ತಾರಿಮಠಗಳಲ್ಲಿರುವ ಬ್ರಹ್ಮನ ಚಲಲಿಂಗದಲ್ಲಿಯೇ. ಒರಳಿನಲ್ಲಿ ಒಳ್ಳುಗಲ್ಲನ್ನು ತಿರುಗಿಸುವಂತೆ ನಾವದನ್ನು ಬೇಕಾದರೆ ತಿರುಗಿಸಬಹುದು.

## ಅಷ್ಟದಿಕ್ಪಾಲಕರು †

ಅಷ್ಟದಿಕ್ಪಾಲಕರಲ್ಲಿ ಪೂರ್ವಾಧಿಪತಿ ಇಂದ್ರ. ಅವನು ಉಚ್ಚೈಃಶ್ರವಸ್ ಎಂಬ ಕುದುರೆಯನ್ನು ಹತ್ತಿರುವವನು. ಅವನ ಪತ್ನಿ ಶಚೀದೇವಿ. ಇಂದ್ರನು ಮೇಘವಾಹನನಾಗಿರುವುದೂ ಉಂಟು. ಅವನ ಆಯುಧವು ವಜ್ರ. ಮಾತಲಿಯು ಅವನ ರಥಕ್ಕೆ ಸಾರಥಿ; ಅವನ ಉದ್ಯಾನವನಕ್ಕೆ ನಂದನವನ ಎಂದು ಹೆಸರು. ವೈಜಯಂತವು ಅವನ ಅರಮನೆಯು. ಜಯಂತನು ಅವನ ಮಗ; ಪಟ್ಟಣವು ಅಮರಾವತಿ. ಇಂದ್ರನು ಗಜಾರೂಢನಾಗಿರುವುದು ಹೆಚ್ಚು. ಆ ಆನೆಯ ಹೆಸರು ಐರಾವತ. ವಿಮಾನವು ವ್ಯೋಮಯಾನಕ್ಕೆ; ಅದರ ಹೆಸರು ಪುಷ್ಪಕ. ಸುಧರ್ಮವೆಂಬ ದೇವಸಭೆಗೆ ಅವನು ಅಧ್ಯಕ್ಷ. ಅವನು ಇತರ ದೇವತೆಗಳೊಡನೆ ಕುಡಿಯುವದು ಅಮೃತವನ್ನು. ದಾರುಕನು ಅವನ

† ವೇದದಲ್ಲಿ ಅಷ್ಟದಿಕ್‌ಪಾಲಕರೇ ಪ್ರಧಾನರು, ಪುರಾಣಾಗಮಾದಿಗಳಲ್ಲಿ ಅವರು ಅಪ್ರಧಾನರಾದರು, ಮುಖ್ಯರು ಅಮುಖ್ಯರಾದರು, ಅಮುಖ್ಯರು ಮುಖ್ಯರಾದರು.

ಸಾರಥ್ಯ ವಹಿಸುವುದೂ ಉಂಟು. ಅವನ ಮಂತ್ರಿಯು ಉಪ್ಪಸ. ಅಶ್ವಿನೀ ಸುತರಿಬ್ಬರೂ ಅವನ ಸ್ವರ್ಗದ ವೈದ್ಯರು. ಘೃತಾಚಿ, ಮೇನಕೆ, ರಂಭೆ, ಉರ್ವಶಿ, ತಿಲೋತ್ತಮೆ, ಸುಕೇಶಿ, ಮಂಜುಘೋಷೆ ಮುಂತಾದ ಅಪ್ಸರೆಯರು ಅವನ ಸಭೆಯ ನರ್ತಕಿಯರು.

ಅಗ್ನಿಯು ಆಗ್ನೇಯದಿಗಧೀಶನು. ರೋಹಿತವು ಅವನ ಕುದುರೆ. ಅವನು ಸರ್ವವನ್ನೂ ಶುದ್ಧ ಮಾಡುವವನು. ಅವನ ಹೆಂಡತಿ ಸ್ವಾಹೆ. ಅವನು ಯಜ್ಞಾಹುತಿ ಭಕ್ಷಕ, ಹವ್ಯಕವ್ಯಗಳನ್ನು ಯಜ್ಞಮುಖೇನ ದೇವತೆಗಳಿಗೂ ಪಿತೃಗಳಿಗೂ ಮುಟ್ಟಿಸುವ ಜ್ವಾಲಾಕೇಶಿ. ಅವನ ವಾಹನವು ಟಗರು.

ದಕ್ಷಿಣಾಧಿಪತಿ ಯಮ. ಪಿತೃಗಳಿಗೆ ಅವನು ವಿಶಿಷ್ಟ ಪಾಲಕ. ಅವನು ಧರ್ಮದ (ನ್ಯಾಯದ) ಅಧೀಶ. ಅವನು ಕಾಲನು ಅರ್ಥಾತ್ ವೇಳೆಯ ಮಾಪಕ. ಅವನ ಆಯುಧವು ದಂಡವು; ಕೋಣವು ಅವನ ವಾಹನವಾಗಿರುವುದು ಹೆಚ್ಚು.

ನಿಋತಿಯು ನೈಋತ್ಯ ದಿಕ್ಕಿನ ಪಾಲಕ. ಅವನು ನರವಾಹನ; ಕುಲದಲ್ಲಿ ಅವನು ರಾಕ್ಷಸ; ಆದರೆ ಗುಣದಲ್ಲಿ ಅವನು ದಿವ್ಯನು. ಆದುದರಿಂದ ಅವನದು ರಾಕ್ಷಸಸೈನ್ಯವು. ಕುಂತವು ಅವನ ಆಯುಧವಾಗಿರುವುದುಂಟು.

ವರುಣನು ದಕ್ಷಿಣದಿಗಧೀಶನು. ಅವನ ಆಯುಧವು ಪಾಶ. ಅವನು ಜಲ ಮತ್ತು ಜಲಚರಗಳ ಅರಸು. ಅವನದು ಯಕ್ಷಸೇನೆ. ಅವನು ಪಾಪಿಗಳ ದಂಡನೆಯ ವಿಶಿಷ್ಟ ಅಧಿಕಾರಿ. ಯಮನು ಕೊಡುವ ಶಿಕ್ಷೆಯನ್ನು ಅಮಲು ಜಾರಿಗೆ ತರುವ ದೂತರ ನಾಯಕ. ಮೊಸಳೆ ಅವನ ವಾಹನವಾಗಿದೆ. ಫಾಶಿಶಿಕ್ಷೆಯು ಅವನ ಕಾಲದಿಂದ ಬಂದದ್ದು.

ವಾಯವ್ಯದ ವಾಯುವು ಜಿಂಕೆಯನ್ನು ವಾಹನವನ್ನಾಗಿ ಮಾಡಿಕೊಂಡವನು. ಅದು ಅವನ ವಿಶಿಷ್ಟ ಲಕ್ಷಣ. ರೂಢಿಯಲ್ಲಿ ದೇವತೆಗಳೆಲ್ಲಾ ಗಾಳಿಗಳು, ಅದೃಶ್ಯಮರುದ್ಗಣಗಳು, ಆದವು ಅಸ್ಪೃಶ್ಯಗಳಲ್ಲ. ಕಲಾಪ್ರತಿಭೆಯು ಅವುಗಳಿಗೆ ರೂಪಗಳನ್ನು ತೊಡಿಸಿತು. ವೇಗವೇ ಅವನ ಪರಮಾಯುಧವಾಗಿರುವುದರಿಂದ ಇತರ ಆಯುಧಗಳು ಗೌಣ. ಎಲ್ಲ ದೇವತೆಗಳಿಗೂ

ಹೆಚ್ಚಾಗಿ ಎರಡಕ್ಕಿಂತ ಹೆಚ್ಚು ತೋಳುಗಳಿರುತ್ತವೆ ಅಥವಾ ಒಂದಕ್ಕಿಂತ ಹೆಚ್ಚು ಮುಖಗಳೂ (ತಲೆಗಳೂ) ಇರುವುದುಂಟು. ಈ ಸಂಖ್ಯಾಧಿಕ್ಯವು ಅವುಗಳ ಅತಿಮಾನವಸತ್ತೆಯ ಸಂಕೇತ.

ಕುಬೇರನು ಯಕ್ಷರ ಹಾಗೂ ಕಿನ್ನರರ ಮತ್ತು ರಾಕ್ಷಸರ ರಾಜನು, ಉತ್ತರದಿಕ್‌ಪಾಲಕನು. ಅವನು ಯಾವಾಗಲೂ ಕುದುರೆಯ ಸವಾರನಾದರೂ ಪುಷ್ಪಕ ವಿಮಾನವು ಅವನ ವ್ಯೋಮಯಾನವು. ಮನುಷ್ಯರ ಮೇಲೂ ಅವನು ಸವಾರಿ ಮಾಡುವದುಂಟು. ಖಡ್ಗಕುಂತಾದ್ಯಾಯುಧಧರನಾದ ಅವನು ಐಶ್ವರ್ಯವಂತ ದೇವತೆ.

ಈಶಾನ್ಯದ ಈಶಾನನು ವೃಷಭವಾಹನ, ಈಶ್ವರನ ಅಂಶಾವತಾರ, ತ್ರಿಶೂಲಾದ್ಯಾಯುಧಧರನು. ಅವನು ಶಿವನ ಅಥವಾ ರುದ್ರನ ಯಾವ ಆಯುಧವನ್ನು ಬೇಕಾದರೂ ಹಿಡಿದಿರಬಹುದು. ವಿಷ್ಣುಲೋಕವು ವೈಕುಂಠವಾದರೆ ಶಿವಲೋಕವು ಕೈಲಾಸವು.

ಆಯಾ ದೇವತೆಯ ಪತ್ನಿ ಅವನವನ ಶಕ್ತಿಯು. ಅವಕ್ಕೆ ಎಲ್ಲರೂ ಅರ್ಧನಾರೀಶ್ವರರಾಗಬೇಕೆಂದಿಲ್ಲ, ಆಗಿಲ್ಲ. ಶಿವನೊಬ್ಬನೇ ಅರ್ಧನಾರೀಶ್ವರನು. ಪತಿಪತ್ನಿಯರಲ್ಲಿ ಅದ್ವೈತಭಾವವಿರುವುದು ಸಾಧಾರಣವು. ಎಲ್ಲ ದೇವತೆಗಳೂ ತಮ್ಮ ಎಲ್ಲ ಕೈಗಳಲ್ಲೂ ಭಿನ್ನಭಿನ್ನ ಆಯುಧಗಳನ್ನು ಹಿಡಿದಿರುತ್ತಾರೆ; ಎಲ್ಲರಿಗೂ ರಥಗಳಿರುತ್ತವೆ. ಆದರೆ ದೇವಾಲಯಗಳಲ್ಲಿ ಅವರು ರಥಾರೂಢರಾಗಿರುವುದಿಲ್ಲ.

ಆದಿತ್ಯರು ಹನ್ನೆರಡಾಗಿದ್ದಾರೆ, ರುದ್ರರು ೧೧ ಆಗಿದ್ದಾರೆ, ಮರುತ್ತುಗಳು ೪೯ ಆಗಿದ್ದಾರೆ ಎಂಬುದು ಅವರವರ ನಾಮರೂಪಭೇದಗಳ ದೆಸೆಯಿಂದ. ಹಾಗೇ ವಸುಗಳು ಅಷ್ಟ, ಋಷಿಗಳು ಸಪ್ತ ಎಂಬುದೂ ಅವರವರ ನಾಮರೂಪಗಳಭೇದದಿಂದ.

---

**ಟಿಪ್ಪಣಿ :** ೧. ಭಾರತದ ಶಿಲ್ಪವನ್ನು ೮ ಪ್ರಸ್ಥಾನಗಳನ್ನಾಗಿ ವಿಂಗಡಿಸುವುದು ಆಧುನಿಕ. ನಾಗರದಿಂದ ೫ ಉಪಪ್ರಸ್ಥಾನಗಳೂ, ವೇಸರದಿಂದ ೩ ಉಪಪ್ರಸ್ಥಾನಗಳೂ ವಿಕಾಸಗೊಂಡವು. ಕರ್ನಾಟಕದಲ್ಲಿ ನಾಗರ-ದ್ರಾವಿಡಗಳಲ್ಲಿ ನಾಗರದ ಕೊನೆಯ ೩ ಉಪಪ್ರಸ್ಥಾನಗಳ ಮತ್ತು ವೇಸರದ ಮೂರೂ ಉಪಪ್ರಸ್ಥಾನಗಳ ಉದಾಹರಣೆಗಳು ದೊರಕುತ್ತವೆ. ನಾಗರ. ಉಪನಾಗರ

ವೇಸರ, ಉಪವೇಸರ, ದ್ರಾವಿಡ, ಉಪದ್ರಾವಿಡ, ಎಂದು ಇವನ್ನು ಕರೆಯಬಹುದು. ಶಾಲಿವಾಹನರೂ, ಕದಂಬರೂ, ಚಾಲುಕ್ಯರೂ, ಹೊಯ್ಸಳರೂ, ನಾಗರೋಪನಾಗರಗಳನ್ನು—ಪಲ್ಲವರೂ, ವಿಜಯನಗರದ ಚಕ್ರವರ್ತಿಗಳೂ, ದ್ರಾವಿಡೋಪದ್ರಾವಿಡಗಳನ್ನೂ ದಕ್ಷಿಣಭಾರತದಲ್ಲಿ ಪ್ರೋತ್ಸಾಹಿಸಿದರು. ಕದಂಬ, ಹೊಯ್ಸಳ, ಚಾಲುಕ್ಯರ ಉಪನಾಗರ ಪದ್ಧತಿಯನ್ನು ಕರ್ನಾಟಕದಲ್ಲಿ ಬಹಳವಾಗಿ ಕಾಣುವುದರಿಂದ ಅದನ್ನು ಕರ್ನಾಟಕ ಶಿಲ್ಪವೆಂದು ಕರೆಯಬಹುದು.

೬. ದೇವತೆಗಳ ಶಕ್ತಿಗಳೇ ದೇವಿಯರು. ಪತಿಗೆ ರೂಪ, ಶೀಲ, ಲಾವಣ್ಯಾದಿಗಳಲ್ಲಿ ತಕ್ಕವಳು ಪತ್ನಿ (ಶಕ್ತಿ). ಈ ಪತಿಪತ್ನಿಯರ ಉದ್ದೇಶಗಳು ಹೆಚ್ಚಾಗಿ ಅನೇಕ ಸಂದರ್ಭಗಳಲ್ಲಿ ಒಂದೇ—ಅಂತ್ಯದಲ್ಲಿ ಸರ್ವಸಂದರ್ಭಗಳಲ್ಲೂ ಒಂದೇ. ದೇವತಾದಂಪತಿಗಳು ಏಕಜೀವ ದೇಹದ್ವಯ ನ್ಯಾಯವನ್ನವಲಂಬಿಸಿರುತ್ತಾರೆ. ಪತಿಗೆ ಪತ್ನಿ ಸದಾ ಸಹವಾಸಿನಿ, ಸಹಚರಿ, ಸಹಕಾರಿಣಿ ಮತ್ತು ಪತಿಯ ಸಾಧೂದ್ದೇಶಗಳೆಲ್ಲವನ್ನೂ ಎತ್ತಿಹಿಡಿದು ಬೆಂಗಾವಲಿಗೆ ನಿಲ್ಲುವವಳು, ವಿಧೇಯಳಾಗಿರುವವಳು. ಈ ದೇವದಂಪತಿಗಳ ಪ್ರಾಧಾನ್ಯ-ಗೌಣತ್ವಗಳೇ ಮಾನವರಿಗೆ ಆದರ್ಶ ಎಂಬುದು ತ್ರಿಕಾಲಾಬಾಧಿತ ಮನೋವೈಜ್ಞಾನಿಕ ಸತ್ಯವು. ಪತಿಯ ವಾಹನ. ಆಯುಧ, ಆಭರಣಗಳಿಗನುಗುಣವಾಗಿ ಸದಾ ದೇವಪತ್ನಿ ಇರುವುದು ಹೆಚ್ಚು. ಅರ್ಥಾತ್ ಪತಿ ರಜೆಯ ಮೇಲಿದ್ದಾಗ ಅವನ ಎಲ್ಲ ಕೆಲಸವನ್ನೂ ಅವಳು ಮಾಡಬಲ್ಲವಳಾಗಿರುತ್ತಾಳೆ. ಹೆಸರಿನಲ್ಲೂ ಬ್ರಹ್ಮ-ಬ್ರಹ್ಮಾಣಿಯರಂತೆ ಸಮನಾಮವುಳ್ಳವರೇ ಬಹಳ. ಮಹಾತ್ಮಾ ಗಾಂಧಿಯವರಂದಂತೆ ವೀರಪತಿಗಳು ಮಡಿದಾಗ ಯಾ ಅವರು ಹೇಳಿದಾಗ ಮಾತ್ರ ವೀರಪತ್ನಿಯರು ಅವರ ಜವಾಬುದಾರಿಯನ್ನು ಯುದ್ಧದಲ್ಲಿ ಹೊರಬೇಕೆಂಬುದೇ ಪತಿ-ಪತ್ನಿಯರ ಸಾಮ್ಯಸೂತ್ರ. ದುಹೇರಿ ಕಾರಭಾರವು ಅವ್ಯಾವಹಾರಿಕವು.

34

# ಉಪನ್ಯಾಸ

## ಪ್ರತಿ ದೇವತಾಮೂರ್ತಿಗಳ ವಿವರಗಳು

೧. ವಿಷ್ಣುವು ಸಾರ್ವದೇವತೆ, ಉತ್ತಮಾಧಮಮಧ್ಯಮ ಎಂಬ ಭೇದಗಳನ್ನುಳ್ಳದ್ದು. ಇದರ ಯೋಗಸ್ಥಾನಕಮೂರ್ತಿಯು ಪೀಠದ ಮೇಲೆ ನಿಂತಿರುತ್ತದೆ; ಹಿಂಗೈಯಲ್ಲಿ ಚಕ್ರವನ್ನೂ ಮುಂಗೈಯಲ್ಲಿ ಅಭಯವರದಮುದ್ರೆಗಳನ್ನೂ ಧರಿಸಿರುವುದಲ್ಲದೆ, ಮುಂದಿನ ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿರುತ್ತದೆ. ಹಿಂದಿನ ಎಡಗೈಯಲ್ಲಿ ಶಂಖವಿರುತ್ತದೆ. ಭೃಗು-ಮಾರ್ಕಂಡೇಯರನ್ನು ಇಲ್ಲವೆ ಭೂದೇವಿ ಮಾರ್ಕಂಡೇಯರನ್ನು ಎಡ ಅಥವಾ ಬಲ ಬದಿಗಳಲ್ಲಿ ನಿಲ್ಲಿಸಿರುವುದೂ ಉಂಟು.

೨. ವಿಷ್ಣುವಿನ ಭೋಗಸ್ಥಾನಕಮೂರ್ತಿಯೂ ಚತುರ್ಭುಜಯುಕ್ತವು. ಅದು ಹಿಂಗೈಗಳೆರಡರಲ್ಲಿ ಚಕ್ರ-ಶಂಖಗಳನ್ನೂ ಮುಂದಿನ ಎಡಗೈಯನ್ನು ಸೊಂಟದ ಮೇಲಿಟ್ಟುಕೊಂಡೂ (ಇದೇ ಕಟಕಭಂಗಿ) ಬಲಬದಿಯಲ್ಲಿ ಶ್ರೀದೇವಿಯು ನೇತಾಡುತ್ತಿರುವ ನಾಲ್ಕು ಕೈಗಳಲ್ಲಿ ಒಂದರಲ್ಲಿ ಕಮಲವನ್ನು ಹಿಡಿದಿರುವಂತೆ ಯಾ ಎಡಬದಿಯಲ್ಲಿ ಭೂದೇವಿಯು ತನ್ನ ನಾಲ್ಕು ಕೈಗಳಲ್ಲಿ ಎಡ-ಬಲಗಳೆರಡರಲ್ಲಿ ನೈದಿಲೆಯನ್ನು ಹಿಡಿದಿರುವಂತೆಯೂ ಕಡೆದಿಡಲ್ಪಟ್ಟಿರುತ್ತದೆ. ಬಲ-ಎಡ ಬದಿಗಳಲ್ಲಿ ಭೃಗು-ಮಾರ್ಕಂಡೇಯರ ಮೂರ್ತಿಗಳನ್ನು ನಿಲ್ಲಿಸಲಾಗಿರುವುದೂ ಉಂಟು.

೩. ವಿಷ್ಣುವಿನ ವೀರಸ್ಥಾನಕ ಮೂರ್ತಿಯೂ ಎರಡು ಕೈಗಳಲ್ಲಿ ಒಂದೊಂದರಲ್ಲಿ ಚಕ್ರವನ್ನೂ ಶಂಖವನ್ನೂ ಹಿಡಿದಿರುವಂತೆಯೂ ಉಳಿದೆರಡು ಕೈಗಳು ಖಾಲಿಯಾಗಿರುವಂತೆಯೂ ರೂಪಿಸಲಾಗಿರುತ್ತದೆ.

೪. ವಿಷ್ಣುವಿನ ಆಭಿಚಾರಿಕಸ್ಥಾನಕ ಮೂರ್ತಿಗೆ ೨ ಯಾ ೪ ಕೈಗಳಿರುತ್ತವೆ. ಅದೆರಡು ದಿಙ್ಮುಖ; ಅದರ ಬಟ್ಟೆಗಳು ಕಪ್ಪು. ದುರ್ನಕ್ಷತ್ರೋದಯ ಕಾಲದಲ್ಲಿ ಅದನ್ನು ಪ್ರತಿಷ್ಠಿಸಲಾಗಿರುತ್ತದೆ.

೫. ವಿಷ್ಣುವಿನ ಯೋಗಾಸನಮೂರ್ತಿಯು ಸಿಂಹಾಸನಾರೂಢವು. ಅದಕ್ಕೆ ಚತುರ್ಭುಜ, ಜಟಾಮುಕುಟ, ಬ್ರಹ್ಮಾಸನ ಯಾ ಪದ್ಮಾಸನ; ಮುಂಗೈಗಳು ಯೋಗಮುದ್ರೆಯಲ್ಲಿರುತ್ತವೆ; ಶಂಖ-ಚಕ್ರಗಳಿಲ್ಲ; ಯಜ್ಞೋಪವೀತವಿದೆ; ಕಿವಿಗಳಲ್ಲಿ ಕರ್ಣಕುಂಡಲಗಳಿವೆ. ತೋಳುಗಳಿಗೆ ಕೇಯೂರಾಭರಣಗಳಿವೆ; ಕುತ್ತಿಗೆಯಲ್ಲಿ ಹಾರವಿದೆ; ಅರ್ಧನಿಮೀಲಿತನಯನಗಳು ಕಾಣುತ್ತವೆ. ಹಿಂದೆ ಹೇಳಿದಂತೆ ಭೃಗು-ಮಾರ್ಕಂಡೇಯರಾಗಲಿ, ಮಾರ್ಕಂಡೇಯ-ಭೂದೇವಿಯರಾಗಲಿ ಎಡ ಅಥವಾ ಬಲ ಬದಿಯಲ್ಲಿ ನಿಂತಿರುವುದುಂಟು. ಇನ್ನೊಂದು ಗ್ರಂಥದ ಪ್ರಕಾರ ವಿಷ್ಣುವಿನ ದೃಷ್ಟಿಯು ನಾಸಾಗ್ರನಿಷ್ಠವಾಗಿರುತ್ತದೆ; ಯೋಗಿಪೂಜಾರ್ಹವಾಗಿ ಮುಂಬದಿ-ಹಿಂಬದಿಗಳ ಕೈಗಳಲ್ಲಿ ಪದ್ಮ, ಗದೆಗಳನ್ನೂ ಈ ವಿಷ್ಣುವು ಧರಿಸಿರುತ್ತಾನೆ.

೬. ವಿಷ್ಣುವಿನ ಭೋಗಾಸನಮೂರ್ತಿಯು ಬಲ-ಎಡಗಳಲ್ಲಿ ಲಕ್ಷ್ಮೀ-ಭೂದೇವಿಯರನ್ನು ಕುಳ್ಳಿರಿಸಿಕೊಂಡು ಚತುರ್ಭುಜಗಳಿಂದ ಶೋಭಿಸುತ್ತದೆ. ಆಸನಕ್ಕೆ ಸಿಂಹ; ಚಕ್ರ ಮತ್ತು ವರದಹಸ್ತ ಅಥವಾ ಅಭಯಹಸ್ತ ಬಲಬದಿಯ ಕೈಗಳಲ್ಲೂ, ಎಡಗೈಗಳಲ್ಲಿ ಶಂಖ ಮತ್ತು ಒಕ್ಕೈ ಸೊಂಟದ ಮೇಲೂ ಕಾಣಿಸುತ್ತವೆ. ಲಕ್ಷ್ಮಿಯ ಎಡಗಾಲು ಪೀಠದ ಮೇಲೆ ಮಡಿಚಿಕೊಂಡಿರುತ್ತದೆ; ಬಲಗಾಲು ಇಳಿಯಬಿಡಲಾಗಿರುತ್ತದೆ. ಭೂದೇವಿಯ ಕೈಯಲ್ಲಿ ನೈದಿಲೆ ಇರುತ್ತದೆ. ಈ ದೇವಿಯರ ಮಿಕ್ಕ ಕೈಗಳು ಕಟಕಭಂಗಿಯಲ್ಲಿ ಸಿಂಹಾಸನದ ಮೇಲೆ ವಿಶ್ರಮಿಸಿರುತ್ತವೆ.

೭. ವೀರಾಸನಮೂರ್ತಿಯಲ್ಲಿ ವಿಷ್ಣುವು ಸಿಂಹಾಸನಾರೂಢನು. ಎಡಗೈ ಸ್ವಲ್ಪ ಬಾಗಿರುತ್ತದೆ; ಬಲಗೈ ಸ್ವಲ್ಪ ಉದ್ದವಾಗಿ ಚಾಚಿಕೊಂಡಿರುತ್ತದೆ. ಮಾರ್ಕಂಡೇಯ-ಭೃಗುಗಳಂತೆ ಶ್ರೀದೇವಿ-ಭೂದೇವಿಯರು ಮೊಣಕಾಲೂರಿ ನಮಸ್ಕರಿಸುತ್ತಿರುತ್ತಾರೆ. ಒಂದು ಕೈಯಲ್ಲಿ ಈ ವಿಷ್ಣುವಿಗೆ ಚಕ್ರವಿದೆ; ಮತ್ತೊಂದರಲ್ಲಿ ಅಭಯ ಮುದ್ರೆಯಿದೆ. ಒಂದು ಎಡಗೈ ಶಂಖವನ್ನು ಹಿಡಿದಿರುತ್ತದೆ. ಇನ್ನೊಂದು ಎಡಗೈ ಸಿಂಹಕರ್ಣಭಂಗಿಯಲ್ಲಿರುತ್ತದೆ. ಬ್ರಹ್ಮನೂ ಮಾರ್ಕಂಡೇಯನೂ ವಿಗ್ರಹದ ಬಲಗಡೆಗೂ, ಶಿವ-ಭೃಗುಗಳು ಎಡಗಡೆಗೂ ಇರುತ್ತಾರೆ. ಕಾಮಿನೀ-ವ್ಯಾಜಿನಿಯರು ಚಾಮರ ಬೀಸುತ್ತಾರೆ. ಸನಕ, ಸನತ್ಕುಮಾರ, ತುಂಬುರು, ನಾರದ, ಸೂರ್ಯ, ಚಂದ್ರರು ಈ ವೀರಾಸನ ಮೂರ್ತಿಯ ಸುತ್ತಲೂ ನಿಂತಿರುತ್ತಾರೆ. ಇದು ಉತ್ತಮ ಮೂರ್ತಿ;

ಮಧ್ಯಮ-ಅಧಮ ಮೂರ್ತಿಗಳ ಸುತ್ತಲೂ ಇಷ್ಟು ಪರಿವಾರ ದೇವತೆಗಳಿರುವದಿಲ್ಲ.

೮. ಆಭಿಚಾರಿಕಾಸನಮೂರ್ತಿಗೆ ೨ ಅಥವಾ ೪ ಕೈಗಳಿರುತ್ತವೆ; ಕುಳಿತಿರುವುದು ವೇದಿಕಾಸನದಲ್ಲಿ. ಆ ಆಸನದಲ್ಲಿ ಅಲಂಕೃತ ಹೊಸ್ತಿಲೊಂದು ಅಮುಖ್ಯ ದೇವತೆಗಳಿಗಾಗಿ ರಚಿಸಲ್ಪಟ್ಟಿರುತ್ತದೆ. ತಾಮಸಪ್ರಕಾರಕ ಮುಖ; ಮೈಯು ಪೈಶಾಚಪದೋನ್ಮುಖವಾಗಿ ವಧ್ಯಶತ್ರುವನ್ನೆದುರಿಸುತ್ತಿರುತ್ತದೆ.

೯. ಯೋಗಶಯನ ಮೂರ್ತಿಯ ೩/೪ ಭಾಗವು ಶೇಷಶಾಯಿಯಾಗಿರುತ್ತದೆ; ಮಿಕ್ಕ ೧/೪ ಭಾಗವು ಸ್ವಲ್ಪ ಎದ್ದಿರುತ್ತದೆ. ಬಲಗೈಯು ತಲೆದಿಂಬಿನ ಸಮೀಪದಲ್ಲಿ ಮುಕುಟವನ್ನು ಮುಟ್ಟುವಂತಿರುತ್ತದೆ. ಮೊಣಕೈ ಗಂಟಿನಲ್ಲಿ ಬಾಗಿದ ಮತ್ತೊಂದು ಕೈಯು ಕಟಕಭಂಗಿಯಲ್ಲಿರುತ್ತದೆ; ಅಥವಾ ಈ ಎಡಗೈಯು ಮೈಗೆ ಸಮಾನಾಂತರದಲ್ಲಿದ್ದು ಮೊಣಕಾಲನ್ನು ಮುಟ್ಟುವಂತಿರುತ್ತದೆ; ಬಲಗಾಲು ನೀಡಿರುತ್ತದೆ. ಮತ್ತು ಎಡಗಾಲು ಸ್ವಲ್ಪ ಬಾಗಿರುತ್ತದೆ. ಕಣ್ಣುಗಳು ತೆರೆದಂತಿರಬೇಕು. ಭೃಗು-ಮಾರ್ಕಂಡೇಯರು ಬದಿಗಳಲ್ಲೂ ಮಧು-ಕೈಟಭರು ಪಾದಗಳ ಸನಿಹದಲ್ಲೂ ನಿಂತಿರಬೇಕು. ಬ್ರಹ್ಮನು ವಿಷ್ಣುವಿನ ನಾಭಿಕಮಲದಿಂದ ಮೂಡಿಬಂದಿರಬೇಕು. ಹಿಂಗೋಡೆಯಲ್ಲಿ ಗರುಡ ವಿಷ್ವಕ್ಸೇನ ಮತ್ತು ಸಪ್ತರ್ಷಿಗಳು ಅಂಜಲಿಹಸ್ತರಾಗಿರುತ್ತಾರೆ. ಶಿವ-ಬ್ರಹ್ಮರು ಉತ್ತರ-ದಕ್ಷಿಣ ಭಿತ್ತಿಗಳ ಮೇಲೆ ಕುಳಿತುಕೊಂಡಿರುತ್ತಾರೆ. ಇದು ಉತ್ತಮ ಮೂರ್ತಿ.

೧೦. ಭೋಗಶಯನಮೂರ್ತಿಗೆ ಚತುರ್ಬಾಹುಗಳು; ವಿಗ್ರಹವು ಮಲಗಿರುವುದು ಹೀಗಂತೆ, ಎರಡು ಕಾಲುಗಳ ನಡುವಿನ ದೂರವು ೨೦ ಅಂಗುಲಗಳಷ್ಟು; ಒಂದು ಮೊಣಕಾಲ ಪಾದಸಂಧಿಯಿಂದ ಇನ್ನೊಂದರ ನಡುವಿನ ದೂರವು ೪ ಅಂಗುಲಗಳಷ್ಟು; ಮೊಣಕಾಲುಗಳೆರಡರ ಅಂತರ ೧೪ ಅಂಗುಲಗಳಷ್ಟು. ಮುಖದ ಹಾಗೂ ಬ್ರಹ್ಮಸೂತ್ರದ ನಡುವಣ ದೂರವು ೩ ಅಂಗುಲಗಳಷ್ಟು. ಲಕ್ಷ್ಮಿಯು ಗಂಡನ ತಲೆಬದಿಗೆ ಕುಳಿತಿರುತ್ತಾಳೆ; ವಿಷ್ಣುವಿನ ಭುಜಗಳಿಗೆ ತಾಗಿ ಕುಳಿತ ಅವಳು ಬಲಗೈಯಲ್ಲಿ ಕಮಲವನ್ನು ಹಿಡಿದಿರುತ್ತಾಳೆ ಮತ್ತು ಎಡಗೈ ಕಟಕಹಸ್ತದಲ್ಲಿರುತ್ತದೆ. ಈ ವಿಷ್ಣುವಿರುವುದು ಪದ್ಮಾಸನ ಹಾಕಿಕೊಂಡು—ಬಲಗಾಲು ಎಡಗಾಲಿನ ಮೇಲಿರುತ್ತದೆ. ಭೂದೇವಿಯು ಪಾದಗಳ ಹತ್ತಿರ ಕುಳಿತಿರುತ್ತಾಳೆ—ಅವಳು ಅವನ ಎಡ

ಪಾದವನ್ನು ಮುಟ್ಟಿಕೊಂಡಿರುತ್ತಾಳೆ—ಅವಳ ಬಲಗೈಯು ನೀಲೋತ್ಪಲವನ್ನು ಹಿಡಿದುಕೊಂಡಿದ್ದರೆ, ಎಡಗೈಯು ಕಟಕಹಸ್ತಭಂಗಿಯಲ್ಲಿರುತ್ತದೆ. ಈ ''ಕೌತುಕ ಬೇರ''ದ ಆಕೃತಿಯು ವಿಷ್ಣುವಿನ ಬಲಗಡೆ ಮಾರ್ಕಂಡೇಯನೂ ಎಡಗಡೆಯಲ್ಲಿ ಭೃಗುವೂ ಇರುತ್ತಾರೆ. ವಿಷ್ಣುವಿನ ನಾಭಿಕಮಲದಿಂದೆದ್ದ ಬ್ರಹ್ಮನ ಬಲಕ್ಕೆ ಐದು ಜನ ಆಯುಧಪುರುಷರೂ ಗರುಡನೂ ಇರುತ್ತಾರೆ.

೧೧. ವೀರಶಯನಮೂರ್ತಿಯು ತನ್ನ ಬಲದೋಳಿನ ಮೇಲೆ ತಲೆಯಿಟ್ಟುಕೊಂಡು ಮಲಗಿರುತ್ತಾನೆ; ಮತ್ತೊಂದು ಬಲದೋಳಿನಿಂದ ಚಕ್ರವನ್ನೂ ಹಿಡಿದಿರುತ್ತಾನೆ. ಒಂದು ಎಡಗೈಯು ಶಂಖವನ್ನು ಹಿಡಿದಿದ್ದರೆ, ಇನ್ನೊಂದು ಅವನ ಶರೀರಕ್ಕೆ ಸಮಾನಾಂತರದಲ್ಲಿ ಚಾಚಿಕೊಂಡಿರುತ್ತದೆ. ಲಕ್ಷ್ಮಿಯೂ ಭೂದೇವಿಯೂ ಅವನ ಪಾದಯುಗಲದ ಬಳಿ ಇರುತ್ತಾರೆ. ಮಧು-ಕೈಟಭ ಎಂಬೀರ್ವರು ಶರಣಾಗತಿಭಂಗಿಯಲ್ಲಿ ಅವನ ಪಾದವನ್ನು ಹಿಡಿದಿರುತ್ತಾರೆ. ಇದು ''ಕೌತುಕಬೇರ''; ಇದರ ಬಲ-ಎಡ ಬದಿಗಳಲ್ಲಿ ಮಾರ್ಕಂಡೇಯ ಮತ್ತು ಭೃಗುಗಳಿರುತ್ತಾರೆ.

೧೨. ಆಭಿಚಾರಿಕಶಯನಮೂರ್ತಿಯು ನೆಲದ ಮೇಲೆ ಆದಿಶೇಷನ ಮೈಯೇರಿಕೊಂಡು ಮಲಗಿರುತ್ತದೆ; ಆದಿಶೇಷನ ಎರಡು ಹೆಡೆಗಳೂ ಬಹಳ ಎದ್ದಿರುವುದಿಲ್ಲ; ಅವನ ಮೇಲೆ ವಿಷ್ಣುಮೂರ್ತಿ ಅಂಗಾತ್ತನೆ ಗಾಢನಿದ್ರೆಯಲ್ಲಿ ಲೀನನಾಗಿರುತ್ತಾನೆ; ಮುಖ ನಿಷ್ಕಲ; ದೂತದೇವತೆಗಳಾರೂ ಇರುವುದಿಲ್ಲ. ಮೂರ್ತಿಯ ಉತ್ತಮ ಮಧ್ಯಮ ಮಾದರಿಯಲ್ಲಿ ಒಂದೇ ತೆಕ್ಕೆ ಮತ್ತು ಒಂದೇ ಹೆಡೆಯ ಹಾವೂ ಅದರ ಅಧಮ ಮಾದರಿಯಲ್ಲಿ ಹಾವಿನ ಹಾಸಿಗೆಯ ರಾಹಿತ್ಯವೂ ಕಂಡುಬರುತ್ತದೆ.

ಕಿರೀಟ, ಮಕುಟ, ಹಾರ, ಕುಂಡಲ, ಯಜ್ಞೋಪವೀತಗಳು ವಿಷ್ಣುವಿನ ಆಭರಣಗಳು.

## ವಿಷ್ಣುವಿನ ದಶಾವತಾರಗಳು

ಅವತಾರಗಳು ತ್ರಿವಿಧ: ಕೃಷ್ಣ-ರಾಮರ ಅವತಾರಗಳು ವಿಷ್ಣುವಿನ ಪೂರ್ಣಾವತಾರಗಳು; ಪರಶುರಾಮನು ಅವನ ಆವೇಶಾವತಾರವು; ಮಿಕ್ಕವು ಅಂಶಾವತಾರಗಳು. ವಿಷ್ಣುವಿನ ಆಜ್ಞೆಯಂತೆ ಶಂಖ-ಚಕ್ರಗಳು ಋಷಿಗಳ ಅವತಾರವನ್ನು ತಾಳಿರುತ್ತವೆ.

1. ಮತ್ಸ್ಯಾವತಾರ : ಮೀನಿನ ಯಾ ಅರ್ಧಮೀನ-ಅರ್ಧಮನುಷ್ಯನ ಆಕಾರ—ಹಿಂಭಾಗ ಮೀನು, ಮುಂಭಾಗ ಮಾನುಷ. ಅದಕ್ಕೆ ನಾಲ್ಕು ಕೈಗಳು—ಎರಡು ಕೈಗಳಲ್ಲಿ ಹಿಡಿದದ್ದು ಶಂಖ-ಚಕ್ರಗಳು, ಇನ್ನೆರಡು ಅಭಯ-ವರದ ಹಸ್ತಗಳು; ತಲೆಯ ಮೇಲೆ ಕಿರೀಟ ಮುಕುಟ; ಮತ್ತು ಧರಿಸಿದ್ದು ವಿಷ್ಣು ಸಾಧಾರಣ ಆಭರಣಗಳನ್ನು.

2. ಕೂರ್ಮಾವತಾರ : ಆಮೆಯ ಆಕಾರ ಯಾ ಅರ್ಧಕೂರ್ಮ ಅರ್ಧ ಮಾನುಷ ಸ್ವರೂಪ; ಕೈಗಳು ನಾಲ್ಕು—ಅವೆಲ್ಲಾ ಮತ್ಸ್ಯಾವತಾರದಂತೆಯೇ.

3. ವರಾಹಾವತಾರ : (Emusha Boar S. B) ಶಂಖ-ಚಕ್ರ ಅಥವಾ ಗದಾ-ಪದ್ಮಧರ. ಅಂಜಲಿಹಸ್ತೆಯಾಗಿ ಭೂದೇವಿ ಅವರ ಬಲಗಾಲ ಮೇಲೆ ಕುಳಿತಿರುತ್ತಾಳೆ. ಅವತಾರದ ಒಳವಿಂಗಡಣೆ : (೧) ಭೂವರಾಹ ಆದಿಶೇಷನೊಡನೆ ಆದಿವರಾಹ ಯಾ ನೃವರಾಹ (ಮನುಷ್ಯಮುಖಯುಕ್ತ, ಚತುರ್ಭುಜ); (೨) ಯಜ್ಞವರಾಹ—ಸಿಂಹಾಸನಸ್ಥ, ಬಲಗಡೆ ಲಕ್ಷ್ಮೀ, ಎಡಗಡೆ ಭೂದೇವಿ; (೩) ಪ್ರಳಯಾವತಾರ—ಸಿಂಹಾಸನಸ್ಥ, ಬಲಗಡೆ ಭೂದೇವಿ, ಆಮೇಲೆ ಎಡಗಡೆ ಬ್ರಹ್ಮ—ಅವನಿಲ್ಲಿ ತ್ರಿಮುಖ ಮತ್ತು ಚತುರ್ಭುಜ; ಅನಂತರ ಅಂಜಲಿಹಸ್ತನೂ, ಜಟಾಧರನೂ ಆದ ಶಿವ.

4. ನರಸಿಂಹ : ಗುಹೆಯಿಂದ ಹೊರಹೊರಡುವ ಭಂಗಿಯಲ್ಲಿರುತ್ತಾನೆ.

(೧) ಗಿರಿಜಾನರಸಿಂಹ—ಪದ್ಮಾಸನಸ್ಥ; ಅವನಿಗೆ ಉತ್ಕುಟಿಕಾಭಂಗಿ, ಸೊಂಟಕ್ಕೆ ಯೋಗಪಟ್ಟಿಕೆ; ಮುಂಗಾಲಿನಿಂದ ಮುಂಬರಿಯುತ್ತಿರುತ್ತಾನೆ. ಈತನು ಕೇವಲ ನರಸಿಂಹ; ಇವನಿಗೆ ೨ ಅಥವಾ ೪ ತೋಳುಗಳು, ಮೇಲಿನ ಬಲಗೈಯಲ್ಲಿ ಚಕ್ರ, ಮೇಲಿನ ಎಡಗೈಯಲ್ಲಿ ಶಂಖ ಇದ್ದರೆ ಇವನು ಯೋಗನರಸಿಂಹ; ಅರ್ಧನರ, ಅರ್ಧಸಿಂಹ—ಶಂಖವನ್ನು ಉಳಿದು ಇಳಿಬಿಟ್ಟ ಕೈಗಳು ಅಥವಾ ಅವು ಗದಾ-ಪದ್ಮಗಳನ್ನವು ಹಿಡಿದಿರಬಹುದು. ಇವನು ಸಿಂಹಾಸನಸ್ಥನಾಗಿದ್ದರೂ ಇರಬಹುದು—ಆಗ ಇವನು ಚತುರ್ಭುಜನು, ಎಡಮುಂಗಡೆಯ ಸೊಂಟದಲ್ಲಿ ಕೈಯಿಟ್ಟುಕೊಂಡ ಕಟ್ಯವಲಂಬಿಯಾದಾಗ ಗಿರಿಜಾನರಸಿಂಹ. ಗಿರಿಜಾನರಸಿಂಹನ ವೈವಿಧ್ಯ ಇಷ್ಟು.

(೨) ಸ್ಥೌಣನರಸಿಂಹ: ಕಂಬದಿಂದ ಹೊರಹೊರಡುತ್ತಿರುವವನು; ಅಥವಾ ಕುಳಿತ ಚತುರ್ಭುಜನಾಗಿಯೂ ಇರಬಹುದು. ಹಿಂಗೈ

ಗಳಲ್ಲಿ ಶಂಖ-ಚಕ್ರ ಹಿಡಿದಿರಬಹುದು ಯಾ ಅಭಯ-ವರದ ಹಸ್ತಗಳುಳ್ಳವನಾಗಿ ಮುಂದಿನೆಡಗೈಯನ್ನು ಮೊಣಕಾಲಮೇಲಿಟ್ಟುಕೊಂಡಿರಬಹುದು.; ಸಿಂಹಾಸನಾರೂಢನೂ, ದಟ್ಟವಾದ ಕೇಸರಗಳನ್ನೂ ಕುತ್ತಿಗೆಯಲ್ಲಿ ಜೆಕಿಸಿಕೊಂಡಿರುತ್ತಾನೆ ಮತ್ತು ಹರಿತವಾದ ಹಲ್ಲುಗಳನ್ನು ತೋರಿಸುತ್ತಿರುತ್ತಾನೆ. ಇಲ್ಲವಾದರೆ ಈ ನರಸಿಂಹನ ಕೈಗಳು ೧೨ ಯಾ ೧೬ ಇರಬಹುದು; ಹಿರಣ್ಯಕಶಿಪುವನ್ನು ಮಲಗಿಸಿಕೊಂಡು ಅವನ ಹೊಟ್ಟೆಯನ್ನು ಎರಡೂ ಕೈಗಳಿಂದ ಬಗೆಯುತ್ತಿರಬಹುದು; ಬಲಗೈಯೊಂದು ಅಭಯಹಸ್ತ ಮತ್ತು ಇನ್ನೊಂದು ಬಲಗೈಯಲ್ಲಿ ಕುಂಡಲ ತಾಗುವವರೆಗೆ ಬಿಚ್ಚುಗತ್ತಿಯನ್ನು ಹಿಡಿದಿರಬಹುದು; ಎಡಗೈ ಹಿರಣ್ಯಕಶಿಪುವಿನ ಮುಕುಟವನ್ನು ಹಿಡಿದಿರುತ್ತದೆ; ಇನ್ನೊಂದು ಎಡಗೈ ಹಿರಣ್ಯಕಶಿಪುವನ್ನು ಹೊಡೆಯಲು ಮೇಲಕ್ಕೆ ಎತ್ತಿರುತ್ತದೆ. ಶ್ರೀದೇವಿ, ಭೂದೇವಿ, ನಾರದರು ಸುತ್ತುವರಿದಿರುತ್ತಾರೆ. ಈ ನರಸಿಂಹನು ಶಂಖ, ಚಕ್ರ, ಗದೆ, ಪದ್ಮಗಳನ್ನು ಹಿಡಿದಿರುತ್ತಾನೆ. ಅಲ್ಲದೆ ಶ್ರೀದೇವಾದಿಗಳ ಮೇಲೆ ಲೋಕಪಾಲಕರು ಇರುತ್ತಾರೆ. ಇವನಿಗೆ ಅಷ್ಟಹಸ್ತಗಳಿರುತ್ತವೆ. ಅವುಗಳಲ್ಲಿ ಎರಡು ಹಿರಣ್ಯಕಶಿಪುವಿನ ಹೊಟ್ಟೆಯನ್ನು ಬಗೆಯುತ್ತಿರುತ್ತವೆ; ನಾಲ್ಕು ಶಂಖ, ಚಕ್ರ; ಗದೆ, ಪದ್ಮಗಳನ್ನು ಹಿಡಿದಿರುತ್ತವೆ—ಇನ್ನೆರಡು ಕೈಗಳು ಹಿರಣ್ಯಕಶಿಪುವಿನ ಕರುಳನ್ನು ಹಿಡಿದಿರುತ್ತವೆ—ಅದು ಮಾಲಾಕಾರವಾಗಿರುತ್ತದೆ. ಈ ಮೂರ್ತಿ ಕುಳ್ಳಿರುವುದು ಆಲೀಢಾಸನದಲ್ಲಿ.

(೩) ಯಾನಕ ನರಸಿಂಹ: ಇವನು ಗರುಡವಾಹನ ಯಾ ಆದಿಶೇಷಶಾಯಿ; ಇವನಿಗೆ ನಾಲ್ಕು ಕೈಗಳು; ಎರಡು ಕೈಗಳು ಶಂಖ-ಚಕ್ರಗಳನ್ನು ಹಿಡಿದಿರುತ್ತವೆ. ಇನ್ನೆರಡು ಕೈಗಳು ಕಾರ್ಯಮಗ್ನವಾಗಿರುತ್ತವೆ. ಈ ನರಸಿಂಹನ ತಲೆಯನ್ನು ಐದು ತಲೆಯ ಆದಿಶೇಷನು ತನ್ನ ಐದು ಹೆಡೆಗಳಿಂದ ಕೊಡೆ ಹಿಡಿದಂತೆ ಕಾಯುತ್ತಿರುತ್ತಾನೆ. ಇಂಥ ಮೂರ್ತಿಯು ಶಾಸ್ತ್ರೋಕ್ತ; ಆದರೆ ಇದಕ್ಕೆ ಸಾಕ್ಷಾತ್ ನಿದರ್ಶನಗಳಿಲ್ಲ, ಇನ್ನೂ ಅರುವಿಧಗಳ ನರಸಿಂಹಮೂರ್ತಿಗಳಿಗೆ ಶಾಸ್ತ್ರಾಧಾರವಿಲ್ಲವೇ ಇಲ್ಲ.

(೪) ಲಕ್ಷ್ಮೀನರಸಿಂಹ: ಈ ಮೂರ್ತಿಯು ಪದ್ಮಾಸನಸ್ಥ; ಇದರ ಬಲಗಾಲು ಇಳಿಬಿಟ್ಟಿರುತ್ತದೆ; ಎಡಗಾಲು ಲಕ್ಷ್ಮಿಯ ಆಸನವಾ

ಗಿರುತ್ತದೆ; ಅವಳ ಕಾಲುಗಳೆರಡೂ ಕೆಳಗೆ ಇಳಿಬಿದ್ದಿರುತ್ತವೆ. ಅವಳ ಎರಡು ಪಾದಗಳೂ ಪದ್ಮಾವಲಂಬಿಗಳಾಗಿರುತ್ತವೆ. ಲಕ್ಷ್ಮೀ ನರಸಿಂಹನ ಮೇಲಿನ ಬಲಗೈ ಚಕ್ರಧಾರಿ; ಕೆಳಗಿನ ಬಲಗೈ ಅಭಯಹಸ್ತ; ಎಡಕೆಳಗೈ ದೇವಿಯನ್ನು ಆಲಿಂಗಿಸಿರುತ್ತದೆ; ಮೇಲಿನ ಎಡಗೈ ಶಂಖಧಾರಿಯಾಗಿರುತ್ತದೆ. ಲಕ್ಷ್ಮಿಯ ಬಲಗೈ ನರಸಿಂಹನನ್ನು ಅಪ್ಪಿಕೊಂಡಿರುತ್ತದೆ; ಅವಳ ಎಡಗೈ ಕಮಲವನ್ನು ಹಿಡಿದಿರುತ್ತದೆ. ನರಸಿಂಹನ ಹಾಗೂ ಲಕ್ಷ್ಮಿಯ ಕಾಲುಗಳ ನಡುವೆ ಆಲೀಢಾಸನದಲ್ಲಿ ಗರುಡನು ಲಾಂಛನವಾಗಿರುತ್ತಾನೆ.

5. ವಾಮನ-ತ್ರಿವಿಕ್ರಮಾವತಾರ :

(೧) ಬ್ರಹ್ಮಚಾರಿ ವಾಮನ: ಎತ್ತರ ೫೬ ಅಂಗುಲಗಳು = ಪಂಚತಾಲ. ಎರಡು ಕೈಗಳು ಕಮಂಡಲು ಮತ್ತು ಛತ್ರಗಳನ್ನು ಹಿಡಿದಿರುತ್ತವೆ. ತಲೆಯ ಮೇಲೆ ಜುಟ್ಟವಿರುತ್ತದೆ; ಕಿವಿಗಳು ಕುಂಡಲಧಾರಿಗಳು. ಅವನು ಕೃಷ್ಣಾಜಿನಧರನು. ಆ ಕೃಷ್ಣಾಜಿನವೇ ಅವನ ಉಪವೀತ. ಸೊಂಟಕ್ಕೆ ಕೌಪೀನ; ಮೂರನೆಯ ಬಲಗೈ ಬೆರಳಲ್ಲಿ ಪವಿತ್ರವಿರುತ್ತದೆ. ಅವನ ಒಂದು ಕೈಯಲ್ಲಿ ಪುಸ್ತಕವಿರುತ್ತದೆ.

ಅಥವಾ

ಈ ಬ್ರಹ್ಮಚಾರಿಯೊಬ್ಬ ಕುಬ್ಜನಾಗಿರುತ್ತಾನೆ; ಗೂನುಬೆನ್ನಿನವನು; ಮುಂಚಾಚಿದ ಮೊಣಕಾಲುಗಳುಳ್ಳವನು ಮತ್ತು ಅವನ ಹೊಟ್ಟೆ ದೊಡ್ಡದಾಗಿರುತ್ತದೆ.

(೨) ತ್ರಿವಿಕ್ರಮ: ಎಡಗಾಲು ಹೊಕ್ಕಳಿಗೆ ಸಮನಾಗಿ ಎತ್ತಿರುತ್ತದೆ. ಅಥವಾ ಬಲಮೊಣಕಾಲಿನೆತ್ತರಕ್ಕೆ ಎತ್ತಲ್ಪಟ್ಟಿರುತ್ತದೆ ಇಲ್ಲವೆ ಹಣೆಯೆತ್ತರಕ್ಕೇರಿರುತ್ತದೆ—ಇವು ತ್ರಿವಿಧವಾಗಿರುವುದು ಲಕ್ಷ್ಯ. ತ್ರಿವಿಕ್ರಮನ ಎತ್ತರವು ೧೨೪ ಅಂಗುಲಗಳು ಯಾ ಉತ್ತಮ ದಶತಾಲಗಳಷ್ಟು. ಅವನಿಗೆ ನಾಲ್ಕು ಯಾ ಎಂಟು ಕೈಗಳು; ಒಂದು ಎತ್ತಿದ ಕೈಯಲ್ಲಿ ಶಂಖ, ಇನ್ನೊಂದರಲ್ಲಿ ಚಕ್ರ. ಮಿಕ್ಕೆರಡು ಕೈಗಳು ಅಡ್ಡ ಚಾಚಿಕೊಂಡಿರುತ್ತವೆ. ಅಥವಾ ಅಭಯ-ವರದ ಹಸ್ತಗಳಾಗಿರುತ್ತವೆ. ಎಂಟು ಕೈಗಳಲ್ಲಿ: ಶಂಖಾದಿ ನಾಲ್ಕು + ಶಾರ್ಙ್ಗ, ಹಲಗಳಿರುತ್ತವೆ—ಮಿಕ್ಕ ಮೂರು

ಕೈಗಳು ಯಥಾಪೂರ್ವ. ಎಡಗಾಲು ಲೋಕತ್ರಯವನ್ನು ಅಳೆಯುತ್ತದೆ. ಹಿಂದೆ ಕಲ್ಪವೃಕ್ಷ; ಇಂದ್ರನು ಹಿಂದೆ ತ್ರಿವಿಕ್ರಮನಿಗೆ ಕೊಡೆ ಹಿಡಿದಿರುತ್ತಾನೆ. ವರುಣ-ವಾಯುಗಳು ಚಾಮರ ಹಿಡಿದಿರುತ್ತಾರೆ ಎಡಬಲಗಳಲ್ಲಿ. ಸೂರ್ಯ-ಚಂದ್ರರು ಬಲ-ಎಡಬದಿಗಳಲ್ಲಿ ಇರುತ್ತಾರೆ. ಹತ್ತಿರದಲ್ಲೇ ಸನಕ, ಸನಂದನ, ಸನತ್ಕುಮಾರ, ಸನಾತನರಿರುತ್ತಾರೆ. ಸನಾತನನು ಸನ್ಯಸ್ತನು. ಬ್ರಹ್ಮನು ತನ್ನ ಕಮಂಡಲು ಜಲದಿಂದ ತ್ರಿವಿಕ್ರಮನು ಎತ್ತಿದ ಕಾಲನ್ನು ಹಿಡಿದುಕೊಂಡು ತೊಳೆಯುತ್ತಿರುತ್ತಾನೆ. ತಮೋರುದ್ರನು ಅಂಜಲಿಹಸ್ತನಾಗಿ ಒಂದು ಬದಿಗಿರುತ್ತಾನೆ. ನಮುಚಿಯು ತ್ರಿವಿಕ್ರಮನು ಎತ್ತಿರದ ಬಲಗಾಲನ್ನು ನಮಸ್ಕರಿಸುತ್ತಿರುತ್ತಾನೆ. ತ್ರಿವಿಕ್ರಮನ ಎಡಬದಿಯಲ್ಲಿ ಗರುಡನು ಶುಕ್ರನನ್ನು ಹಿಡಿದುಕೊಂಡಿರುತ್ತಾನೆ.

ವಾಮನನಿದಿರು ಬಲಿಯಿರುತ್ತಾನೆ. ಬಲಿಯ ಕೈಯಲ್ಲಿ ಬಂಗಾರದ ಸ್ಥಾಲಿಯಲ್ಲಿ ನೀರಿರುತ್ತದೆ, ಬಲಿಯ ಹಿಂದೆ ಅವನ ಹೆಂಡತಿ ಇರುತ್ತಾಳೆ. ಜಾಂಬವನು ತ್ರಿವಿಕ್ರಮನ ತಲೆಯ ಮೇಲಿರುತ್ತಾನೆ. ಅವನು ಭೇರಿಯನ್ನು ಬಾರಿಸುತ್ತಿರುತ್ತಾನೆ.

ಅಥವಾ

ತ್ರಿವಿಕ್ರಮನು ಎಡಗಾಲ ಮೇಲೆ ನಿಂತು ಕೈಗಳಲ್ಲಿ ದಂಡ, ಪಾಶ, ಶಂಖ, ಚಕ್ರ, ಗದೆ, ಪದ್ಮಗಳನ್ನು ಧರಿಸಿರುತ್ತಾನೆ, ಯಾವ ಆಯುಧವನ್ನೂ ಆಯುಧಪುರುಷನನ್ನಾಗಿ ತೋರಿಸುವುದಿಲ್ಲ. ತ್ರಿವಿಕ್ರಮನ ಕೌತುಕಬೇರವು ಚತುರ್ಭುಜ. ಅವನ ಮುಖಗಳು ದ್ವಿವಿಧ; ಮೇಲಕ್ಕೆ ಎತ್ತಿದ್ದು; ಅವನ ಕಣ್‌ಗಳು ಸ್ವಲ್ಪ ಅಗಲವಾಗುತ್ತವೆ. ಅರೆಮೊಗದವನಾದರೆ ಇನ್ನೂ ಅಗಲವಾಗಿ ತೆರೆದ ಕಣ್ಣುಗಳು ಇರುತ್ತವೆ.

6. ಪರಶುರಾಮಾವತಾರ: ೧೨೦ ಅಂಗುಲಗಳಷ್ಟು ಎತ್ತರ, ಅಂದರೆ ಮಧ್ಯಮದಶತಾಲಮಾನ. ಬಲಗೈಯಲ್ಲಿ ಕೊಡಲಿ. ಎಡಗೈ ಸೂಚೀಭಂಗಿಯಲ್ಲಿರುತ್ತದೆ; ಏನನ್ನೋ ತೋರಿಸುವಂತಿರುತ್ತದೆ. ತಲೆಯ ಮೇಲೆ ಜಟಾಮುಕುಟ, ಮೈಮೇಲೆ ಬ್ರಹ್ಮಸೂತ್ರ ಮತ್ತು ಆಭರಣಗಳು. ಖಡ್ಗ, ಬಾಣ, ಬಿಲ್ಲು, ಪರಶುಗಳನ್ನು ನಾಲ್ಕು ಕೈಗಳು ಹಿಡಿದಿರುತ್ತವೆ. ಕೊಡಲಿರಾಮನು

ಧರಿಸಿರುವುದು ಕೃಷ್ಣಾಜಿನವನ್ನು. ಪರಶುರಾಮನ ಕೌತುಕಬೇರವು ಹೀಗೂ ಇರಬಹುದು ಯಾ ವಿಷ್ಣುವಿನ ಸಾಮಾನ್ಯ ವಿಗ್ರಹದಂತೆ ಚತುರ್ಭುಜ ವಾಗಿಯೂ ಇರಬಹುದು.

7. ರಾಘವ ರಾಮಾವತಾರ: ಎತ್ತರದಲ್ಲಿ ರಾಮನು ಪರಶುರಾಮನ ಸದೃಶನು. ಕೈಗಳೆರಡು; ಬಲಗೈಯಲ್ಲಿ ಅಂಬು, ಎಡಗೈಯಲ್ಲಿ ಬಿಲ್ಲು. ತ್ರಿಭಂಗಿಯ ವಿಗ್ರಹ; ಕಿರೀಟ ಮುಕುಟಧಾರಿ; ಆಭರಣಾಲಂಕೃತ. ಸರ್ವಾರ್ಧ ತಾಲಮಾನದಂತೆ (೯||) ಸೀತೆ ಬಲಗಡೆಗಿರುತ್ತಾಳೆ; ದೇಹಕ್ಕೆ ಬಾಗು ಇಲ್ಲ. ಕೂದಲನ್ನು ಗಂಟುಕಟ್ಟಿಕೊಂಡಿರುತ್ತಾಳೆ—ಕರಂಡ ಮುಕುಟಧಾರಿಣಿ; ಎಡಗೈಯಲ್ಲಿ ನೀಲೋತ್ಪಲವನ್ನು (ಕೋಳೆಹೂವನ್ನು) ಹಿಡಿದಿರುತ್ತಾಳೆ—ಬಲಗೈ ಇಳಿಬಿದ್ದಿರುತ್ತದೆ. ರಾಮನನ್ನು ಸಂತೋಷದಿಂದ ನೋಡುತ್ತಿರುತ್ತಾಳೆ.

ರಾಮನ ಎಡಕ್ಕೆ ಲಕ್ಷ್ಮಣನಿರುತ್ತಾನೆ—ದಶತಾಲ=೧೧೬ ಅಂಗುಲಗಳಷ್ಟು ಎತ್ತರದ ವಿಗ್ರಹ. ಉಳಿದೆಲ್ಲವುಗಳಲ್ಲೂ ಲಕ್ಷ್ಮಣನು ರಾಮಸದೃಶನು. ರಾಮನ ಬಲಕ್ಕೆ, ರಾಮನೆದುರು ಹನುಮಂತನು ನಿಂತಿರುತ್ತಾನೆ; ಅವನ ಎತ್ತರ ೮೪ ಅಂಗುಲಗಳ ಸಪ್ತತಾಲಮಾನವು; ದ್ವಿಭುಜ ಮೂರ್ತಿ—ಒಂದು ಕೈಯನ್ನು ಬಾಯಮೇಲೆ ಇಟ್ಟುಕೊಂಡಿರುತ್ತದೆ; ಇನ್ನೊಂದು ಮೊಣಕಾಲವರೆಗೆ ಇಳಿಬಿದ್ದಿರುತ್ತದೆ. ಅಥವಾ ಈ ವಿಗ್ರಹಗಳ ಜೊತೆಗೆ ಕಿರೀಟಮುಕುಟರಹಿತರಾಗಿ ಲಕ್ಷ್ಮಣನಂತೆಯೇ ಕಾಣುವ ಹಾಗೆ ಭರತ-ಶತ್ರುಘ್ನರಿರುತ್ತಾರೆ. ರಾಮ-ಸೀತೆಯರನ್ನುಳಿದು ಮಿಕ್ಕೆಲ್ಲರ ತಲೆಗಳೂ ನಡುಗಡೆ ಜುಟ್ಟುವುಳ್ಳವುಗಳಾಗಿರ ಬೇಕು. ಭರತನು ರಾಮನ ಬಲಗಡೆಯಲ್ಲಿ ಧನುರ್ಬಾಣಗಳನ್ನು ಯಾ ಕತ್ತಿ ಮತ್ತು ಗುರಾಣಿಗಳನ್ನು ಹಿಡಿದಿರುತ್ತಾನೆ. ರಾಮನಂತೆಯೇ ಭರತನು ಶ್ರೀವತ್ಸಲಾಂಛನನಾಗಿರುತ್ತಾನೆ. ಶ್ರೀವತ್ಸ (Cruciform ಅರ್ಥಾತ್ ಎದೆ ನಡುವಿನ ಸುಳಿಗುರುಳು); ಅಲ್ಲದೆ, ಕೌಸ್ತುಭರತ್ನಧರನಾಗಿರುತ್ತಾನೆ. ಲಕ್ಷ್ಮಣ ಸದೃಶನಾಗಿ ಶತ್ರುಘ್ನನು ರಾಮನೆಡಕ್ಕಿರುತ್ತಾನೆ.

8. (೧) ಬಲರಾಮ ಮತ್ತು ಕೃಷ್ಣ: ಬಲರಾಮನನ್ನು ಪ್ರತ್ಯೇಕನಾದ ಸ್ವತಂತ್ರ ದೇವನನ್ನಾಗಿ ಮೂರ್ತಿಸಿದುದು ವಿರಳ. ಮಧ್ಯಮ ದಶತಾಲ ಮಾನದ ೧೨೦ ಅಂಗುಲಗಳ ಎತ್ತರದ ಮೂರ್ತಿ ಅವನದು. ಅವನು ಮುಸಲಾಯುಧ, ಹಲಾಯುಧಗಳನ್ನು ಬಲ ಮತ್ತು ಎಡ ಕೈಗಳಲ್ಲಿ ಹಿಡಿದಿರುತ್ತಾನೆ; ನೆತ್ತಿಯ ಮೇಲೆ ಜುಟ್ಟು ಕಟ್ಟಿಕೊಂಡಿರುವಾತನು. ಅಥವಾ ಅವನ

ಕಣ್ಣುಗುಡ್ಡೆಗಳು ಉರುಳುತ್ತಿರುತ್ತವೆ. ಒಂದೇ ಕಿವಿಯಲ್ಲಿ ಕುಂಡಲವಿರುತ್ತದೆ. ಅಥವಾ ಅವನು ಎರಡೇ ಕೈಗಳಿದ್ದರೆ ಗದೆ-ಹಲಗಳನ್ನು ಹಿಡಿದಿರುತ್ತಾನೆ, ನಾಲ್ಕಿದ್ದರೆ ಹಿಂದಿನ ಬಲಗೈಯಲ್ಲಿ ಮುಸಲ (ಒನಕೆ); ಎದುರಿನ ಬಲಗೈಯಲ್ಲಿ ಚಕ್ರ, ಹಿಂದಿನ ಎಡಗೈಯಲ್ಲಿ ಹಲ (ನೇಗಿಲು), ಎದುರಿನ ಎಡಗೈಯಲ್ಲಿ ಶಂಖ ಇವುಗಳನ್ನು ಹಿಡಿದಿರುತ್ತಾನೆ. ಅವನ ಬಲಗಡೆ ಅವನ ಹೆಂಡತಿ ರೇವತೀದೇವಿಯು ತನ್ನ ಬಲಗೈಯಲ್ಲಿ ಪದ್ಮವನ್ನು ಹಿಡಿದಿರುತ್ತಾಳೆ. ಬಲರಾಮನ ಕೌತುಕಬೇರವು ಹೀಗೂ ಇರಬಹುದು ಅಥವಾ ನಾಲ್ಕು ನಾಲ್ಕು ಕೈಗಳಲ್ಲಿ ಕೇವಲ ಶಂಖ, ಚಕ್ರ, ಗದಾ, ಪದ್ಮ, ವನಮಾಲಾಧಾರಿಯಾಗಿಯೂ ಇರಬಹುದು.

೨, ೪ ಯಾ ೮ ಕೈಗಳನ್ನುಳ್ಳ ದುರ್ಗೆ ಬಲರಾಮ-ಕೃಷ್ಣರ ನಡುವೆ ಇರಬಹುದು. ಅವಳ ಕೈಗಳಲ್ಲಿ ತಾವರೆ, ಪುಸ್ತಕ, ಅಕ್ಷಮಾಲೆ ವರದಮುದ್ರೆ, ಕಮಂಡಲು, ಧನುಸ್ಸು, ಕನ್ನಡಿ, ಬಾಣಗಳಿರುತ್ತವೆ.

(೨) ಕೃಷ್ಣ : ಮಧ್ಯಮದಶತಾಲಮಾನದ ೧೨೦ ಅಂಗುಲ ಎತ್ತರ; ಕಿರೀಟವನ್ನು ಅಥವಾ ಜುಟ್ಟವನ್ನು ಧರಿಸಿರುತ್ತಾನೆ; ಬಲಗೈಯಲ್ಲಿ ವಿಲಕ್ಷಣವಾಗಿ ಬಾಗಿರುವ ದಂಡ; ಎತ್ತಿದ ಎಡಗೈ ಮೊಣಕೈ ಹತ್ತಿರಕ್ಕೆ ಹೋಗಿರುತ್ತದೆ—ಈ ಕೈ ಶಂಖ ಹಿಡಿದಿರಬಹುದು ಯಾ ಕೆಳಗೆ ಇಳಿಬಿದ್ದಿರಬಹುದು. ಉಳಿದೆಲ್ಲ ವಿವರಗಳಲ್ಲೂ ಕೃಷ್ಣನು ಬಲರಾಮನನ್ನು ಹೋಲುತ್ತಾನೆ; ಆದರೆ ಅವನ ಹೆಂಡತಿ ರುಕ್ಮಿಣಿ ಅವನ ಬಲಗಡೆ ನಿಂತಿರುತ್ತಾಳೆ—ಅವಳ ಕೂದಲು ವೈಲಾಸಿಕವಾಗಿ ಮೇಲಕ್ಕೆ ಕಟ್ಟಲ್ಪಟ್ಟಿರುತ್ತದೆ; ಅವಳು ಹೂ ಮುಡಿದುಕೊಂಡಿರುತ್ತಾಳೆ. ಅವಳ ಎಡಗೈ ಕಮಲ ಹಿಡಿದಿರುತ್ತದೆ; ಬಲಗೈ ಇಳಿಬಿದ್ದಿರುತ್ತದೆ. ಕೃಷ್ಣನ ಎಡಕ್ಕೆ ಸತ್ಯಭಾಮೆ ಇರುತ್ತಾಳೆ. ಅವಳ ತಲೆಗೂದಲು ರುಕ್ಮಿಣಿಯ ತಲೆಗೂದಲ ಹಾಗೇ ವೈಲಾಸಿಕ ರೀತಿಯಲ್ಲಿ ಬಾಚಲ್ಪಟ್ಟಿರುತ್ತದೆ; ತನ್ನ ಬಲಗೈಯಲ್ಲಿ ಸತ್ಯಭಾಮೆಯು ಕಮಲಧರೆ; ಅವಳ ಎಡಗೈ ಇಳಿಬಿದ್ದಿರುತ್ತದೆ; ಅಥವಾ ಈ ಇಬ್ಬರು ದೇವಿಯರೂ ಕರಂಡಮುಕುಟಧಾರಿಣಿಯಾಗಿರಬಹುದು. ಕೃಷ್ಣನೆಡಕ್ಕೆ ಗರುಡನು ನಿಂತಿರುತ್ತಾನೆ; ಅವನ ಹಸ್ತಗಳು ಅಂಜಲಿರೂಪದಲ್ಲಿರುತ್ತವೆ. ಕೃಷ್ಣನ ಯಾ ವಿಷ್ಣುವಿನ ಕೌತುಕಬೇರವೂ ಹೀಗೇ ಇರುತ್ತದೆ: ಅಥವಾ ಕೃಷ್ಣನು ಚಕ್ರವನ್ನೂ ರುಕ್ಮಿಣಿಯು ನೀಲೋತ್ಪಲವನ್ನೂ ಹಿಡಿದಿರುತ್ತಾರೆ.

## ಉಪಭೇದಗಳು

೧. ಕೃಷ್ಣನ ನವನೀತ ನೃತ್ತಮೂರ್ತಿ: ಬಲಗೈಯಲ್ಲಿ ಬೆಣ್ಣೆ ಮುದ್ದೆಯನ್ನು ಹಿಡಿದು ಅಥವಾ ಅಭಯ ಮುದ್ರೆಯನ್ನು ತೋರಿಸುತ್ತ ನವನೀತ ಕೃಷ್ಣ ನಿಂತಿರುತ್ತಾನೆ. ಬಲಗಾಲು ನೃತ್ಯಭಂಗಿಯಲ್ಲಿರುತ್ತದೆ—ಮೇಲೆತ್ತಿ ಒಳಮುಖವಾಗಿ ಬಾಗಿರುತ್ತದೆ.

(೨) ಗಾನಗೋಪಾಲಮೂರ್ತಿ ಯಾ ವೇಣುಗೋಪಾಲಮೂರ್ತಿ ; ಮೂರ್ತಿಯು ದನಗಾಹಿಗಳಿಂದ ಸುತ್ತುವರಿಯಲ್ಪಟ್ಟಿರುತ್ತದೆ. ನೆಲದ ಮೇಲೆ ಎಡಗಾಲನ್ನಿಟ್ಟು ಕೃಷ್ಣನು ನೆಟ್ಟಗೆ ನಿಂತಿರುತ್ತಾನೆ; ಬಲಗಾಲು ಹೆಬ್ಬೆರಳಿಂದ ನೆಲವನ್ನು ಮುಟ್ಟುವಂತಿರುತ್ತದೆ; ಎರಡೂ ಕೈಗಳಿಂದ ಕೊಳಲನ್ನು ಹಿಡಿದು ಅದರ ಒಂದು ತುದಿಯನ್ನು ಬಾಯಿಗೆ ತಗುಲಿಸಿಕೊಂಡಂತಿರುತ್ತದೆ. ನವಿಲು ಗರಿಗುಚ್ಛವು ತಲೆಯ ಮೇಲಿನ ಅಲಂಕಾರವಾಗಿರುತ್ತದೆ. ಈ ಕೃಷ್ಣನ ಮೂರ್ತಿ ನಿಂತಿರುವುದು ತ್ರಿಭಂಗಿಯಲ್ಲಿ.

(೩) ಮದನಗೋಪಾಲಮೂರ್ತಿ: ಇದು ಉಪವೇಣುಗೋಪಾಲಮೂರ್ತಿ; ಇದು ತೆಂಕಾಶಿಯಲ್ಲಿದೆ. ಇದಕ್ಕೆ ಅಷ್ಟಭುಜಗಳು. ಪದ್ಮ, ಪರಶು ಮತ್ತು ಚಕ್ರಗಳು ಬಲಗೈಗಳಲ್ಲಿರುತ್ತವೆ; ಇಕ್ಷುಚಾಪ, ಪಾಶ ಮತ್ತು ಶಂಖಗಳು ಎಡಗೈಗಳಲ್ಲಿರುತ್ತವೆ. ಉಳಿದೆರಡು ಕೈಗಳಲ್ಲಿ ಕೊಳಲುಗಳು.

(೪) ಪಾರ್ಥಸಾರಥಿ ಕೃಷ್ಣ : ಒಂದು ಕೈಯಲ್ಲಿ ಲಗಾಮುಗಳನ್ನೂ ಚಾವಟಿಯನ್ನೂ ಹಿಡಿದುಕೊಂಡು, ರಥ ಹತ್ತುವ ಭಂಗಿಯಲ್ಲಿ ಈ ಮೂರ್ತಿ ಇರುತ್ತದೆ. ಬಲಗಾಲು ನೆಲದ ಮೇಲೂ ಎಡಗಾಲು ರಥಮುಖದ ಮೇಲೂ ನಿಂತಿರುತ್ತದೆ. ರಥದಲ್ಲಿ ಅದರ ಗೋಪುರದ ಮೇಲೆ ಧ್ವಜ ಪತಾಕೆ ಇರುತ್ತದೆ ಮತ್ತು ಅದಕ್ಕೆ ಉತ್ತಮಾಶ್ವಗಳನ್ನು ಕಟ್ಟಲಾಗಿರುತ್ತದೆ. ಧನುರ್ಧಾರಿ ಅರ್ಜುನನು ನೆಲದ ಮೇಲೆ (ಅಥವಾ ರಥಿಕ ಸ್ಥಾನದಲ್ಲಿ) ಅಂಜಲಿಹಸ್ತನಾಗಿರುತ್ತಾನೆ. ಕೃಷ್ಣನ ಬಲಗೈ ವ್ಯಾಖ್ಯಾನ ಮುದ್ರೆಯಲ್ಲಿರುತ್ತದೆ. ನಿಜವಾದ ಚಿತ್ರವು ಏತದ್ಭಿನ್ನವು. ಟ್ರಿಪ್ಲಿಕೇನಿನ ಪಾರ್ಥಸಾರಥಿ ವಿಗ್ರಹಕ್ಕೆ ರಥವಿಲ್ಲ, ರಥಿಕ ಅರ್ಜುನನಿಲ್ಲ ಆದರೆ ಕೇವಲ ಕೃಷ್ಣಪರಿವಾರ ಮಾತ್ರವಿದೆ.

(೫) ಕಾಲೀಯಾಹಿಮರ್ದನ ಕೃಷ್ಣ : ಇದು ನವನೀತನೃತ್ಯಕೃಷ್ಣ ಮೂರ್ತಿಗೆ ಸದೃಶವಾಗಿದೆ. ಮೂರ್ತಿಯ ಎಡಗಾಲು ಕಾಲೀಯಶಿರಃಸ್ಥವಾಗಿದೆ.

ಈ ಕೃಷ್ಣ ಜಟ್ಟಿಗಳ ಕಾಚವನ್ನು ಧರಿಸಿದ್ದಾನೆ; ಕಾಚವು ಕಸೂತಿ ಕೆಲಸ ದಿಂದ ಸುಂದರವಾಗಿದೆ; ಬಲಗೈ ಅಭಯ ಹಸ್ತವಾಗಿದೆ, ಎಡಗೈ ಕಾಲಿಯನ ಬಾಲವನ್ನು ಎತ್ತಿಹಿಡಿದುಕೊಂಡಿದೆ. ಬಲಗಾಲನ್ನೀ ಕೃಷ್ಣನು ಒದೆಯುವ ಭಂಗಿಯಲ್ಲಿ ಉತ್‌ಕ್ಷೇಪಿಸಿದ್ದಾನೆ.

(೬) ಗೋವರ್ಧನಧರ ಕೃಷ್ಣ : ಬಲಗೈಯಲ್ಲಿ ಗೋವರ್ಧನ ಪರ್ವತ ವನ್ನು ಎತ್ತಿ ಹಿಡಿದಿದೆ ಈ ವಿಗ್ರಹ—ಕೆಲವೊಮ್ಮೆ ಇದು ಅದನ್ನು ಎಡಗೈ ಯಲ್ಲೇ ಎತ್ತಿಹಿಡಿದಿರುವುದುಂಟು. ದೇಹವನ್ನು ಬಲಕ್ಕೆ ಯಾ ಎಡಕ್ಕೆ ಚಾಚಿಕೊಂಡಿರುವುದುಂಟು—ಪರ್ವತಧಾರಿತ್ವಕ್ಕನುಗುಣವಾಗಿ. ದನಗಳೂ ದನಗಾಹಿಗಳೂ ದನಗಾಹಿಸಿಯರೂ ಸುತ್ತಮುತ್ತಲೂ ನಿಂತಿರುತ್ತಾರೆ. ಗೋವರ್ಧನಗಿರಿಯ ಮೇಲೆ ಕಾಡು, ವನ್ಯಮೃಗವೃಂದ ಮತ್ತು ವ್ಯಾಧರು ಕಾಣುತ್ತಾರೆ.

(೭) ಬಾಲಕೃಷ್ಣ ಯಾ ವಟಪತ್ರಶಾಯಿ ಕೃಷ್ಣ : ಮೂರ್ತಿಗೆ ಅಂಬೆ ಗಾಲ ಭಂಗಿ; ಕೆಲವೊಮ್ಮೆ ಕೈಯಲ್ಲಿ ಬೆಣ್ಣೆಮುದ್ದೆ ಇರುತ್ತದೆ. ಮೂರ್ತಿಯು ಆಲದೆಲೆಯ ಮೇಲೆ ಮಲಗಿರುತ್ತದೆ.

(೮) ಸಂತಾನ ಗೋಪಾಲಕೃಷ್ಣ : ಯಶೋದಾಂಕಶಾಯಿ; ಅವಳ ಮೊಲೆ ಗಳತ್ತ ಒಂದು ಕೈ ಚಾಚಿಕೊಂಡಿರುತ್ತದೆ. ಇನ್ನೊಂದು ಅವಳ ಮೊಲೆಯ ಮೇಲಿರುತ್ತದೆ.

9. ಹಿಂದು ಬುದ್ಧಮೂರ್ತಿ : ಪಾದಗಳು ಪದ್ಮಾಂಕಿತ, ಹಾಗೇ ಹಸ್ತ ಗಳೂ—ಈ ಧ್ಯಾನಿಬುದ್ಧ ವಿಗ್ರಹ—ಪದ್ಮಾಂಕಿತ, ತಲೆಯ ಮೇಲೆ ಪುಟ್ಟಪುಟ್ಟ ತಿಲಕ ವೃತ್ತಗಳು; ಶರೀರವು ದಿವ್ಯ ಸುಂದರ. ಪದ್ಮಾಸನವೇ ಆಸನ. ಕಿವಿಗಳಲ್ಲಿ ಪದಕಗಳು ತೂಗಾಡುತ್ತವೆ. ವಸ್ತ್ರವು ಕಾಷಾಯ. ಹೊದಿಕೆಯು (ವಲ್ಲಿಯು) ವಲ್ಕಲ (ನಾರುಮಡಿ). ವರದ-ಅಭಯ ಹಸ್ತ ಗಳು. ಮೂರ್ತಿಯ ಭಂಗಿಯು ಯೋಗಾರೂಢನದು. ಎಡಗೈಯು ತೊಡೆಯ ಮೇಲಿರುತ್ತವೆ. ಹಿಂದು ಬೌದ್ಧಾವತಾರವಾದದ್ದು ಕೃಷ್ಣಾವತಾರವಾದ ಬಳಿಕ—ಅಂದರೆ ದ್ವಾಪರಯುಗದಲ್ಲೇ ಜಲಂಧರ ಸಂಹಾರಕ್ಕಾಗಿ ದಿಗಂಬರನಾಗಿ ಅನಂತರ ಯೋಗವನ್ನು ಹಿಡಿದದ್ದು. ತುಲಸೀಪೂಜೆಗಿದು ಮೂಲವು. ಈ ಬುದ್ಧನು ಪ್ರಭಾವಳಿಯಿಂದ ಕೂಡಿರುತ್ತಾನೆ. ಜಯದೇವಗೀತೋಕ್ತಬುದ್ಧನು ಕಲಿ

ಯುಗದ ಸುಪ್ರಸಿದ್ಧ ಬುದ್ಧ; ಇಲ್ಲಿ ವಿಷ್ಣುವಿಗ್ರಹ ಬುದ್ಧಾವತಾರ ಸೂಚಕವಾಗಿ ಬದಿಯಲ್ಲಿರುವುದುಂಟು—ಹಾಗೇ ದತ್ತಾತ್ರೇಯ, ಯೋಗೇಶ್ವರ ಯಾ ಚೆನ್ನಕೇಶವಗಳೂ ವಿಷ್ಣುವಲಯ (ಪರಿಧಿ) ಪರಿವಾರ (ಪ್ರಭಾವಲಯ)ವಾಗಿ ಬುದ್ಧನನ್ನು ಸುತ್ತಿಕೊಂಡಿರುವುದುಂಟು. ವಿಷ್ಣುವಿನ ಇತರ ಎಲ್ಲ ಅವತಾರಗಳೂ ಕೆಲವೆಡೆ ಬುದ್ಧನ ಪರಿವಾರ ದೇವತೆಗಳಾಗಿ ಕೆತ್ತಲ್ಪಟ್ಟಿರುವುದೂ ಕಂಡುಬರುತ್ತದೆ. ಪ್ರಭಾವಲಿಯು (ವಲಯವು) ಮೂಲ ವಿಗ್ರಹದ ಹಿನ್ನೆಲೆಯಾಗಿರುತ್ತದೆ. ಜೈನರ ೨೪ ತೀರ್ಥಂಕರರು ಈ ಹಿಂದು ಧ್ಯಾನಿಬುದ್ಧನನ್ನು ಹೋಲುತ್ತಾರೆ; ಮಹಾಪುರುಷರ ೩೨ ಲಕ್ಷಣಗಳಿವರಿಗಿವೆ.

ಬೌದ್ಧರ ಬುದ್ಧನಿಗೆ ವಸ್ತುತಃ ವಿಷ್ಣು ಮುಂತಾದವರ ಸಂಬಂಧವಿಲ್ಲ. ಅವನು ಕುರುಳ್ಗಳಸವಣನಂತಿದ್ದರೂ ಮಲ್‌ವಸ್ತ್ರಾಚ್ಛಾದನದಿಂದ (ಧ್ಯಾನವಲ್ಲದ್ದೇ) ಪ್ರತ್ಯೇಕವಾಗಿ ಲಕ್ಷ್ಯನಾಗುತ್ತಾನೆ.

ಬಟ್ಟೆಯನ್ನು ಉಪವೀತದಂತೆ ಹೊದೆದಿರುವುದು ಬುದ್ಧನ ಮುಖ್ಯ ಲಕ್ಷಣವಾಗಿದೆ; ಹಾಗೇ ನೆತ್ತಿಯ ಮೇಲೆ ಜುಟ್ಟವಿಟ್ಟುಕೊಂಡಿರುವುದೂ ಗಣ್ಯವು. ಜೈನ ವಿಗ್ರಹಗಳೆಲ್ಲಾ ಸಂಪೂರ್ಣವಾಗಿ ನಗ್ನ ಮತ್ತು ಅವಕ್ಕೆ ಜುಟ್ಟು (ಶಿಖೆ) ಇರುವುದೇ ಇಲ್ಲ. ವಿಷ್ಣುವಿನ ಶ್ರೀವತ್ಸಲಾಂಛನ ಮಾತ್ರ ಸರ್ವಸಾಧಾರಣ. ಈ ಗುರುತು ಇಲ್ಲಿ ಎದೆಯ ಬಲಗಡೆ ಚಿಕ್ಕ ತ್ರಿಕೋನ ರೂಪವಲ್ಲಿರುತ್ತದೆ; ಇದರ ತುದಿಯು ಮೇಲ್ಮುಖವಾಗಿರುತ್ತದೆ.

10. ಕಲ್ಕ್ಯವತಾರ: ಅಗ್ನಿಪುರಾಣ-ವಿಷ್ಣುಪುರಾಣಗಳು ಕಲ್ಕಿವರ್ಣನೆಗೆ ಆಧಾರ ನೀಡುತ್ತವೆ. ಶಂಬಲಗ್ರಾಮದ ವಿಷ್ಣುಯಶಸ್ಸೆಂಬವನಿಗೆ ಮಗನಾಗಿ ಕಲ್ಕಿ ಜನಿಸುತ್ತಾನೆ; ವೈಖಾನಸಾಗಮದ ಪ್ರಕಾರ ಕಲ್ಕಿಯು ಹಯವದನ (ಅಶ್ವತ್ಥಾಮಸದೃಶ). ಅವನಿಗೆ ನಾಲ್ಕು ಕೈಗಳು. ಅವುಗಳಲ್ಲಿ ಶಂಖ, ಚಕ್ರ, ಖಡ್ಗ, ಖೇಟಕಗಳಿರುತ್ತವೆ. ಕಲ್ಕಿಯ ಕೌತುಕಬೇರ ರಚನೆಗೂ ಇದೇ ಮಾದರಿಯು. ಇಲ್ಲವಾದರೆ ಇತರ ಕೆಲವೆಡೆ ಕಲ್ಕಿಯು ಧನುರ್‌ಬಾಣಗಳನ್ನು ಧರಿಸಿ ಕುದುರೆಯನ್ನೇರಿ ಅಗ್ನಿಪುರಾಣ ಹೇಳಿದಂತೆ ರಚಿತನಾಗಬಹುದು—ಖಡ್ಗ, ಬಾಣ, ಚಕ್ರ, ಶಂಖಗಳನ್ನು ಹಿಡಿದಿರಲೂ ಬಹುದು. ವಿಷ್ಣುಧರ್ಮೋತ್ತರ ಪುರಾಣದಂತೆ ಕಲ್ಕಿಯು ದ್ವಿಭುಜನಾಗಿರಲೂ ಬಹುದು.

ವಿಷ್ಣುವಿನ ೨೪ ಬಗೆಯ ವಿಗ್ರಹಗಳು ಇವು : ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶ: ಪದ್ಮನಾಭ, ದಾಮೋದರ, ಸಂಕರ್ಷಣ, ವಾಸುದೇವ, ಪ್ರದ್ಯುಮ್ನ ಅನಿರುದ್ಧ, ಪುರುಷೋತ್ತಮ, ಅಧೋಕ್ಷಜ, ನರಸಿಂಹ, ಅಚ್ಯುತ, ಜನಾರ್ದನ, ಉಪೇಂದ್ರ, ಹರಿ, ಶ್ರೀಕೃಷ್ಣ—ಈ ಎಲ್ಲ ವಿಗ್ರಹಗಳೂ ತಮ್ಮ ತಮ್ಮ ನಾಲ್ಕು ಕೈಗಳಲ್ಲಿ ಬೇರೆ ಬೇರೆ ರೀತಿಗಳಿಂದ ಶಂಖ, ಚಕ್ರ, ಗದೆ, ಪದ್ಮಗಳನ್ನು ಹಿಡಿದಿರುತ್ತವೆ—ಭುಜಸಂಖ್ಯಾನುಸಾರ ಅಥವಾ ಅವತಾರೋದ್ದೇಶಾನುಸಾರ.

ವಿಷ್ಣು ಶಕ್ತಿಗಳು ೧೪ : ಕೇಶವ—ಕೀರ್ತಿ, ನಾರಾಯಣ—ಕಾಂತಿ, ಮಾಧವ—ತುಷ್ಟಿ, ತ್ರಿವಿಕ್ರಮ—ಶಾಂತಿ, ವಾಮನ—ಕ್ರಿಯೆ, ಅಚ್ಯುತ—ದಯೆ, ಶ್ರೀಧರ—ಮೇಧೆ, ಹೃಷಿಕೇಶ–ಹರ್ಷ, ಪದ್ಮನಾಭ—ಶ್ರದ್ಧೆ, ದಾಮೋದರ—ಲಜ್ಜೆ, ವಾಸುದೇವ—ಲಕ್ಷ್ಮಿ, ಸಂಕರ್ಷಣ—ಸರಸ್ವತಿ, ಪ್ರದ್ಯುಮ್ನ—ಪ್ರೀತಿ, ಅನಿರುದ್ಧ—ರತಿ.

ಮಾನುಷವಾಸುದೇವ, ದೈವಿಕವಾಸುದೇವ ಎಂಬುದು ವಾಸುದೇವ ದ್ವೈವಿಧ್ಯವು.

ವಿಷ್ಣುವಿನ ಗೌಣಾವತಾರಗಳು : ಪುರುಷ, ಕಪಿಲ, ಯಜ್ಞಮೂರ್ತಿ ಅಥವಾ ಯಜ್ಞೇಶ, ವ್ಯಾಸ, ಧನ್ವಂತರಿ, ದತ್ತಾತ್ರೇಯ, ವೈಕುಂಠ ಅಥವಾ ವೈಕುಂಠನಾಥ, ತ್ರೈಲೋಕ್ಯಮೋಹನ, ಅನಂತ, ವಿಶ್ವರೂಪ, ಲಕ್ಷ್ಮೀನಾರಾಯಣ, ಹಯಗ್ರೀವ, ಆದಿಮೂರ್ತಿ (ಆದಿಶೇಷಶಾಯಿ), ಜಲಶಾಯಿ, ಧರ್ಮ, ವರದರಾಜ ಅಥವಾ ಕರಿವರದ, ರಂಗನಾಥ, ವೆಂಕಟೇಶ, ಪಂಢರಿನಾಥ ಯಾ ವಿಠೋಬ, ಜಗನ್ನಾಥ, ನರನಾರಾಯಣ ಯಾ ಹರಿಕೃಷ್ಣ, ಮನ್ಮಥ ಪ್ರದ್ಯುಮ್ನ—ಎಂಬೀ ೨೨.

ವಿಶ್ವಕರ್ಮಸೂತ್ರಾನುಸಾರವಾಗಿ—ಲಕ್ಷ್ಮಿಯು ವಿಷ್ಣುವಿನ ಎಡಕ್ಕೆ—ಲಕ್ಷ್ಮೀನಾರಾಯಣ ವಿಗ್ರಹದಲ್ಲಿ. ಲಕ್ಷ್ಮಿಯ ಬಲಗೈ ನಾರಾಯಣನ ಕೊರಳನ್ನು ಸುತ್ತಿಕೊಂಡಿರುತ್ತದೆ. ನಾರಾಯಣನ ಎಡಗೈ ಅವಳನ್ನು ಆಲಿಂಗಿಸಿರುತ್ತದೆ, ನಡುವನ್ನು ಸುತ್ತಿಕೊಂಡಿರುತ್ತದೆ. ಲಕ್ಷ್ಮಿಯ ಎಡಗೈಯು ಕಮಲಧಾರಿ; ಪಕ್ಕದಲ್ಲಿ ಸಿದ್ಧಿಯು ಚಾಮರಧಾರಿಣಿಯಾಗಿ ನಿಂತಿರುತ್ತಾಳೆ;

ಸ್ವಲ್ಪ ಕೆಳಗೆ ಗರುಡನು ಬಲಬದಿಯಲ್ಲಿ ಇರುತ್ತಾನೆ. ಶಂಖ-ಚಕ್ರಗಳ ಆಯುಧಪುರುಷರು ವಿಷ್ಣುವಿನ ಪಕ್ಕಕ್ಕಿರುತ್ತಾರೆ. ಈ ನಾರಾಯಣ ವಿಷ್ಣುವಿನ ಮುಂದೆ ಬ್ರಹ್ಮ-ರುದ್ರ(ಶಿವ)ರು ಅಂಜಲಿಹಸ್ತ ಉಪಾಸಕರಾಗಿ ನಿಂತಿರುತ್ತಾರೆ. ಬ್ರಹ್ಮನ ಸೊಂಟಕ್ಕೆ ಅಗಲವಾದ ಪಟ್ಟಿ (Belt) ಇರುತ್ತದೆ; ರುದ್ರನಿಲ್ಲಿ ಯೋಗಪಟ್ಟಧಾರಿಯೂ ಅಸ್ಥಿಪಂಜರಧರನೂ ಆಗಿರುತ್ತಾನೆ.

ದೇವತೆಗಳ ಸಾಮಾನ್ಯ ಆಯುಧಗಳು : ವಜ್ರ, ಶಕ್ತಿ, ದಂಡ, ಖಡ್ಗ, ಪಾಶ, ಅಂಕುಶ, ಗದೆ, ತ್ರಿಶೂಲ, ಪದ್ಮ, ಚಕ್ರ ಮತ್ತು ಧ್ವಜ—ಎಂದು ಹನ್ನೊಂದು.

II

ಮಹೇಶ್ವರನ ಲೀಲಾಮೂರ್ತಿಗಳು ೨೫ : ಚಂದ್ರಶೇಖರ, ಉಮಾಸಹಿತ, ವೃಷಭಾರೂಢ, ನೃತ್ತ, ಕಲ್ಯಾಣಸುಂದರ, ಭಿಕ್ಷಾಟನ, ಕಾಮದಹನ, ಕಾಲಾಂತಕ, ಜಲಂಧರಸಂಹಾರ (ವಧ), ಗಜಾರಿ; ವೀರಭದ್ರ; ಶಂಕರ-ನಾರಾಯಣ, ಅರ್ಧನಾರೀಶ್ವರ, ಕಿರಾತ, ಕಂಕಾಲ, ಚಂಡೇಶಾನುಗ್ರಹ, ವಿಷಾಪಹರಣ, ಚಕ್ರದಾನ, ವಿಘ್ನೇಶ್ವರಾನುಗ್ರಹ, ಸೋಮಾಸ್ಕಂದ, ಏಕಪಾದ, ಸುಖಾಸನ, ದಕ್ಷಿಣಾಮೂರ್ತಿ ಮತ್ತು ಲಿಂಗೋದ್ಭವ ಮೂರ್ತಿಗಳು. ಚಂದ್ರಶೇಖರ ಪದದಿಂದ ಹಿಡಿದು ಸುಖಾಸನ ಪದದ ವರೆಗಿನ (ತತ್ಸಹಿತವಾಗಿ) ಪದಗಳ ಮುಂದೆ ಮೂರ್ತಿ ಎಂಬ ಪದವನ್ನು ಸೇರಿಸಬೇಕು. ಶಂಕರನಾರಾಯಣನು ಹರಿಹರನು. ಅರ್ಧನಾರೀನಟೇಶ್ವರ ಎಂಬ ವಿಗ್ರಹಗಳೂ ಸೇರಿದರೆ ಅವು ೨೭ ಆಗುತ್ತವೆ.

## ರುದ್ರ-ಶಿವನ ಪಂಚ ಆಸನಗಳು

ಸದ್ಯೋಜಾತ, ವಾಮದೇವ; ಅಘೋರ, ತತ್ಪುರುಷ, ಈಶಾನ.

## ಏಕಾದಶ ರುದ್ರರು

(೧) ಅಂಶುಮದ್ಭೇದಾಗಮದಂತೆ—ಮಹಾದೇವ, ಶಿವ, ಶಂಕರ, ನೀಲಲೋಹಿತ, ಈಶಾನ, ವಿಜಯ, ಭೀಮ, ದೇವದೇವ, ಭವೋದ್ಭವ, ರುದ್ರ, ಕಪಾಲೀಶ.

(೨) ವಿಶ್ವಕರ್ಮ ಶಿಲ್ಪದ ಪ್ರಕಾರ—ಅಜ, ಏಕಪಾದ, ಅಹಿರ್ಬುಧ್ನ್ಯ, ವಿರೂಪಾಕ್ಷ, ರೇವತ, ಹರ, ಬಹುರೂಪ, ತ್ರ್ಯಂಬಕ, ಸುರೇಶ್ವರ, ಜಯಂತ, ಮತ್ತು ಅಪರಾಜಿತ.

(೩) ರೂಪಮಂಡನದಲ್ಲಿ ಹೇಳಿದಂತೆ—ತತ್ಪುರುಷ, ಅಘೋರ, ಈಶಾನ, ವಾಮದೇವ, ಸದ್ಯೋಜಾತ, ಮೃತ್ಯುಂಜಯ, ಕಿರಣಾಕ್ಷ, ಶ್ರೀಕಂಠ, ಅಹಿರ್ಬುಧ್ನ್ಯ, ವಿರೂಪಾಕ್ಷ ಮತ್ತು ಬಹುರೂಪ. ಇಲ್ಲಿ ತ್ರ್ಯಂಬಕನನ್ನೂ ಸೇರಿಸಿ ದ್ವಾದಶರುದ್ರರನ್ನಾಗಿ ಲೆಕ್ಕಿಸಲಾಗಿದೆ.

## ಸದಾಶಿವಮೂರ್ತಿಭೇದಗಳು

(೧) ಉಪವಿಷ್ಟ, ಜಟಾಮುಕುಟಧರಪಂಚಮುಖ, ದಶಭುಜ, ಅಭಯ-ವರದಹಸ್ತ; ಇತರ ಕೈಗಳು ಅಕ್ಷಮಾಲೆ, ಪಾಶ, ಖಡ್ಗ, ಟಂಕೆ ಯಾ ಪರಶು, ಕಮಂಡಲು ಮತ್ತು ಅನ್ಯ ಪದಾರ್ಥಗಳನ್ನು ಹಿಡಿದಿರಬಹುದು.

(೨) ಪೂರ್ವೋಕ್ತ ಪಂಚಮುಖಗಳಲ್ಲಿ ಒಂದೊಂ ಸುತ್ತಲೂ ಜ್ವಾಲಾ ಜಿಹ್ವೆಗಳು ಆಟವಾಡುತ್ತಿರುವುದು (ಇದನ್ನು ಉಗ್ರಸದಾಶಿವಮೂರ್ತಿ ಎಂದೂ ಕರೆಯುತ್ತಾರೆ); ಈ ದ್ವಿತೀಯ ಸದಾಶಿವಮೂರ್ತಿಗಿರುವುದು ೧೮ ಕೈಗಳು; ಅವು ಶೂಲ, ಖೇಟಕ, ಮುಸಲ, ಘಂಟೆ, ಕಪಾಲಗಳನ್ನೂ ಇತರ ಆಯುಧಗಳನ್ನೂ ಹಿಡಿದಿರುತ್ತವೆ. ಕೊರಳ ಹಾರಗಳು ಕಾಲುಗೆಜ್ಜೆ ಗಂಟಿನ ವರೆಗೆ ನೇತಾಡುತ್ತಿರುತ್ತವೆ.

(೩) ಮಹಾಸದಾಶಿವಮೂರ್ತಿ: ಈ ಮಹೇಶ್ವರಮೂರ್ತಿಗೆ ೨೫ ತಲೆಗಳು, ೫೦ ಭುಜಗಳು; ಈ ಭುಜಗಳೆಲ್ಲಾ ಆಯುಧಪಾಣಿಗಳು. ಇಷ್ಟ ಪಂಚಮುಖಗಳು ಪಂಚಬ್ರಹ್ಮರನ್ನು ಪ್ರತಿನಿಧಿಸುತ್ತವೆ. ಈ ಪ್ರತಿಯೊಂದೂ ಮತ್ತೈದರಿಂದ ಪ್ರತಿನಿಧಿತವಾಗಿದೆ. ಆದುದರಿಂದ ೫ × ೫ = ೨೫ ರುಂಡಗಳು. ಪ್ರತಿಯೊಂದು ಮುಖವೂ ತ್ರ್ಯಂಬಕ. ಕಿವಿಗಳಲ್ಲಿ ಕುಂಡಲಗಳು ರಾರಾಜಿಸುತ್ತವೆ. ಹಾಗೇ ಸರ್ವಾಲಂಕಾರವೂ ವಿಶಿಷ್ಟ. ಈಶಾನ, ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋಜಾತ—ಎಂಬಿವೇ ಆ ಪಂಚಬ್ರಹ್ಮರು. ಇವೆಲ್ಲಾ ಹುಟ್ಟಿದ್ದು ನಿಷ್ಕಲಶಿವನಾದ ಪರಬ್ರಹ್ಮಸ್ವರೂಪದ ವಾಸುದೇವನಿಂದ. ಈ ಅಷ್ಟಮೂರ್ತಿಗಳಿಗೆ ಶರ್ವ, ಈಶಾನ, ಉಗ್ರ, ಭವ, ಮಹಾದೇವ,

ಭೀಮ, ಶಿವ, ಪಶುಪತಿ ಎಂಬಿವು ಅನುಕ್ರಮವಾಗಿ ಅಧಿಷ್ಠಾನದೇವತೆಗಳು. ಇತರ ವಿವಿಧ ಹಸ್ತಧೃತ ಆಯುಧಗಳು: ಢಕ್ಕೆ, ಖಟ್ವಾಂಗ, ಮಾತುಲುಂಗ, ಸರ್ಪ, ವಿದ್ಯೆ (ಜ್ಞಾನಮುದ್ರೆ), ಮುದ್ಗರ, ಧನುಸ್ಸು, ಚಕ್ರ, ತರ್ಜನಿ ಗಳು ಏಕಪಾರ್ಶ್ವದಲ್ಲಿ (ಒಂದು ಕಾಲಿನ ಬದಿಗೆ).

(೪) ಮಹೇಶಮೂರ್ತಿ : ನಾಲ್ಕು ದೃಶ್ಯಮುಖಗಳು ಒಂದು ಅದೃಶ್ಯ ಮುಖ ಇದಕ್ಕಿರುತ್ತದೆ; ೨ ಕಾಲುಗಳೂ ೧೦ ತೋಳುಗಳೂ ಇದಕ್ಕಿವೆ. ಪಾರ್ಶ್ವದಲ್ಲಿ ಶಕ್ತಿವಿಗ್ರಹವಿರುತ್ತದೆ; ಕೈಗಳಲ್ಲೆಲ್ಲಾ ಆಯುಧಗಳು, ಈ ಶಕ್ತಿಗೆ ಮೂರು ಕಂಗಳು ಮತ್ತು ೪ ತೋಳುಗಳು. ಇದಕ್ಕೆ ಕರಂಡಮುಕುಟ ಹಾಗೂ ಆಭರಣಗಳು ಭೂಷಣಗಳು. ಅಭಯ, ವರದ, ನೀಲೋತ್ಪಲ ಮತ್ತು ಅಕ್ಷಮಾಲೆಗಳು ಹಸ್ತಧಾರ್ಯಗಳು.

(೫) ತ್ರಿಮೂರ್ತಿ : ಇದೂ ಒಂದು ಮಹೇಶ್ವರಮೂರ್ತಿಯ ಭೇದವು. ಇದರ ಶಿರಸ್ ತ್ರಯವೂ ಜಟಾಮುಕುಟಭೂಷಿತ. ಅಂಶುಮದ್‌ಭೇದಾಗಮ, ವಿಶ್ವಕರ್ಮಶಿಲ್ಪ, ರೂಪಮಂಡನ ಗ್ರಂಥಗಳು ಮೂರು ಭಿನ್ನ ನಾಮಾಂಕಿತ ಏಕಾದಶರುದ್ರರನ್ನು ಈ ಮೂರ್ತಿ (ರುಂಡ) ತ್ರಯಕ್ಕೆ ಹೇಳಿವೆ.

## III

## ರುದ್ರನ ಸಂಹಾರವಿಗ್ರಹಗಳು

ಕಾಮಾಂತಕಮೂರ್ತಿ, ಗಜಾಸುರಸಂಹಾರಮೂರ್ತಿ, ಕಾಲಾರಿಮೂರ್ತಿ, ತ್ರಿಪುರಾಂತಕಮೂರ್ತಿ, ಶರಭೇಶಮೂರ್ತಿ, ಬ್ರಹ್ಮಶಿರಶ್ಛೇದಮೂರ್ತಿ, ಭೈರವ ಮೂರ್ತಿ, ಮಲ್ಲಾರಿಶಿವಮೂರ್ತಿ, ಜಲಂಧರಮೂರ್ತಿ, ವೀರಭದ್ರಮೂರ್ತಿ, ಅಂಧಕಾಸುರವಧಮೂರ್ತಿ—ಎಂಬೀ ೧೧ ರುದ್ರನ (ಶಿವನ) ಸಂಹಾರ ಮೂರ್ತಿಗಳು.

## ವಿಷ್ಣುಧರ್ಮೋತ್ತರೋಕ್ತ ಭೈರವಮೂರ್ತಿ ಪ್ರಕಾರಗಳು

ಸಾಮಾನ್ಯ ಲಕ್ಷಣಗಳು : ಲಂಬೋದರ, ವೃತ್ತರಕ್ತನೇತ್ರ, ಪಾರ್ಶ್ವ ದಂತ (ಕೋರೆದಾಡೆಗಳನ್ನುಳ್ಳಾತ), ವಿಶಾಲನಾಸಿಕವಿವರ, ರುಂಡ–(Skull) ಮಾಲಾಧರಕಂಠ, ಸರ್ಪಾಲಂಕಾರ, ಗಜಚರ್ಮಾಂಬರಧರ, ಆಯುಧಧರ ಮತ್ತು

ವಿವಿಧ ಪ್ರಾಣಿಗಳುಳ್ಳದ್ದಾಗಿರುವುದು ಮತ್ತು ಒಂದು ಹಾವಿನಿಂದ ಪಾರ್ವತಿಯನ್ನು ಹೆದರಿಸುತ್ತಿರುವುದು—ಇಷ್ಟು.

(೧) ವಟುಕಭೈರವ : ಅಷ್ಟಭುಜ, ಖಟ್ವಾಂಗಧರ, ಪಾಶಹಸ್ತ, ಶೂಲಪಾಣಿ, ಡಮರುಗೈ, ಕಪಾಲಹಸ್ತ. ಸರ್ಪಭೂಷಣ, ಮಾಂಸಪಾಣಿ ಮತ್ತು ಅಭಯಹಸ್ತ; ಪಕ್ಕದಲ್ಲಿ ಶ್ವದೇವ (ನಾಯಿ)ನಿರುತ್ತಾನೆ.

ಅಥವಾ

ಭೈರವವಟುವು ಕೆಂಜಡೆಯುವನು, ತ್ರ್ಯಕ್ಷ (ರೂಪಮಂಡನಾನುಸಾರ) ಕೆಮ್ಮೈಯಾತನು; ಶ್ವವಾಹನ (ಶ್ವಾರೂಢ), ಸಮಗ್ರನಗ್ನ ಮತ್ತು ಭೂತಗಣಾವೃತ.

(೨) ಸ್ವರ್ಣಾಕರ್ಷಣ ಭೈರವ; ಚತುರ್ಭುಜ, ತ್ರ್ಯಕ್ಷ, ಸರ್ವಾಭರಣ, ಸ್ವರ್ಣರತ್ನಭರಿತ ಪಾತ್ರಹಿಡಿದ ಕೈಗಳನ್ನುಳ್ಳಾತನು, ಚಾಮರ, ತೋಮರ ಮತ್ತು ಮಹಾಶೂಲಗಳು ಹೆಗಲುಗಳ ಮೇಲಿರುತ್ತವೆ.

(೩) ಅಷ್ಟವರ್ಗೀಯ ಅಷ್ಟಪ್ರಕಾರಕ ಭೈರವಮೂರ್ತಿಗಳು ಒಟ್ಟು ೬೪. ಆ ಅಷ್ಟವರ್ಗಗಳಾವುವೆಂದರೆ—ಅಸಿತಾಂಗಭೈರವ, ರುರುಭೈರವ, ಚಂಡಭೈರವ, ಕ್ರೋಧಭೈರವ, ಉನ್ಮತ್ತಭೈರವ, ಕಪಾಲಭೈರವ, ಭೀಷಣಭೈರವ ಮತ್ತು ಸಂಹಾರಭೈರವ—ಎಂದು.

## ವೀರಭದ್ರ ವಿಗ್ರಹ

ವೀರಭದ್ರನು ಸಹಾಸ್ರಾಕ್ಷ, ಸಹಸ್ರಶೀರ್ಷ, ಮಹಾಭುಜಬಲ, ಎಡ-ಬಲ ದವಡೆಗಳಿಂದ ಹೊರಟ ಕೋರೆದಾಡೆಗಳನ್ನುಳ್ಳಾತನು; ಹತ್ತು ಕೈಗಳಲ್ಲಿ ಬಾಣ, ಪರಶು, ಖಡ್ಗ, ಬಿಲ್ಲು, ಒನಕೆ, ಹಗ್ಗ (ಉರುಳು), ಉರುಟುಗುರಾಣಿ, ಅಂಬು, ಕತ್ತಿಗಳನ್ನು ಹಿಡಿದು, ಜಟಾಮುಕುಟಧಾರಿಯಾಗಿ ದಕ್ಷಪ್ರಜಾಪತಿಯ ತಲೆಯ ಮೇಲೆ ನಿಂತಿರುತ್ತಾನೆ.

## ಇತರ ಮುಖ್ಯ ರುದ್ರಮೂರ್ತಿಗಳು

[೧] ಗಂಗಾಧರಮೂರ್ತಿ, [೨] ಅರ್ಧನಾರೀಶ್ವರಮೂರ್ತಿ, [೩] ಹರ್‍ಯರ್ಧಮೂರ್ತಿ ಅಥವಾ ಬಾದಾಮಿಯ ಹರಿಹರಮೂರ್ತಿ ಮತ್ತು ಪುಣೆಯ ಹರಿಹರ

ಮೂರ್ತಿ, [೪] ಕಲ್ಯಾಣಸುಂದರಮೂರ್ತಿ, [೫] ಕಂಚಿನ ವೃಷಭಾರೂಢ ಮೂರ್ತಿ, [೬] ವಿಷಾಪಹಾರಮೂರ್ತಿ.

## ರುದ್ರನ ನೃತ್ತಮೂರ್ತಿಗಳು

[೧] ನಟರಾಜ, [೨] ನೃತ್ತಮೂರ್ತಿ [೩] ಕಟಿಸಮಮೂರ್ತಿ, [೪] ಲಲಿತಮೂರ್ತಿ, [೫] ಲಲಾಟತಿಲಕಮೂರ್ತಿ, [೬] ಚತುರಮೂರ್ತಿ ಮತ್ತು [೭] ತಲಸಂಸ್ಫೋಟಿತಮೂರ್ತಿ.

ದಕ್ಷಿಣಾಮೂರ್ತಿ

ಜ್ಞಾನದಕ್ಷಿಣಾಮೂರ್ತಿ, ಯೋಗದಕ್ಷಿಣಾಮೂರ್ತಿ, ವೀಣಾಧರದಕ್ಷಿಣಾಮೂರ್ತಿ

ಅಲ್ಲದೆ—ಕಂಕಾಲಮೂರ್ತಿ, ಭಿಕ್ಷಾಟನಮೂರ್ತಿ.

## ರುದ್ರನ ಅನುಗ್ರಹಮೂರ್ತಿಗಳು

[೧] ಚಂಡೇಶ್ವರಾನುಗ್ರಹಮೂರ್ತಿ [೨] ವಿಷ್ಣ್ವನುಗ್ರಹಮೂರ್ತಿ ಯಾ ಚಕ್ರದಾನಮೂರ್ತಿ, [೩] ನಂದೀಶಾನುಗ್ರಹಮೂರ್ತಿ, [೪] ಕಿರಾತಾರ್ಜುನ ಮೂರ್ತಿ, [೫] ವಿಘ್ನೇಶ್ವರಾನುಗ್ರಹಮೂರ್ತಿ, [೬] ರಾವಣಾನುಗ್ರಹಮೂರ್ತಿ.

## ಅವೈದಿಕ ರುದ್ರಭೈರವನ ಅಷ್ಟಮೂರ್ತಿಗಳು

ಕಾಪಾಲಿಕ ಭೈರವನು ಸ್ಫಟಿಕಧಾರಿ, ಅರ್ಧಚಂದ್ರಾಭರಣ, ಜಟಾಧಾರಿ; ಇವನು ಸೃಷ್ಟಿ-ಸ್ಥಿತಿ-ಲಯಕಾರಕನು. ಇವನ ಅವತಾರಗಳೆಂಟು :

[೧] ಅಸಿತಾಂಗ, [೨] ರುರು, [೩] ಚಂಡ, [೪] ಕ್ರೋಧ, [೫] ಉನ್ಮತ್ತ, [೬] ಕಾಪಾಲ, [೭] ಭೀಷ್ಮ, [೮] ಸಂಹಾರಭೈರವ—ಈ ಭೈರವರಿಗೆ ಸಮಾನ ರಾದ ದೇವತೆಗಳೆಂದರೆ: [೧] ವಿಷ್ಣು, [೨] ಬ್ರಹ್ಮ, [೩] ಸೂರ್ಯ, [೪] ರುದ್ರ, [೫] ಇಂದ್ರ, [೬] ಚಂದ್ರ, [೭] ಯಮ ಮತ್ತು [೮] ಪರಬ್ರಹ್ಮ.

## ಮಾಲವ-ಆಭೀರ ದೇಶೀಯ ಭೈರವರು

[೧] ತಾಂಡವಭೂಷಣ, [೨] ಭಸ್ಮೋದ್ಧೂಲಿತ ಜಟಾಮಕುಟಧಾರಿ, [೩] ಅಸ್ಥಿಹಾರ, [೪] ಸ್ಫಟಿಕ-ಪುತ್ರದೀಪಮಣಿಹಾರ, [೫] ಉಪವೀತಧರ ಮತ್ತು ಅಗ್ನಿಹಸ್ತ, [೧] ಗೆಜ್ಜೆಗುಣಿತದ ಡಮರುಧಾರಿ. ಈ ಎಲ್ಲ ಭೈರವರೂ ತ್ರ್ಯಂಬಕರು.

## ಮಾನಿಯರ್ ವಿಲಿಯಂಸ್ ಹೇಳಿದ ಭೈರವರು

[೧] ಮಹಾಭೈರವ, [೨] ಸಂಹಾರಭೈರವ, [೩] ಅಸಿತಾಂಗಭೈರವ, [೪] ರುರುಭೈರವ, [೫] ಕಾಲಭೈರವ, [೬] ಕ್ರೋಧಭೈರವ, [೭] ತಾಮ್ರಚೂಡ ಯಾ ಕಪಾಲಭೈರವ, [೮] ಚಂದ್ರಚೂಡ ಯಾ ರುದ್ರಭೈರವ.

ಅಥವಾ

[೧] ವಿದ್ಯಾರಾಜಭೈರವ, [೨] ಕಾಮರಾಜಭೈರವ, [೩] ನಾಗರಾಜಭೈರವ, [೪] ಸ್ವಚ್ಛಂದರಾಜಭೈರವ, [೫] ಲಂಬಿತರಾಜಭೈರವ, [೬] ದೇವರಾಜಭೈರವ, [೭] ಉಗ್ರರಾಜಭೈರವ ಮತ್ತು [೮] ವಿಘ್ನರಾಜಭೈರವ.

## ಭೈರವನ ಅಸಿತಾಂಗಗಣ

Black army

ವಿಶಾಲಾಕ್ಷ, ಮಾರ್ತಾಂಡ, ಮೋದಕಪ್ರಿಯ, ಸ್ವಚ್ಛಂದ, ವಿಘ್ನಸಂತುಷ್ಟ, ಖೇಚರ ಮತ್ತು ಸಚರಾಚರ. ಇವರೆಲ್ಲಾ ತ್ರಿಶೂಲ-ಡಮರು-ಪಾಶ-ಖಡ್ಗಹಸ್ತರು.

## ಭೈರವನ ರುರುಗಣ

Terrible forms / Savage demoniac forms

ಕ್ರೋಡದಂಷ್ಟ್ರ, ಜಟಾಧರ, ವಿಶ್ವರೂಪ, ವಿರೂಪಾಕ್ಷ, ನಾನಾರೂಪಧರ, ವಜ್ರಹಸ್ತ ಮತ್ತು ಮಹಾಕಾಯ. ಇವರೆಲ್ಲಾ ಅಕ್ಷಮಾಲಾ-ಅಂಕುಶ-ಪುಸ್ತಕ-ವೀಣಾಪಾಣಿಗಳು.

## ಭೈರವನ ಚಂಡಗಣ

ಚಂಡ, ಪ್ರಳಯಾಂತಕ, ಭೂಮಿಕಂಪ, ನೀಲಕಂಠ, ವಿಷ್ಣು, ಕುಲಪಾಲಕ, ಮುಂಡಪಾಲ, ಕಾಮಪಾಲ. ಇವರು ಅಗ್ನಿ-ಶಕ್ತಿ-ಗದೆ-ಕುಂಡಗಳನ್ನು ಧರಿಸಿದವರು.

541

## ಭೈರವನ ಕ್ರೋಧ ಗಣ

ಕ್ರೋಧ, ಪಿಂಗಲೇಕ್ಷಣ, ಅಭ್ರರೂಪ, ಧರಾಪಾಲ, ಕುಟಿಲ, ಮಂತ್ರ ನಾಯಕ, ರುದ್ರ ಮತ್ತು ಪಿತಾಮಹ. ಇವರು ಖಡ್ಗ-ಖೇಟಕ-ಮಹಾಖಡ್ಗ-ಪರಶುಧಾರಿಗಳು;

## ಉನ್ಮತ್ತ ಭೈರವಗಣ

ಉನ್ಮತ್ತ, ವಟುನಾಯಕ, ಶಂಕರ, ಭೂತಬೇತಾಳ, ತ್ರಿಣೇತ್ರ, ತ್ರಿಪುರಾಂತಕ, ವರದ, ಪರ್ವತಾವಾಸ, ಇವರು ಕುಂಡ-ಖೇಟಕ-ಪರಿಘ-ಭಿಂಡಿಪಾಲಧರರು.

## ಕಪಾಲ ಭೈರವಗಣ

ಕಾಪಾಲ, ಶಶಿಭೂಷಣ, ಹಸ್ತಿಚರ್ಮಾಂಬರಧರ, ಯೋಗೀಶ, ಬ್ರಹ್ಮ-ರಾಕ್ಷಸ, ಸರ್ವಜ್ಞ, ಸರ್ವದೇವೇಶ, ಸರ್ವಭೂತಹೃದಿಸ್ಥಿತ. ಇವರಿಗೆ ಹಿಂದಿನ ಭೈರವಾಯುಧಗಳೇ ಅನ್ವಯಿಸುತ್ತವೆ.

## ಭೀಷ್ಮ ಭೈರವಗಣ

ಭೀಷಣ, ಭಯಹರ, ಸರ್ವಜ್ಞ, ಕಾಲಾಗ್ನಿಮಹಾರೌದ್ರ, ದಕ್ಷಿಣ, ಮುಖರ ಮತ್ತು ಅಸ್ಥಿರ. ಇವರ ಆಯುಧಗಳು ಯಥಾಪೂರ್ವ.

## ಸಂಹಾರ ಭೈರವಗಣ

ಅತಿರಿಕ್ತಾಂಗ, ಕಾಲಾಗ್ನಿ, ಪ್ರಿಯಂಕರ ಘೋರನಾದ, ವಿಶಾಲಾಕ್ಷ ಯೋಗೀಶ, ದಕ್ಷಸಮಸ್ಥಿತ. ಇವರ ಆಯುಧಗಳೂ ಯಥಾಪೂರ್ವ.

# ಪ್ರತ್ಯೇಕ ವಿಗ್ರಹಸ್ಥ ದೇವಿಯರು

[೧] ಶ್ರೀಚಕ್ರದೇವಿ, [೨] ಮಹಾದೇವಿ, [೩] ನೀಲಕಂಠಿ [೪] ದುರ್ಗೆ, [೫] ಕ್ಷೇಮಂಕರಿ, [೬] ಹರಸಿದ್ಧಿ, [೭] ರುದ್ರಾಂಶದುರ್ಗೆ, [೮] ವನದುರ್ಗೆ, [೯] ಅಗ್ನಿದುರ್ಗೆ, [೧೦] ಜಯದುರ್ಗೆ, [೧೧] ವಿಂಧ್ಯವಾಸಿನಿದುರ್ಗೆ, [೧೨] ರಿಪುಮಾರಿಕಾದುರ್ಗೆ, [೧೩] ಮಹಿಷಾಸುರಮರ್ದಿನಿ ಯಾ ಕಾತ್ಯಾಯನಿ, [೧೪] ಚಂಡಿಕೆ, [೧೫] ನಂದೆ, [೧೬] ನವದುರ್ಗೆ, [೧೭] ಭದ್ರಕಾಳಿ, [೧೮] ಮಹಾಕಾಳಿ, [೧೯] ಅಂಬೆ, [೨೦] ಅಂಬಿಕೆ, [೨೧] ಮಂಗಲೆ, [೨೨] ಸರ್ವಮಂಗಲೆ, [೨೩] ಕಾಳರಾತ್ರಿ, [೨೪] ಲಲಿತೆ, [೨೫] ಗೌರಿ, [೨೬] ಉಮೆ, [೨೭] ಪಾರ್ವತಿ, [೨೮] ರಂಭೆ, [೨೯] ತೋತಲೆ, [೩೦] ತ್ರಿಪುರೆ (ಗೌರೀ ದೇವಸ್ಥಾನದ ಅಷ್ಟ ದಿಕ್‌ಪಾಲಿಕೆಯರು), [೩೧] ಭೂತ ಮಾತೆ, [೩೨] ಯೋಗನಿದ್ರೆ, [೩೩] ವಾಮೆ [೩೪] ಜ್ಯೇಷ್ಠೆ, [೩೫] ರೌದ್ರಿ, [೩೬] ಕಾಲಿಕೆ, [೩೭] ಕಲವಿಕರಣಿಕೆ, [೩೮] ಬಲವಿಕರಣಿಕೆ, [೩೯] ಬಲಪ್ರಮ ಥನಿ, [೪೦] ಸರ್ವಭೂತದಮನಿ, [೪೧] ಮನೋನ್ಮನಿ, [೪೨] ವಾರುಣಿ,[೪೩] ರಕ್ತಚಾಮುಂಡೆ, [೪೪] ಶಿವದೂತಿ, [೪೫] ಯೋಗೇಶ್ವರಿ, [೪೬] ಭೈರವಿ, [೪೭] ತ್ರಿಪುರಭೈರವಿ,[೪೮] ಶಿವೆ, [೪೯] ಕೀರ್ತಿ, [೫೦] ಮಹಾಸಿದ್ಧಿ, [೫೧] ಮಹರ್ಧಿ, [೫೨] ಕ್ಷಮೆ, [೫೩] ದೀಪ್ತಿ, [೫೪] ರತಿ, [೫೫] ಭದ್ರೆ, [೫೬] ಜಯೆ, [೫೭] ವಿಜಯೆ, [೫೮] ಕಾಲೀಮುಖಿ, [೫೯] ಘಂಟಾಕರ್ಣಿ, [೬೦] ಜಯಂತಿ, [೬೧] ದಿತಿ, [೬೨] ಅರುಂಧತಿ, [೬೩] ಅಪರಾಜಿತೆ, [೬೪] ಸುರಭಿ, [೬೫] ಕೃಷ್ಣೆ, [೬೬] ಇಂದ್ರಾಕ್ಷಿ, [೬೭] ಅನ್ನಪೂರ್ಣೆ, [೬೮] ತುಲಸೀದೇವಿ, [೬೯] ಅಶ್ವಾ ರೂಢೆ, [೭೦] ಭುವನೇಶ್ವರಿ, [೭೧] ಬಾಲೆ, [೭೨] ರಾಜಮಾತಂಗಿ, [೭೩]ಲಕ್ಷ್ಮಿ, [೭೪] ಮಹಾಲಕ್ಷ್ಮಿ [೭೫] ಶ್ರೀದೇವಿ, [೭೬] ಭೂದೇವಿ, [೭೭] ಸರಸ್ವತಿ, [೭೮] ಸಪ್ತಮಾತೃಕಾಗಳು.[೭೯] ಜ್ಯೇಷ್ಠಾದೇವಿ, [೮೦] ಚಾಮುಂಡೆ.

---

**ಟಿಪ್ಪಣಿ** - ನಾರಾಯಣೀದೇವಿಯು ತ್ರ್ಯಂಬಕೆ, ದುರ್ಗೆ.

ಉದಾ : ಸರ್ವಮಂಗಲಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।
ಶರಣ್ಯೇ ತ್ರ್ಯಂಬಕೀದೇವಿ ನಾರಾಯಣಿ ನಮೋಸ್ತುತೇ ॥

ನಾರಾಯಣಿಯು ನಾರಾಯಣನ ಪತ್ನಿಯಲ್ಲ; ನಾರಾಯಣನ ಅಕ್ಕ, ಅವನ ಪರ್ಯಾಯ ಶಕ್ತಿಸಂಪನ್ನೆ, ರುದ್ರಪತ್ನಿಯು. ಶಿವಪುರಾಣಾನುಸಾರವಾಗಿ ಅವಳು ಸರ್ವದೇವಶಕ್ತಿಸಂಕೇತ. ಪರಬ್ರಹ್ಮವಾದ ಶಿವನಿಗಿಂತ ಭಿನ್ನೆಯಲ್ಲದ, ಅವನ ಕಾರ್ಯವನ್ನು ನಿರ್ವಹಿಸುವ, ಗಂಡುಹೆಣ್ಣು. ಅವಳು ತ್ರಿಮೂರ್ತಿಭೇದಕ್ಕೆ, ಅವರವರ ಪತ್ನಿಯರ ಭೇದಕ್ಕೆ—ಮಹಾ ಒಡ್ಡಿ ನಿಂತವಳು, ಅವಳ ಅವತಾರಗಳು ದೈತ್ಯಾರಿಗಳಾದ ಹರಿ-ಹರರಷ್ಟೆ. "ಶಕ್ತಿ" ಎಂದರೇ ಮೂಲತಃ ಅವಳು. ಅವಳೂ ದೈತ್ಯನಾಶಿನಿ. ಅವಳು ಅರ್ಧನಾರೀಶ್ವರಿ ಅಥವಾ ಈಶ್ವರಿ. ದೇವಿಯರ ಕಿರೀಟಾದಿಗಳು ಅವರವರ ಪತಿಗಳಿಗಿರುವಂತೆಯೇ ಇರುತ್ತವೆ.

# ಗಣಪತಿ ಪ್ರತಿಮೆಗಳು

ಗಣಪತಿಯು ರುದ್ರನ ಆಕಾಶಭಾಗದ ಸಂಕೇತವು. ಅವನ ವಿಗ್ರಹವು ಪದ್ಮಾಸನದ ಅಥವಾ ಇಲಿಯ ಯಾ ಸಿಂಹದ ಮೇಲೆ ಕುಳಿತಿರುತ್ತದೆ ಅಥವಾ ನಿಂತಿರುತ್ತದೆ. ಅದು ದ್ವಿಭಂಗದ ಯಾ ತ್ರಿಭಂಗದ ನಿಲುವೆಯಲ್ಲಿರುತ್ತದೆ; ಸಮಭಂಗಿಯಲ್ಲಿರುವುದೂ ಉಂಟು.

ಉಪವಿಷ್ಟ ಗಣಪತಿಯು ಎಡಗಾಲು ಮಡಿಚಿಕೊಂಡು ಪೀಠದ ಮೇಲೆ ವಿರಮಿಸಿರುತ್ತದೆ ಮತ್ತು ಬಲಗಾಲು ಎಡತೊಡೆಯ ಮೇಲೆ ವಿರಮಿಸುವಂತೆ ಕರ್ತರಿಭಂಗಿಯಲ್ಲಿರುತ್ತದೆ; ಸಾಕ್ಷಾತ್ತಾಗಿ ಬಲಗಾಲು ಬಾಗಿ ಒಂದು ಪೀಠದ ಮೇಲೆ ನಿಂತಿರುತ್ತದೆ. ಗಣಪತಿಗೆ ಕಣ್ಣುಗಳು ಎರಡು ಯಾ ಮೂರು, ಭುಜಗಳು ೪, ೬, ೧೦ ಯಾ ೧೬. ಅವನು ಸರ್ಪ ಯಜ್ಞೋಪವೀತಿ ಸರ್ಪಮೇಖಲಾಧರನು.

(೧) ಬಾಲಗಣಪತಿ : ಮಾವಿನ ಹಣ್ಣನ್ನೂ ಬಾಳೆಹಣ್ಣನ್ನೂ ಹಲಸಿನ ಹಣ್ಣನ್ನೂ ಕಬ್ಬಿನಕೋಲನ್ನೂ ತನ್ನ ೪ ಕೈಗಳಲ್ಲಿ ಹಿಡಿದಿರುವನಲ್ಲದೆ ತನ್ನ ಸೊಂಡಿಲಿನಲ್ಲಿ ಜೇಲದ ಹಣ್ಣನ್ನೂ ಹಿಡಿದುಕೊಂಡಿರುತ್ತಾನೆ.

(೨) ತರುಣ ಗಣಪತಿ : ಪಾಶ, ಅಂಕುಶ, ಜಂಬೂಫಲ, ಸಾಸಿವೆ ಮತ್ತು ಬಿದಿರುಗೋಲುಗಳನ್ನು ಹಿಡಿದಿರುತ್ತಾನೆ.

(೩) ಭಕ್ತಿವಿಘ್ನೇಶ್ವರ : ತೆಂಗಿನಕಾಯಿ, ಮಾವಿನಹಣ್ಣು, ಕಲ್ಲುಸಕ್ಕರೆ, ಪಾಯಸದ ಲೋಟಗಳನ್ನು ತನ್ನ ೪ ಕೈಗಳಲ್ಲಿ ಹಿಡಿದಿರುತ್ತಾನೆ.

(೪) ವೀರವಿಘ್ನೇಶ್ವರ : ವೇತಾಳ (VAMPIRE), ಶಕ್ತ್ಯಾಯುಧ, ಬಾಣ, ಖಡ್ಗ, ಖೇಟಕ (ಗುರಾಣಿ), ಮುದ್ಗರ (ಕೊಡತಿಗೆ), ಗದೆ, ಅಂಕುಶ, ಪಾಶ, ಶೂಲ, ಕುಂಡ, ಕೊಡಲಿ, ಧ್ವಜ ಮುಂತಾದವುಗಳನ್ನು ತನ್ನ ೧೬ ಕೈಗಳಲ್ಲಿ ಹಿಡಿದಿರುತ್ತಾನೆ.

(೫) ಶಕ್ತಿಗಣೇಶ : ಪದ್ಮಾಸನಾಸೀನ. ಪೃಷ್ಠಗಳಲ್ಲಿ ಪರಸ್ಪರ ಸಂಪರ್ಕ ವಿಲ್ಲ. ಪಾಶ ಮತ್ತು ವಜ್ರ ಅಥವಾ ದಂತ, ಅಂಕುಶ, ಪಾಶ, ಅಕ್ಷಮಾಲೆ

ಗಳನ್ನು ನಾಲ್ಕು ಕೈಗಳಲ್ಲೂ, ಮೋದಕವನ್ನು ಸೊಂಡಿಲ ತುದಿಯಲ್ಲೂ ಶಕ್ತಿ ಗಣೇಶನು ಹಿಡಿದಿರುತ್ತಾನೆ. ಶಕ್ತಿಗಣೇಶ್ವರನ ಪ್ರಭೇದಗಳು : ಅಷ್ಟಭುಜದ ಲಕ್ಷ್ಮೀಗಣಪತಿ, ಉಚ್ಛಿಷ್ಟಗಣಪತಿ, ಮಹಾಗಣಪತಿ, ಊರ್ಧ್ವಗಣಪತಿ, ಪಿಂಗಳಗಣಪತಿ—ಎಂದು. ಲಕ್ಷ್ಮೀಗಣಪತಿಯು ಗಿಳಿ, ದಾಳಿಂಬ, ಕಮಲ, ರತ್ನಖಚಿತ ಹೇಮಜಲಪಾತ್ರ, ಅಂಕುಶ, ಪಾಶ, ಕಲ್ಪಕಲತೆ, ಬಾಣವೆಂಬ ಸಸ್ಯಮುಕುಲಗಳಿಂದ ಅಲಂಕೃತನಾಗಿರುತ್ತಾನೆ. ಅವನ ಸೊಂಡಿಲಿನಿಂದ ನೀರು ಸುರಿಸುತ್ತಿರುತ್ತಾನೆ.

ಅಥವಾ

ಮುಕ್ಕಣ್ಣು, ದಂತ-ಚಕ್ರ-ಅಭಯ ಹಸ್ತ, ನಾಲ್ಕನೆಯ ಕೈಯಲ್ಲಿ ಲಕ್ಷ್ಮಿಯನ್ನು ಅಪ್ಪಿಕೊಂಡಿರುವುದು, ಅವಳೂ ಅವನನ್ನು ತಬ್ಬಿಕೊಂಡಿರುವುದಲ್ಲದೆ ಕೈಯಲ್ಲಿ ತಾವರೆಯನ್ನು ಹಿಡಿದುಕೊಂಡಿರುವುದು—ಈ ಲಕ್ಷಣಗಳಿರಬಹುದು. ಉಚ್ಛಿಷ್ಟಗಣಪತಿಗೆ ಪದ್ಮ, ದಾಳಿಂಬ, ವೀಣೆ, ಒಂದು ಮುಷ್ಟಿ ಭತ್ತ ಹಾಗೂ ಅಕ್ಷಮಾಲೆಗಳು ಲಕ್ಷಣಗಳಾಗಿರಬಹುದು.

ಅಥವಾ

ಅಂಬು, ಬಿಲ್ಲು, ಪಾಶ, ಅಂಕುಶ ಹಿಡಿದಿರುವುದೂ ಪದ್ಮಾಸನಸ್ಥನಾಗಿರುವುದೂ ಸಿದ್ಧಿಯೊಡನೆ ಕುಳ್ಳಿರಲು ಯತ್ನಿಸುತ್ತಿರುವುದೂ ಲಕ್ಷಣಗಳಾಗಬಹುದು.

ಅಥವಾ

ಉಪವೇಶನ; ಪಾಶ-ಅಂಕುಶ-ಕಬ್ಬಿನ ತುಂಡುಗಳನ್ನು ಮೂರು ಕೈಗಳಲ್ಲಿ ಹಿಡಿದು ನಾಲ್ಕನೆಯದರಲ್ಲಿ ಮಗ್ನದೇವಿಯ ಮಧ್ಯಸ್ಥಾನವನ್ನು ಹಿಡಿದಿರುವುದು ಮೂರು ಕಿವಿಗಳು, ರತ್ನಮುಕುಟ, ಮಗ್ನದೇವಿ ಅವನ ತೊಡೆಯ ಮೇಲೆ ಕುಳಿತಿರುವುದು. ಈ ಮಗ್ನೆಯ ಹೆಸರು ವಿಘ್ನೇಶ್ವರಿ. ಸಾಕ್ಷಾತ್ತಾಗಿ ಪಾಶಾಂಕುಶಗಳನ್ನೂ ಲಡ್ಡುಗಳನ್ನೂ ಮೂರು ಕೈಗಳಲ್ಲಿ ಹಿಡಿದ ಈ ಉಚ್ಛಿಷ್ಟ ಮೂರ್ತಿಯು ನಾಲ್ಕನೆಯದರಿಂದ ತನ್ನ ಸೊಂಡಿಲಿಗೆ ತಾಗಿರುವ ಮಗ್ನದೇವಿಯ ಹಿಂದಿನ ಪೃಷ್ಠಭಾಗಗಳನ್ನು ಆಲಿಂಗಿಸಿಕೊಂಡಿರುತ್ತದೆ. ದೇವಿಯ ಬಲಗೈಯು ಈ ಗಣಪತಿಯ ಮಧ್ಯಸ್ಥಾನವನ್ನು ಹಿಡಿದುಕೊಂಡಿರುತ್ತದೆ. ಎಡಗೈಯಲ್ಲಿ ದೇವೀವಿಗ್ರಹವು ಕಮಲವನ್ನು ಹಿಡಿದಿರುತ್ತದೆ. ಮಹಾಗಣಪತಿಯ ವಿಗ್ರಹವು ಮೂರನೆಯದು. ಅದಕ್ಕೆ ದಶಭುಜಗಳು. ಅವುಗಳಿಂದ ಅದು ಕಮಲ, ದಾಳಿಂಬ, ರತ್ನಖಚಿತಜಲಪಾತ್ರ, ಗದೆ, ತನ್ನ ಮುರಿದ ದಂತ,

ಇಕ್ಷುಖಂಡ, ಭತ್ತದ ಚುಂಗುಗಳು ಮತ್ತು ಪಾಶ ಇವುಗಳನ್ನು ಹಿಡಿದು ಕೊಂಡಿರುತ್ತದೆ. ಶಕ್ತಿದೇವಿಯು ಅವನ ತೊಡೆಯನ್ನೇರಿ ಕಮಲಧಾರಿಣಿಯಾಗಿ ಕುಳಿತಿರುತ್ತಾಳೆ. ಆಮೇಲಿನ ಗಣೇಶೋಪವಿಭಾಗವು ನಾಲ್ಕನೆಯದು. ಅದರ ಹೆಸರು ಊರ್ಧ್ವಗಣಪತಿ ಎಂದು. ಅದು ಕಲ್ಹಾರ, ಭತ್ತದ ಚುಂಗುಗಳು, ಇಕ್ಷುಚಾಪ, ಬಾಣ, ದಂತ ಇವುಗಳನ್ನು ಐದು ಕೈಗಳಲ್ಲಿ ಹಿಡಿದುಕೊಂಡು ಅರನೆಯದರಿಂದ ಶಕ್ತಿದೇವಿಯ ಹಿಂಬದಿಯ ಕೆಳಪೃಷ್ಠಭಾಗಗಳನ್ನು ಅಪ್ಪಿ ಕೊಂಡಿರುತ್ತದೆ. ಪಿಂಗಲಗಣಪತಿಯು ಶಕ್ತಿಗಣೇಶನ ಐದನೆಯ ಹಾಗೂ ಕೊನೆಯ ಉಪವಿಭಾಗ. ಇದಕ್ಕೂ ಆರು ಕೈಗಳು; ಅವುಗಳಿಂದ ಅದು ಮಾವಿನಹಣ್ಣು, ಪುಷ್ಪಗುಚ್ಛ, ಕಬ್ಬಿನತುಂಡು, ಸಾಸಿವೆ, ಮೋದಕ, ಕೊಡಲಿ ಇವುಗಳನ್ನು ಹಿಡಿದು ಲಕ್ಷ್ಮೀದೇವಿಯನ್ನು ತನ್ನೆಡಕ್ಕೆ ಕುಳ್ಳಿರಿಸಿಕೊಂಡಿರುತ್ತದೆ.

(೬) ಹೇರಂಬಗಣೇಶ : ಇವನಿಗೆ ಪಂಚಗಜಮುಖ—ಈ ಐದುಮುಖಗಳು ನಾಲ್ಕು ದಿಕ್ಕುಗಳತ್ತ ಹಾಗೂ ಆಕಾಶದತ್ತ ಅನುಕ್ರಮವಾಗಿ ತಿರುಗಿವೆ. ಇವನು ಸಿಂಹವಾಹನನು. ಪಾಶ, ದಂತ, ಅಕ್ಷಮಾಲೆ, ಪರಶು, ತ್ರಿಶಿರ ಮುದ್ಗರ, ಮೋದಕ, ವರದ, ಅಭಯ ಎಂಬಿವನ್ನು ಇವನ ಎಂಟು ಕೈಗಳು ತೋರಿಸುತ್ತವೆ.

(೭) ಪ್ರಸನ್ನಗಣಪತಿ : ಇವನಿಗೆ ತ್ರಿಭಂಗ, ಪದ್ಮಾಸನ; ಪಾಶಾಂಕುಶ ವರದ ಅಭಯ ಹಸ್ತಗಳು; ಸೊಂಡಿಲಿನಿಂದ ದಂತ-ಮೋದಕಗಳನ್ನು ಎತ್ತಿ ಬಾಯಿಗೆ ಹಾಕಿಕೊಳ್ಳುವಂತಿರುತ್ತದೆ ಇವನ ಮೂರ್ತಿ.

(೮) ಧ್ವಜಗಣಪತಿ : ಇವನು ಚತುರ್ಭುಜ; ಪುಸ್ತಕ, ಅಕ್ಷಮಾಲೆ, ದಂಡ ಮತ್ತು ಕಮಂಡಲುಗಳಿಂದ ಇವನನ್ನು ಗುರುತಿಸಬಹುದು.

(೯) ಉನ್ಮತ್ತೋಚ್ಛಿಷ್ಟಗಣಪತಿ : ಇವನಿಗೆ ಮುಕ್ಕಣ್ಣು. ಇವನು ಪಾಶಾಂಕುಶ, ಮೋದಕ ಪಾತ್ರೆ ಮತ್ತು ದಂತಗಳನ್ನು ನಾಲ್ಕು ಕೈಗಳಲ್ಲಿ ಹಿಡಿದಿರುತ್ತಾನೆ. ಪದ್ಮವೇ ಇವನ ಆಸನ. ಇವನ ಗಜಮುಖವು ಮದಜಲಮಯವಾಗಿರುತ್ತದೆ.

(೧೦) ವಿಘ್ನರಾಜಗಣಪತಿ : ಇವನು ಪಾಶಾಂಕುಶಧರನು; ಇಲಿಯ ಮೇಲೆ ಕುಳಿತು ಮಾವಿನ ಹಣ್ಣನ್ನು ತಿನ್ನುತ್ತಿರುತ್ತಾನೆ.

(೧೧) ಭುವನೇಶಗಣಪತಿ : ಇವನು ಅಷ್ಟಭುಜನು. ಶಂಖ, ಇಕ್ಷು ಚಾಪ, ಪುಷ್ಪಬಾಣಗಳು, ಮುರಿದ ದಂತ, ಪಾಶ, ಅಂಕುಶ ಮತ್ತು ಭತ್ತದ ಎಳೆಸಸಿಗಳನ್ನು (ಜಿದೆಗಳನ್ನು) ತನ್ನೆಂಟು ಕೈಗಳಲ್ಲಿ ಹಿಡಿದಿರುತ್ತಾನೆ.

(೧೨) ನೃತ್ತಗಣಪತಿ : ಕುಣಿಯುತ್ತಾನೆ. ಇವನೂ ಅಷ್ಟಭುಜನು. ತನ್ನ ಎಂಟು ಕೈಗಳಿಂದ ಪಾಶ, ಅಂಕುಶ, ಕಡುಬು, ಕುಠಾರ, ದಂತ, ವಲಯ (Quoit), ಅಂಗುಲೀಯ (ಉಂಗುರ)ಗಳನ್ನು ಧರಿಸಿದ್ದಾನೆ; ಕೊನೆಗೈ ಬೇಕಾದ ಹಾಗೆ ತೂಗುತ್ತಿರುತ್ತದೆ. ಎಡಗಾಲು ಬಾಗಿ ಪದ್ಮಾಸನದ ಮೇಲಿರುತ್ತದೆ; ಬಲಗಾಲು ಮೇಲೆದ್ದು ಗಾಳಿಯಲ್ಲಾಡುತ್ತದೆ. ಸಾಕ್ಷಾತ್ತಾಗಿ ಎದುರಿಗೆ ಕಾಣುವುದು ನಾಲ್ಕು ಕೈಗಳು.

(೧೩) ಹರಿದ್ರಾಗಣಪತಿ : ಎಂದರೆ ರಾತ್ರಿ ಗಣಪತಿ. ಇವನಿಗೆ ನಾಲ್ಕು ಕೈಗಳು—ಅವುಗಳಲ್ಲಿ ಪಾಶಾಂಕುಶ ಮೋದಕ ದಂತಗಳಿವೆ. ಇವನು ತ್ರ್ಯಂಬಕ.

(೧೪) ಭಾಲಚಂದ್ರಗಣಪತಿ : ಚಂದ್ರನನ್ನೀತನು ಹಣೆಯ ಮೇಲೆ ಧರಿಸಿದ್ದಾನೆ.

(೧೫) ಶೂರ್ಪಕರ್ಣಗಣಪತಿ : ಶೂರ್ಪಕರ್ಣ ಇವನಿಗೆ ವಿಶಿಷ್ಟ. ಶೂರ್ಪ ಕರ್ಣ ಎಂದರೆ ಮೊರಗಿವಿ.

(೧೬) ಏಕದಂತಗಣಪತಿ : ಇವನಿಗೆ ಬಲಗಡೆ ದಂತವಿಲ್ಲ.

## ಸುಬ್ರಹ್ಮಣ್ಯಮೂರ್ತಿ

ಸುಬ್ರಹ್ಮಣ್ಯಸ್ವಾಮಿ ವಿಗ್ರಹವು ತ್ರಿವಿಧವಾಗಿದೆ. ಮೊದಲಿನದರ ಉಪ ವಿಭಾಗಗಳು :

(೧) ಪದ್ಮದ ಅಥವಾ ನವಿಲಿನ ಮೇಲೆ ಕುಳಿತ ಮೂರ್ತಿ. ಬಲಗೈಯಲ್ಲಿ ತಾವರೆಯನ್ನು ಧರಿಸಿ ಎಡಗೈಯು ಕಟ್ಯವಲಂಬಿತವಾಗಿರುವುದು ಈ ಸುಬ್ರಹ್ಮಣ್ಯ ಮೂರ್ತಿಯ ಲಕ್ಷಣಗಳು.

### ಅಥವಾ

ಬಲಗೈ ಅಭಯ ಮುದ್ರೆಯಲ್ಲಿರುವುದು ಮತ್ತು ಎಡಗೈ ಕಮಲ ಹಿಡಿದಿರುವುದು ವೈಕಲ್ಪಿಕ ಲಕ್ಷಣಗಳು.

(೨) ಬಲಗೈಯಲ್ಲಿ ಈ ಸುಬ್ರಹ್ಮಣ್ಯನು ದಂಡವನ್ನೂ ಎಡಗೈಯಲ್ಲಿ ಕಮಲವನ್ನೂ ಹಿಡಿದಿರುತ್ತಾನೆ.

(೩) ಬಲಗೈಯಲ್ಲಿ ಶಕ್ತ್ಯಾಯುಧವನ್ನೂ ಎಡಗೈಯಲ್ಲಿ ವಜ್ರಾಯುಧವನ್ನೂ ಧರಿಸಿರುವುದು ಇದರ ಮೂರನೆಯ ವಿಧವು.

(೪) ಬಲಗೈಯಲ್ಲಿ ಶಕ್ತ್ಯಾಯುಧವನ್ನೂ ಎಡಗೈಯಲ್ಲಿ ಕೋಳಿಯನ್ನೂ ಹಿಡಿದಿರುವುದು ಚತುರ್ಥ ವಿಧವಾಗಿದೆ.

ಎರಡನೆಯ ಸುಬ್ರಹ್ಮಣ್ಯ ಮೂರ್ತಿ ಒಂದೇ ವಿಧವಾದದ್ದು. ಅದಕ್ಕೆ ಆರು ಕೈಗಳಿರುತ್ತವೆ. ಅಭಯಹಸ್ತ, ಖಡ್ಗಹಸ್ತ, ಶಕ್ತಿಹಸ್ತಗಳು ಬಲಗೈ ಮೂರಾದರೆ—ಖೇಟಕ, ಅಕ್ಷಮಾಲೆ, ಕೋಳಿಗಳನ್ನು ಎಡಗಡೆಯ ಮೂರು ಕೈಗಳಲ್ಲಿ ಹಿಡಿದಿರುವದೊಂದು ಬಗೆ. ಎಂಟು ಕೈಗಳಿಂದ ವಜ್ರ, ಶಕ್ತಿ, ಅಭಯ, ವರದ, ಖಡ್ಗ, ಖೇಟಕ, ಬಾಣ ಮತ್ತು ಧನುಸ್ ಇವುಗಳನ್ನು ತೋರಿಸುತ್ತಿರುವದು ಇನ್ನೊಂದು ಬಗೆ.

ಮೂರನೆಯ ಬಗೆಯ ಸುಬ್ರಹ್ಮಣ್ಯ ಮೂರ್ತಿಯು ಅಷ್ಟಭುಜನು. ಆ ಎಂಟು ಕೈಗಳಲ್ಲಾತ ವಜ್ರ, ಶಕ್ತಿ, ಅಭಯ, ವರದ, ಖಡ್ಗ, ಖೇಟಕ, ಬಾಣ, ಧನುಸ್ಸುಗಳನ್ನಾದರೂ ತೋರಿಸುತ್ತಿರಬಹುದು; ಅಥವಾ ಪದ್ಮ, ವಜ್ರ, ಶಕ್ತಿ, ಅಭಯ, ವರದ, ಖಡ್ಗ ಖೇಟಕ, ಪಾಶಗಳನ್ನಾದರೂ ತೋರಿಸುತ್ತಿರಬಹುದು.

ಶಕ್ತಿಧರ; ಸ್ಕಂದ, ಸೇನಾಪತಿ, ಸುಬ್ರಹ್ಮಣ್ಯ, ಗಜವಾಹನ, ಶರವಣಭವ; ಕಾರ್ತಿಕೇಯ, ಕುಮಾರ, ಷಣ್ಮುಖ, ತಾರಕಾರಿ, ಸೇನಾನಿ, ಬ್ರಹ್ಮಶಾಸ್ತ, ವಲ್ಲೀಕಲ್ಯಾಣಸುಂದರ, ಬಾಲಸ್ವಾಮಿ, ಕ್ರೌಂಚಭೇತ್ತ, ಶಿಖಿವಾಹನ—ಎಂಬೀ ೧೬ ಸುಬ್ರಹ್ಮಣ್ಯದೇವರ ಹೆಸರುಗಳು.

## ಅಧಿಕಾರನಂದಿ ಅಥವಾ ನಂದಿಕೇಶ್ವರ

ನಂದಿಕೇಶ್ವರನು ಪದ್ಮಾಸನದ ಮೇಲೆ ನಿಂತಿರುತ್ತಾನೆ. ತನ್ನ ಹಿಂಗೈಗಳಲ್ಲಿ ಪರಶುವನ್ನೂ ಮೃಗ (ಚಿಗರೆ)ವನ್ನೂ ಹಿಡಿದಿರುತ್ತಾನೆ. ಮುಂಗೈಗಳು ಅಂಜಲಿಸ್ವರೂಪದಲ್ಲಿವೆ. ಈ ದೇವನೂ ಇವನ ಪತ್ನಿಯೂ ದೇವಾಲಯದ ಬಾಗಿಲ ಬಳಿ ಇರುತ್ತಾರೆ.

## ಚಂಡೇಶ್ವರ

ಚಂಡೇಶ್ವರನು ರುದ್ರನ ಒಂದು ಭೂತಗಣ. ಅವನು ಪದ್ಮಾಸನಸ್ಥನು. ಅವನದು ರುದ್ರಕಳೆ, ಬಣ್ಣವು ಕಪ್ಪು. ಸರ್ಪ ಯಜ್ಞೋಪವೀತ; ಅರ್ಧ ಚಂದ್ರಾಲಂಕೃತ ಜಟಾಮುಕುಟ ಅವನದು. ಅವನು ಚತುರ್ಮುಖನು, ಚತುರ್ಭುಜನು, ದ್ವಾದಶಾಕ್ಷನು. ಬಲಗೈಗಳಲ್ಲಿ ಅಕ್ಷಮಾಲೆ ಮತ್ತು ತ್ರಿಶೂಲ ಮತ್ತು ಟಂಕ-ಕಮಂಡಲುಗಳು ಎಡಗೈಗಳಲ್ಲಿ.

ಅಥವಾ

ಅವನು ವೀರಾಸನಸ್ಥನು. ಹಿಂಗೈಗಳಲ್ಲಿ ಪಿನಾಕಧನುಸ್ಸನ್ನೂ ಅಮೋಘ ಬಾಣವನ್ನೂ ಹಿಡಿದುಕೊಂಡು ಮುಂಗೈಗಳಲ್ಲಿ ವರದ-ಅಭಯ ಹಸ್ತಗಳನ್ನು ತೋರಿಸುತ್ತಾನೆ.

ಅಥವಾ

ಅವನು ಉತ್ಕುಟಿಕಾಸನಸ್ಥನು ಇಲ್ಲವೆ ನಾಲ್ಕು ಕೈಗಳಲ್ಲಿ ಟಂಕ, ಪಾಶ, ಶೂಲ, ಅಭಯುಗಳನ್ನು ಪ್ರದರ್ಶಿಸುತ್ತಾನೆ.

ಅಥವಾ

ಅವನ ಜೊತೆಗೆ ನೀಲೋತ್ಪಲಧಾರಿಣಿಯಾದ ಧರ್ಮನೀತಿ ಇರುತ್ತಾಳೆ. ಇಲ್ಲವೆ ಅವನು ತ್ರ್ಯಂಬಕನಾಗಿ ರುದ್ರದೇವಾಲಯದ ಈಶಾನ್ಯ ದಿಕ್ಕಿನಲ್ಲಿ ಪ್ರಾಕಾರದ ಬಳಿಯಲ್ಲಿ ಯಜ್ಞೋಪವೀತ ಧರಿಸಿ ಬಲಗೈಯಲ್ಲಿ ಕೊಡಲಿ ಹಿಡಿದು ಎಡಗೈಯನ್ನು ಸೊಂಟದ ಮೇಲಿಟ್ಟುಕೊಂಡಿರಬಹುದು.

## ಬ್ರಹ್ಮದೇವಮೂರ್ತಿ

ಸಾಮಾನ್ಯ ಲಕ್ಷಣ : ವಿಷ್ಣು, ಶಿವರ ಸರಿಜೋಡಿಯಾದವನು ಬ್ರಹ್ಮ. ಅವನು ಚತುರ್ಭುಜನು. ಜಟಾಮುಕುಟ, ಯಜ್ಞೋಪವೀತ, ಕಟಿಸೂತ್ರ,

ಮೃಗಚರ್ಮ (ಕೃಷ್ಣಾಜಿನ)ವನ್ನು ಉಪವೀತದಂತೆ ಧರಿಸಿರುವುದು, ಕಿವಿಗಳಲ್ಲಿ ಕುಂಡಲಗಳು. ಈತನು ವಿಷ್ಣುವಿನ ಯಾ ರುದ್ರನ ದೇವಾಲಯದ ಉತ್ತರ ಪ್ರಾಕಾರದ ಬಳಿ ಇರುತ್ತಾನೆ.

ವಿಶೇಷ ಲಕ್ಷಣ : ಅವನನು ಪದ್ಮಾಸನ ಯಾ ಹಂಸಾಸನ ಯಾ ಲಂಬಕೂರ್ಚಾಸನ ಅಥವಾ ಯೋಗಾಸನನಾಗಿರಬಹುದು. ಚತುರ್ಮುಖನಾದ ಅವನ ಮುಖಗಳು ನಾಲ್ಕು ದಿಕ್ಕುಗಳತ್ತ ತಿರುಗಿರುತ್ತವೆ. ಅವನು ಧರಿಸಿರುವುದು ಅಕ್ಷಮಾಲೆ, ಕೂರ್ಚೆ ಬಲಗೈಗಳಲ್ಲಿ; ಕುಶಕಮಂಡಲುಗಳನ್ನು ಎಡಗೈಗಳಲ್ಲಿ. ಸ್ರುಕ್-ಸ್ರುವಗಳು ಬಲಗೈಗಳಲ್ಲಿ; ಆಜ್ಯಸ್ಥಾಲಿ, ಕುಶಗಳು ಎಡಗೈಗಳಲ್ಲಿ. ಮುಂದಿನ ಕೈ (ಮುಂಗೈ)ಗಳಲ್ಲಿ ಅಭಯ-ವರದ ಮುದ್ರೆಗಳು; ಹಿಂಗೈಗಳಲ್ಲಿ ಅಕ್ಷಮಾಲೆ ಕಮಂಡಲುಗಳು ಅಥವಾ ಅವನ ಕರ್ತರ್ಯಾಸನ (Crossed legs)ವನ್ನಾಧರಿಸಿದ ಮತ್ತು ಮೇಲ್ಮುಖವಾಗಿರುವ ಮುನ್ನೆಡ ಹಸ್ತದ ಮೇಲಿಟ್ಟಿರುವ ಕೆಳಮೊಗದ ಮುಂಬಲ ಹಸ್ತವುಳ್ಳವನೂ ಹಿಂಗೈಗಳಲ್ಲಿ ಅಕ್ಷಮಾಲೆಯನ್ನೂ ಕಮಂಡಲುವನ್ನೂ ಹಿಡಿದವನೂ ಆಗಿರಬಹುದು. ಅಥವಾ ಮುಂಬಲಗೈ ವರದಹಸ್ತ, ಕರ್ತರ್ಯಾಸನ (ಪದ್ಮಾಸನ), ಹಿಂಬಲಗೈ ಸ್ರುವವನ್ನು ಹಿಡಿದಿರುವುದು, ಹಿನ್ನೆಡಗೈ ಸ್ರುಕ್ಕನ್ನು ಹಿಡಿದಿರುವುದು, ಮುನ್ನೆಡಗೈ ಕಮಂಡಲವನ್ನು ಹಿಡಿದಿರುವುದು—ಇದೂ ಒಂದು ಬಗೆ.

ಬ್ರಹ್ಮನಿಗೆ ಗಡ್ಡವಿದೆ, ಕಣ್ಣು ಮುಚ್ಚಿರುತ್ತದೆ; ಅವನಿಗೆ ಸಾವಿತ್ರಿ ಸರಸ್ವತಿಯರು ಪತ್ನಿಯರು. ಸಾವಿತ್ರಿಗೆ ನಾಲ್ಕು ತಲೆಗಳು ಮತ್ತು ನಾಲ್ಕು ಕೈಗಳು, ಅವಳು ಅಕ್ಷಮಾಲೆ, ಪುಸ್ತಕ, ಪದ್ಮ ಮತ್ತು ಕಮಂಡಲುಗಳನ್ನು ಧರಿಸಿರಬೇಕು.

ಬ್ರಹ್ಮನ ಆಯುಧಗಳು : ಪಾಶವು ಅಧಿಕಾಯುಧವು ಅಥವಾ ಐಚ್ಛಿಕಾಯುಧವು. ಕಟಿಬಂಧದ ಬದಲು ಉದರಬಂಧವಿರಬಹುದು. ಉದರವು ಮಹೋದರವಾಗಿರುತ್ತದೆ. ಕಟ್ಯವಲಂಬಿತಹಸ್ತನಾಗಿರುತ್ತಾನೆ ಬ್ರಹ್ಮನು; ಜಟಾಮಕುಟದ ಬದಲು ಕಿರೀಟಮಕುಟಧಾರಿಯಾಗಿಬಹುದು.

## ಅಷ್ಟದಿಕ್ಪಾಲಕರು

### ಇಂದ್ರ

ಇಂದ್ರನು ಕಿರೀಟ-ಕುಂಡಲ-ಹಾರ-ಕೇಯೂರಾಲಂಕೃತನು. ಆತನ ಬಲಗೈಯಲ್ಲಿ ಶಕ್ತ್ಯಾಯುಧವೂ ಎಡಗೈಯಲ್ಲಿ ಅಂಕುಶವೂ ಇರುತ್ತವೆ. ಸಿಂಹದ

ಅಥವಾ ಐರಾವತದ ಮೇಲೆ ಆವನು ಕುಳಿತಿರುತ್ತಾನೆ. ಇಂದ್ರಾಣಿ ಯಾ ಶಚೀದೇವಿಯು ಉತ್ಪಲಧಾರಣಿಯಾಗಿ ಅವನೊಡನೆ ಕುಳಿತಿರುತ್ತಾಳೆ. ಎಡ ಬಲಗಳಲ್ಲಿ ಇಬ್ಬರು ಗಂಧರ್ವ ಸ್ತ್ರೀಯರು ಚಾಮರ ಬೀಸುತ್ತಿರುತ್ತಾರೆ.

ಅಥವಾ

ಇಂದ್ರನು ವಜ್ರ, ಅಂಕುಶ ಯಾ ನೀಲೋತ್ಪಲ ಹಿಡಿದಿರುತ್ತಾನೆ. ಒಕ್ಕೈಯಿಂದ ಇಂದ್ರಾಣಿಯು ಇಂದ್ರನನ್ನು ಅಪ್ಪಿಕೊಂಡಿರುತ್ತಾಳೆ. ಅವಳ ಇನ್ನೊಂದು ಕೈಯಲ್ಲಿ ಸಂತಾನಮಂಜರಿಯನ್ನು ಹಿಡಿದುಕೊಂಡಿರುತ್ತಾಳೆ. ಇಂದ್ರನ ಗಜವಾಹನಕ್ಕೆ ನಾಲ್ಕು ದಂತಗಳಿರುತ್ತವೆ. ಇಂದ್ರನ ಮುಂಗೈಗಳೆರಡು ಅನುಕ್ರಮವಾಗಿ ಅಭಯ-ವರದ ಹಸ್ತಗಳಾಗಿರುತ್ತವೆ, ಹಿಂಗೈಗಳೆರಡರಲ್ಲಿ ಅವನು ಅಂಕುಶ-ವಜ್ರಗಳನ್ನು ಹಿಡಿದಿರುತ್ತಾನೆ.

ಅಥವಾ

ಇಂದ್ರನು ಭದ್ರಪೀಠಸ್ಥನಾಗಿರಬಹುದು. ಮುಂಗೈಗಳೆರಡರಲ್ಲಿ ಆತನು ವರದಹಸ್ತನೂ ಅಕ್ಷಮಾಲಾಧರನೂ ಆಗಿರುತ್ತಾನೆ. ಹಿಂದಿನ ಎಡ-ಬಲಗೈಗಳಲ್ಲಿ ವಜ್ರ ಅಂಕುಶಪಾಣಿಯಾಗಿರುತ್ತಾನೆ. ಅವನೀಗ ಜಟಾಮಕುಟಾಲಂಕೃತನೂ ಯಜ್ಞೋಪವೀತಿಯೂ ಆಗಿ ಹಾರಹಾಕಿಕೊಂಡು ಮೆರೆಯುತ್ತಾನೆ.

## ಅಗ್ನಿ

ಅಗ್ನಿಯು ಜಟಾಮಕುಟಧಾರಿಯು, ಚತುರ್ಭುಜನು, ತ್ರ್ಯಕ್ಷನು ಮತ್ತು ಮೇಷವಾಹನನು. ಮುಂದಿನ ಕೈಗಳಲ್ಲಿ ಅವನು ವರದಹಸ್ತನೂ ಅಭಯಹಸ್ತನೂ ಆಗಿದ್ದಾನೆ. ಹಿಂದಿನ ಕೈಗಳಲ್ಲಿ ಸ್ರುಕ್ಕನ್ನೂ ಶಕ್ತ್ಯಾಯುಧವನ್ನೂ ಹಿಡಿದಿರುತ್ತಾನೆ. ಅಥವಾ ಅವನು ಬ್ರಹ್ಮಸೂತ್ರ (ಜನಿವಾರ)ಧರನು; ಮೀಸೆ ಅವನಿಗಿದೆ; ಅಕ್ಷಮಾಲೆ ಕಮಂಡಲುಗಳನ್ನು ಹಿಡಿದಿರುತ್ತಾನೆ. ಅಥವಾ ಅವನಿಗೆ ನಾಲ್ಕು ಕೈಗಳಿದ್ದರೆ ಅವುಗಳಲ್ಲಿ ಮುಂದಿನ ಬಲಗೈ ಒಂದರಲ್ಲಿ ಜ್ವಾಲೆಗಳನ್ನೂ ಎರಡನೆಯದರಲ್ಲಿ ತ್ರಿಶೂಲವನ್ನೂ ಹಿಂದಿನ ಎಡಗೈಗಳಲ್ಲಿ ಒಂದರಲ್ಲಿ ಅಕ್ಷಮಾಲೆಯನ್ನೂ ಎರಡನೆಯದರಲ್ಲಿ ಸ್ವಾಹಾದೇವಿಯನ್ನೂ ಎತ್ತಿಹಿಡಿದಿರುತ್ತಾನೆ. ಈ ಅಗ್ನಿಗೆ ನಾಲ್ಕು ಕೋರೆದಾಡೆಗಳಿರುತ್ತವೆ. ನಾಲ್ಕು ಗಿಳಿಗಳು ಅವನ ತೇರನ್ನು ಹಾರಿಸಿ ಒಯ್ಯುತ್ತಿರುತ್ತವೆ. ಅವನಿಲ್ಲಿ ಧೂಮಕೇತು. ಸ್ವಾಹಾದೇವಿಯು ರತ್ನಪಾತ್ರೆ (ನವರತ್ನ ತುಂಬಿದ)ಯನ್ನು ಹಿಡಿದುಕೊಂಡಿರುತ್ತಾಳೆ. ಅವನು ಹಾಕಿ ಕುಳಿತುಕೊಂಡಿರುವುದು ಅರ್ಧ ಚಂದ್ರಾಸನವನ್ನು.

64

ಸಾಕ್ಷಾತ್ತಾಗಿ ಅಗ್ನಿಗೆರಡು ಅಜಶಿರಸ್ಸುಗಳಿರುತ್ತವೆ; ಸಪ್ತಭುಜಗಳಿರುತ್ತವೆ; ಚರಣತ್ರಯವಿರುತ್ತದೆ. ಕೈಗಳಲ್ಲಿ ನಾಲ್ಕು ಬಲಕ್ಕೂ ಮೂರು ಎಡಕ್ಕೂ ಇರುತ್ತವೆ. ಅವನು ಮನುಷ್ಯಮುಖಧಾರಿ ಮತ್ತು ಮೇಷದ ಬದಲು ಗೂಳಿಯನ್ನು ಹತ್ತಿಕೊಂಡಿರುತ್ತಾನೆ.

## ಯಮ

ಯಮನು ವೈವಸ್ವತನು ಅರ್ಥಾತ್ ಸೂರ್ಯಪುತ್ರನು ಮತ್ತು ಚತುರ್ಭುಜನು; ದ್ವಿಭುಜನಾದರೂ ಆಗಿರಬಹುದು. ಕೈಗಳಲ್ಲಿ ಅವನು ಖಡ್ಗವನ್ನೂ ಖೇಟಕವನ್ನೂ ಹಿಡಿದಿರಬಹುದು ಅಥವಾ ಹಣ್ಣುಸುಳಿಯೆಲೆಗಳನ್ನು ಹಿಡಿದಿರಬಹುದು ಅಥವಾ ದಂಡ-ಪಾಶಗಳನ್ನು ಧರಿಸಿರಬಹುದು. ಯಮನು ಕಿರೀಟ ಮಕುಟಧಾರಿಯು; ರಕ್ತಪುಷ್ಪಹಾರ ಹಾಕಿಕೊಂಡಿರುತ್ತಾನೆ. ಸಿಂಹವನ್ನೋ ಕೋಣನನ್ನೋ ವಾಹನವನ್ನಾಗಿ ಮಾಡಿಕೊಂಡಿರುತ್ತಾನೆ. ಯಮನ ಎಡ-ಬಲಗಳಲ್ಲಿ ಮೃತ್ಯುದೇವತೆ ಮತ್ತು ಸಂಹಿತಾದೇವತೆಗಳು ನಿಂತಿರುತ್ತಾರೆ. ಎರಡೂ ಕಡೆಗಳಲ್ಲಿ ಇಬ್ಬರು ಸ್ತ್ರೀಯರು (ಒಂದು ಕಡೆ ಒಬ್ಬೊಬ್ಬರಂತೆ) ಚಾಮರ ಬೀಸುತ್ತಿರುತ್ತಾರೆ. ಅವನೆದುರು ಧರ್ಮ-ಅಧರ್ಮ ಎಂಬ ಇಬ್ಬರು ಬ್ರಾಹ್ಮದೇವತೆಗಳಿರುತ್ತಾರೆ. ಅವನ ಅರಮನೆಯ ಬಾಗಿಲಿದಿರು ಚಿತ್ರಗುಪ್ತ-ಕಾಳಿಯರು ಕಾವಲಿಗಿರುತ್ತಾರೆ.

ಯಮಪತ್ನಿಯು ಧೂಮೋರ್ಣೆಯು. ಅವಳಿಗೆ ಎರಡು ಕೈಗಳಿರುತ್ತವೆ. ಯಮನು ದಂಡಪಾಣಿಯೂ ಆಗಿರುತ್ತಾನೆ; ಖಡ್ಗಪಾಣಿಯೂ ಆಗಿರುತ್ತಾನೆ. ಇವಿರುವುದು ಅವನ ಬಲಗೈಗಳಲ್ಲಿ; ಎಡಗೈಗಳಲ್ಲಿ ಉರಿಯುತ್ತಿರುವ ತ್ರಿಶೂಲ ಮತ್ತು ಅಕ್ಷಮಾಲೆಗಳಿರುತ್ತವೆ.

ಚಿತ್ರಗುಪ್ತನು ಪಾಶ್ಚಾತ್ಯ ವೇಷಧರ (ಅಪೀಚ್ಯ+ ವೇಷಧಾರಿ); ಕೈಯಲ್ಲಿ ಲೆಕ್ಕಣಿಕೆಯನ್ನೂ (ಕಬ್ಬಿಣದ ಕಂಟವನ್ನೂ) ಓಲೆಗರಿಯನ್ನೂ ಹಿಡಿದುಕೊಂಡಿರುತ್ತಾನೆ. ಯಮನ ಎಡಕ್ಕೆ ಪಾಶಧಾರಿಯಾದ ಕಾಲದೇವನು ನಿಂತಿರುತ್ತಾನೆ.

ಅವನು ಸಾಕ್ಷಾತ್ತಾಗಿ ತನಗಿರುವ ಎರಡೇ ಕೈಗಳಲ್ಲಿ (ಎಡಗೈ ಬಲಗೈಗಳಲ್ಲಿ) ಗದೆ-ಪಾಶಗಳನ್ನೂ ತಲೆಯ ಮೇಲೆ ಕರಂಡ ಮಕುಟವನ್ನೂ ಧರಿಸಿದ ವೃಷಭಾರೂಢನಾಗಿರುತ್ತಾನೆ.



+ ಶ್ವೈತ್ಯ = Shininess

65

## ನಿಋೃತಿ

ಇಂದ್ರ, ಅಗ್ನಿ, ಯಮರು ಪೂರ್ವ, ಆಗ್ನೇಯ ಮತ್ತು ದಕ್ಷಿಣ ದಿಕ್ಕುಗಳ ಪಾಲಕರಾದರೆ ನಿಋೃತಿಯು ನೈಋತ್ಯ ದಿಕ್ಕಿನ ಪಾಲಕನು. ಇವನು ಭದ್ರಪೀಠಸ್ಥ ಯಾ ಸಿಂಹವಾಹನ ಅಥವಾ ನರವಾಹನನು ಇಲ್ಲವೆ ಗರ್ದಭಾರೂಢನು. ಇವನು ದಂಡಪಾಣಿಯು. ಬಲ-ಎಡಗೈಗಳಲ್ಲಿ ಕತ್ತಿಯನ್ನೂ ಗುರಾಣಿಯನ್ನೂ ಹಿಡಿದಿರುತ್ತಾನೆ. ಇವನಿಗೆ ದೇವಿ, ಕೃಷ್ಣಾಂಗಿ, ಕೃಷ್ಣವದನೆ ಮತ್ತು ಕೃಷ್ಣಪಾಶೆ ಎಂಬ ನಾಲ್ಕು ಪತ್ನಿಯರಿದ್ದಾರೆ.

## ವರುಣ

ವರುಣನು ಪಶ್ಚಿಮದಿಗಧೀಶನು, ಕರಂಡಮುಕುಟಧಾರಿ, ಬ್ರಹ್ಮಸೂತ್ರ (ಜನಿವಾರ)ಧರ, ಮಕರಾರೂಢ (ಮಕರ=ಯೌಗಿಕ ಜಲಚರ) ಅಥವಾ ಮೊಸಳೆಸವಾರ; ೨ ಯಾ ೪ ಕೈಗಳು—ವರದಹಸ್ತ, ಪಾಶಹಸ್ತ; ಅಥವಾ ವರದ-ಪಾಶ-ಸರ್ಪ-ಕಮಂಡಲುಹಸ್ತನು.

ಅಥವಾ

ವರುಣನು ಹಂಸವಾಹನನು, ಚತುರ್ಭುಜನು, ಜಿಳ್ಳೊಡೆಯನ್ನು ಹಿಡಿದುಕೊಂಡವನು; ಅವನೆಡಕ್ಕೆ ಮೀನಧ್ವಜ: ಪದ್ಮ-ಪಾಶಗಳು ಬಲಗೈಗಳಲ್ಲೂ ಶಂಖ-ರತ್ನಪಾತ್ರೆಗಳು ಎಡಗೈಗಳಲ್ಲೂ ರಾರಾಜಿಸುತ್ತವೆ. ವರುಣಪತ್ನಿಯು ನೀಲೋತ್ಪಲಧಾರಿಣಿ ಮತ್ತು ಬಲಗೈಯಿಂದ ಆಕೆ ವರುಣನನ್ನು ತಬ್ಬಿಕೊಂಡಿರುತ್ತಾಳೆ. ಗಂಗೆ-ಯಮುನೆಯರು ಬಲ-ಎಡಗಡೆಗಳಲ್ಲಿ ನಿಂತಿರುತ್ತಾರೆ. ಗಂಗೆ ಮೀನಾರೂಢೆ ಅಥವಾ ಮಕರಾರೂಢೆ ಮತ್ತು ಒಕ್ಕೈಯಲ್ಲಿ ಚಾಮರವನ್ನೂ ಇನ್ನೊಂದರಲ್ಲಿ ಪದ್ಮವನ್ನೂ ಹಿಡಿದುಕೊಂಡಿರುತ್ತಾಳೆ. ಯಮುನೆಯು ಆಮೆಯನ್ನೇರಿರುತ್ತಾಳೆ ಮತ್ತು ತನ್ನೆರಡು ಕೈಗಳಲ್ಲಿ ಚಾಮರ-ನೈದಿಲೆಗಳನ್ನು ಹಿಡಿದುಕೊಂಡಿರುತ್ತಾಳೆ (ನೀಲೋತ್ಪಲ=ನೈದಿಲೆ=ಕೋಳೆಹೂವು).

ಅಥವಾ

ಸಾಕ್ಷಾತ್ತಾಗಿ, ವರುಣನ ಬಲಗೈಯು ಸೂಚೀಹಸ್ತಭಂಗಿಯಲ್ಲಿದೆ. ಗಂಗೆ ಮತ್ತು ಯಮುನೆಯರು ವರುಣನ ಬಲ-ಎಡ ಬದಿಗಳಲ್ಲಿ ಪೂರ್ಣಕುಂಭಧಾರಿಣಿಯರಾಗಿ ನಿಂತಿರುತ್ತಾರೆ.

## ವಾಯು

ವಾಯುವು ವಾಯುವ್ಯ ದಿಗಧಿಪತಿ; ಚತುರ್ಭುಜ ಯಾ ದ್ವಿಭುಜನು. ಅವನಿಗೆ ಬಲಗೈಯಲ್ಲಿ ಧ್ವಜ (Banner) ಮತ್ತು ಎಡಗೈಯಲ್ಲಿ ದಂಡ; ಬಲಗೈ ಪತಾಕಾಹಸ್ತಮುದ್ರೆಯಲ್ಲಿರುತ್ತದೆ ಅಥವಾ ಅದು ಅಂಕುಶವನ್ನು ಹಿಡಿದಿರುತ್ತದೆ. ಅವನು ಸಿಂಹದ ಯಾ ಜಿಂಕೆಯ ಸವಾರ ಅಥವಾ ಕೈಗಳಲ್ಲಿ ಚಕ್ರ ಹಾಗೂ ಧ್ವಜಗಳನ್ನು ಹಿಡಿದಿರುತ್ತಾನೆ. ವಾಯುವಿನ ಬಾಯಿ ತೆರೆದಿರುತ್ತದೆ; ಅವನ ಎಡಕ್ಕೆ ಅವನ ಪತ್ನಿಯು ಕುಳಿತಿರುತ್ತಾಳೆ.

## ಕುಬೇರ

ಕುಬೇರನು ಉತ್ತರ ದಿಕ್‌ಪಾಲಕನು; ಬ್ರಹ್ಮನ ಮೊಮ್ಮಗನು. ಅವನು ಪುಲಸ್ತ್ಯಪುತ್ರನು; ಪುಲಸ್ತ್ಯನ ಐವರು ಹೆಂಡಿರಲ್ಲಿ ಒಬ್ಬಳ ಮಗನು. ಅವನಿಗೆ ಕಿರೀಟಮುಕುಟ ಯಾ ಕರಂಡಮುಕುಟ ಮತ್ತು ಕರ್ಣಕುಂಡಲಗಳು-ಹಾರಗಳು ಕೊರಳಿಗೆ; ಆ ಹಾರಗಳು ಬಂಗಾರದ ನಿಷ್ಕಗಳಿಂದ ಯಾ ನಾಣ್ಯಗಳಿಂದ ಕೂಡಿದವುಗಳು. ಅವನು ಚತುರ್ಭುಜ ಅಥವಾ ದ್ವಿಭುಜ. ಆತನು ವರದಾಭಯ ಹಸ್ತಗಳಿಂದ ಶೋಭಿಸುತ್ತಾನೆ ಅಥವಾ ಎಡಗೈಯಲ್ಲಿ ಗದೆ ಹಿಡಿದಿರುತ್ತಾನೆ. ಇಲ್ಲವೆ ತನ್ನ ಪತ್ನಿಯಾದ ವಿಭವೆಯನ್ನು ಒಂದು ಕೈಯಲ್ಲಿ ಆಲಿಂಗಿಸಿಕೊಂಡಿರುತ್ತಾನೆ ಮತ್ತು ಇನ್ನೊಬ್ಬ ಪತ್ನಿಯಾದ ವೃದ್ಧಿಯನ್ನು ಇನ್ನೊಂದು ಕೈಯಿಂದ ತಬ್ಬಿಕೊಂಡಿರುತ್ತಾನೆ. ಅವರಿಬ್ಬರೂ ಅವನ ಎಡ-ಬಲದೊಡೆಗಳನ್ನೇರಿ ಕುಳಿತಿರುತ್ತಾರೆ. ಮಿಕ್ಕ ಕೈಗಳಲ್ಲಿ ಗದೆ-ಶಕ್ತ್ಯಾಯುಧಗಳನ್ನು ಹಿಡಿದುಕೊಂಡಿರುತ್ತಾನೆ ಈ ದೇವ.

### ಅಥವಾ

ಕುಬೇರನು ಅಪೀಚ್ಯವೇಷ (ಪಾಶ್ಚಾತ್ಯ ವೇಷ) ಧರಿಸಿ, ಕವಚ ಹಾಕಿಕೊಂಡು ಒಂದು ಜೊತೆ ಮೀಸೆಯನ್ನು ಬಿಟ್ಟಿರಬಹುದು; ಮತ್ತು ಕೋರೆದಾಡೆಗಳಿಂದ ಶೋಭಿಸುತ್ತಿರಬಹುದು. ಎಲ್ಲ ಆಧಾರ ಗ್ರಂಥಗಳಲ್ಲೂ ಅವನಿಗೆ ದೊಡ್ಡ ಲಂಬೋದರವಿರುವುದು ಉಕ್ತ. ಪದ್ಮಪೀಠದ ಮೇಲೆ ಕುಳಿತ ಆತನು ಅದನ್ನು ಬಿಟ್ಟು ನರವಾಹನನೂ ಆಗಬಹುದು. ಟಗರನ್ನೂ ಅವನ ವಾಹನನೆನ್ನುವದುಂಟು. ಅವನ ಎಡ-ಬಲಗಳಲ್ಲಿ ಶಂಖನಿಧಿ ಪದ್ಮನಿಧಿಗಳಿರುತ್ತವೆ. ಈ ನಿಧಿಗಳು ಭೂತಾಕಾರವುಳ್ಳವುಗಳು. ಈ ಭೂತಗಳು ಪದ್ಮಹಸ್ತರು,

ಕರಂಡಮುಕುಟವು, ಪದ್ಮಪೀಠಸ್ಥನು. ಅಥವಾ ಕುಬೇರನೆಡಬಲಗಳಲ್ಲಿ ಅಷ್ಟ ವಿಧದ ನಿಧಿಗಳೂ ಯಕ್ಷರೂ ಸುತ್ತುವರಿದಿರಬಹುದು.

ಒಂದು ಕೈಯಿಂದ ಕುಬೇರ ಪತ್ನಿಯರಾದ ವೃದ್ಧಿ ವಿಭವೆಯರು ಅವನನ್ನು ಅಪ್ಪಿಕೊಂಡಿರುತ್ತಾರೆ; ಇತರ ಕೈಗಳಿಂದ ರತ್ನತುಂಬಿದ ರತ್ನಪಾತ್ರೆಗಳನ್ನು ಹಿಡಿದುಕೊಂಡಿರುತ್ತಾರೆ. ಅಥವಾ ರೂಪಮಂಡನಾನುಸಾರವಾಗಿ ಆನೆಯು ಕುಬೇರನ ವಾಹನವು; ಅವನು ಗದೆ, ದುಡ್ಡಿನ ಚೀಲ, ದಾಳಿಂಬ ಮತ್ತು ಕಮಂಡಲುಗಳನ್ನು ತನ್ನ ನಾಲ್ಕು ಕೈಗಳಲ್ಲಿ ಹಿಡಿದುಕೊಂಡಿರಬೇಕು.

ಬೌದ್ಧರ ವರುಣನ ಎಡದೊಡೆಯ ಮೇಲೆ ಎಡಬದಿಯಲ್ಲಿ ಮುಂಗುಸಿ ಕುಳಿತಿರುತ್ತದೆ.

## ಈಶಾನ

ಈಶಾನ್ಯಾಧಿನಾಥನು ಈಶಾನನು. ಇವನು ತ್ರ್ಯಂಬಕನು, ವ್ಯಾಘ್ರಚರ್ಮಾತ್ತವಾಸಸ್ಸು, ಜಟಾಮಕುಟಧರ ಮತ್ತು ಸರ್ಪಸ್ವರೂಪದ ಬ್ರಹ್ಮಸೂತ್ರವನ್ನೋ (ಯಜ್ಞೋಪವೀತವನ್ನೋ) ಸಾದಾ ಜನಿವಾರವನ್ನೋ ಧರಿಸಿರುತ್ತಾನೆ. ಇವನ ಜಟೆಯಲ್ಲಿ ಅರ್ಧಚಂದ್ರನಿರುತ್ತಾನೆ. ಇವನು ಪದ್ಮಾಸನಸ್ಥನು. ಅಥವಾ ವೃಷಭಾಸನಸ್ಥನು; ಎರಡು ಕೈಗಳಲ್ಲಿ ತ್ರಿಶೂಲ-ಕಪಾಲ (ತಲೆಬುರುಡೆಯ ಅಸ್ಥಿಪಂಜರ)ಗಳನ್ನೋ ಹಿಡಿದಿರಬಹುದು; ಅಥವಾ ಎಡಗೈಯಲ್ಲಿ ವರದಹಸ್ತಮುದ್ರೆ ತೋರುವಂತಿರುತ್ತದೆ. ಕಪಾಲವು ತಲೆಬುರುಡೆಯ ಅರ್ಧಪಾಲು, ತಟ್ಟೆಯಂತಿರುತ್ತದೆ. ನಾಲ್ಕು ಕೈಗಳಿದ್ದರೆ—ಇಗ್ಗೈಗಳು ವೀಣಾವಾದನ ಮಾಡುತ್ತಲೂ ಮತ್ತಿನ್ನೆರಡು ವರದಾಭಯ ಹಸ್ತಗಳಾಗಿಯೂ ಇರುತ್ತವೆ. ವೀಣಾಪಾಣಿತ್ವವಿಲ್ಲಿ ತಪ್ಪೆಂದು ಗೋಪೀನಾಥರಾಯರೆನ್ನುತ್ತಾರೆ (South Indian Iconography Page 538).

ಈ ಅಷ್ಟದಿಕ್ಪಾಲಕರು ವೇದಕಾಲದಲ್ಲಿ ಮಹಾದೇವತೆಗಳಾಗಿದ್ದರು; ಪುರಾಣ ಕಾಲದಲ್ಲಿ ಅವರ ಪ್ರಾಧಾನ್ಯವನ್ನು ತ್ರಿಮೂರ್ತಿಗಳು ಕಸಿದುಕೊಂಡರು ಮತ್ತು ಎಂಟು ದಿಕ್ಕುಗಳನ್ನು ಕಾಯುವ ನಿರ್ದೇಶಕರನ್ನಾಗಿ ನಿಯಮಿಸಿದರು.

# ಅಶ್ವಿಗಳು

ಸೌಭ್ರಾತ್ರಕ್ಕೆ ಹೆಸರಾದ ಅಶ್ವಿನೀದೇವತೆಗಳು ವೇದೋಕ್ತ. ಅವರ ಆಯುರ್ವೇದ ವೈದ್ಯತ್ವವು ರುದ್ರನ ಹಾಗೂ ಧನ್ವಂತರಿಯ ವೈದ್ಯತ್ವದ ಜೊತೆಗೇ ಗಣ್ಯವಾಗಿರುತ್ತದೆ. ಈ ಅಶ್ವಿಗಳು ಯಮಳರು; ಇವರಲ್ಲೊಬ್ಬ ನಾಸತ್ಯನು ಮತ್ತು ಇನ್ನೊಬ್ಬನು ದಸ್ರನು—"ನಾಸತ್ಯಾವಶ್ವಿನೌ ದಸ್ರೌ" ಇತ್ಯಮರಕೋಕ್ತಿ. ಆಗ ಇಬ್ಬರೂ ನಾಸತ್ಯರು ಅಥವಾ ದಸ್ರರೆನ್ನಿಸುತ್ತಾರೆ.

ಸೂರ್ಯ ಪತ್ನಿಯಾದ ಹೆಂಗುದುರೆ ಅಶ್ವಿಗಳ ತಾಯಿ. ಈ ಯಮಳರು ಮೂರ್ತೀಕೃತ ಪ್ರಾಣಾಪಾನರು. ಪ್ರಾಣಾಪಾನಗಳು ಪ್ರಾಣಿಜೀವನವನ್ನು ಪಾಲಿಸುವ ಜೈವಿಕ ವಾಯುಶಕ್ತಿಗಳು. ಅವುಗಳ ಒಟ್ಟು ಸಂಖ್ಯೆ: ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂದು ಐದು. ದೇಹದ ಅಂತಃಸ್ಥ ಸ್ಥಲಗಳ ಮೇಲಿಂದ ಅವಕ್ಕೆ ಈ ಐದು ಹೆಸರುಗಳು ಬಂದಿವೆ. ಅವು ಪ್ರಜ್ಞೆಯ ಕ್ರಿಯಾಶಕ್ತಿಗಳು. ಆದುದರಿಂದ ಅವನ್ನು ಒಟ್ಟಾಗಿ ಉಸಿರು ಯಾ ಪ್ರಾಣಪ್ರಜ್ಞೆ ಎನ್ನುವುದೂ ಉಂಟು.

ಮುಖ್ಯವಾಗಿ ಅಶ್ವಿಗಳು ದೇವಾಹಾರವಾದ ಅಮೃತದ ಯಾ ರಾಧಸ್ಸಿನ ಕಾವಲುಗಾರರಾದ ದೇವವೈದ್ಯರು. ಸ್ವಯಂಪ್ರಧಾನರಾಗಿ ಕುಳಿತ ಅಶ್ವಿನೀ ದೇವತೆಗಳ ಮೂರ್ತಿಗಳು ಭಾರತದಲ್ಲಿಲ್ಲ. ಅವರಿಗೆ ಭಿತ್ತಿಯೇ ಸ್ಥಾನ. ಅವರನ್ನು ಸೂರ್ಯಸೇವಕರನ್ನಾಗಿ ಕಡೆದಿಡಲಾಗಿದೆ. ವೇದಾಂತದಲ್ಲಿ ಸೂರ್ಯನು ಹಿರಣ್ಯಗರ್ಭನು, ಕಾರ್ಯಬ್ರಹ್ಮನು, ಸೃಷ್ಟಪದಾರ್ಥಗಳ ಆತ್ಮ. ಪ್ರತಿಯೊಂದು ನಕ್ಷತ್ರವೂ ಒಂದೊಂದು ಸೂರ್ಯ. ಪ್ರತಿಯೊಬ್ಬ ಸೂರ್ಯನಿಗೂ ಗ್ರಹಗಳಿವೆ. ಅವನವನಿಗವನವನ ಬ್ರಹ್ಮಾಂಡವಿದೆ. ಅವನು ಸ್ವಯಂಪ್ರಭನಾದ ದೃಶ್ಯ ಮೂರ್ತಿಯಾಗಿ ಆಯಾ ಬ್ರಹ್ಮಾಂಡದಲ್ಲಿ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವ ತ್ರಿಮೂರ್ತಿಶಕ್ತಿಸ್ವರೂಪನು.

ಅಶ್ವಿಗಳು ಹಯವದನರು (ಹಯಗ್ರೀವರು). ಸಿಂಹಾಸನದ ಮೇಲೆ ಅವರು ಜೊತೆಗೆ ಕುಳಿತಿರುತ್ತಾರೆ; ಜಟಾಮುಕುಟ ಯಜ್ಞೋಪವೀತ ಹಾರಾದ್ಯಲಂಕೃತರು. ಅವರ ಹಾರ ಹಳದಿ ಹೂವುಗಳದ್ದು. ಅವರು ದಿವ್ಯಾಭರಣಭೂಷಿತರು. ಇಬ್ಬರೂ ದ್ವಿಭುಜರು. ಬಲ-ಎಡಗೈಗಳು ಅಭಯ-ಪುಸ್ತಕಹಸ್ತಗಳು, ಅವರ ಬಲಗಾಲುಗಳು ಪೀಠದಿಂದ ಕೆಳಗೆ ಇಳಿಬಿಟ್ಟಿರು

ವಂಥವುಗಳು; ಎಡಗಾಲುಗಳು ಮಡಚಿಕೊಂಡಿರುತ್ತವೆ. ಎಡಗಾಲನ್ನು ಬಲ ತೊಡೆಗಳ ಮೇಲೆ ಹಾಕಿಕೊಂಡು ಕುಳಿತಿರುವುದು ತಾತ್ಪರ್ಯವು- ಈ ಇಬ್ಬರ ಇಬ್ಬದಿಗಳಲ್ಲಿ ಮೃತಸಂಜೀವನಿ ಮತ್ತು ವಿಶಲ್ಯಕರಣಿ ಎಂಬ ಸ್ತ್ರೀದೇವತೆಗಳು ಚಾಮರ ಬೀಸುತ್ತಿರುತ್ತಾರೆ. ಇವರ ಎಡಕ್ಕೆ ಕತ್ತಿ-ಗುರಾಣಿಗಳನ್ನು ಹಿಡಿದು ಧನ್ವಂತರಿಯೂ ಆತ್ರೇಯನೂ ನಿಂತಿರುತ್ತಾರೆ. ಇವರು ಮುಂಗಾಸು ಸುತ್ತಿ ಕೊಂಡಿರುತ್ತಾರೆ. ಅಥವಾ ಅಭಯಮುದ್ರೆಗೆ ಬದಲಾಗಿ ಔಷಧಪಾತ್ರೆ ಹಿಡಿದಿರುವುದುಂಟು ಮತ್ತು ರೂಪ ಸಂಪತ್ತು ಮತ್ತು ಆಕೃತಿ ಎಂಬ ದೇವತೆಗಳು ಅವರ ಬಲ-ಎಡಗಳಲ್ಲಿ ಪಾತ್ರಹಸ್ತರಾಗಿರುತ್ತಾರೆ.

## ಸೂರ್ಯ

ಸೂರ್ಯನಿಗೆ ಕೋಣಾರ್ಕವೇ ಉದಾಹರಣೆ. ಸೌರತಂತ್ರಾನುಸಾರವಾಗಿ ಮಾಠರ, ಪಿಂಗಲ, ದಂಡ ಎಂಬವರು ಆತನ ಪಾರಿಪಾರ್ಶ್ವಕರು. ಸಪ್ತಾಶ್ವ ರಥಾರೂಢನಾದ ಅವನ ಎಡಗಡೆ ಇಂದ್ರನಿರುತ್ತಾನೆ. ಅವನ ದಂಡನಾಯಕನ ಹೆಸರು ''ದಂಡ'' ಎಂದು. ಅವನ ಬಲಗಡೆ ಅಗ್ನಿ ಇರುತ್ತಾನೆ. ಪಿಂಗಲ ನೆಂಬಾತನು ಎಡಗಡೆ ಅವನ ದೂತನಾಗಿ ಇರುವ ದೇವತೆಯು. ಯಮನು ಅವನ ಬಲಗಡೆ ಇರುತ್ತಾನೆ; ಈ ಯಮನಿಗೆ ಮಾಠರನೆಂದು ಹೆಸರು. ಅರುಣನು ಸೂರ್ಯನ ರಥದ ಅನೂರು ಸಾರಥಿಯು, ಗರುಡನ ಅಣ್ಣನು. ಸೂರ್ಯನ ಪ್ರಭಾವಲಯ ಅವನ ಪರಿಧಿ. ಸೂರ್ಯನ ಪತ್ನಿಯರು ಹಲವರು. ಸೂರ್ಯನ ಮಗನು ವೈವಸ್ವತಮನು. ಅವನ ತೇರಿನ ಏಳು ಕುದುರೆಗಳು ಹೆಂಗುದುರೆಗಳು. ಅವುಗಳೇ ಹರಿತ್ತುಗಳು ಎಂದು ಕರೆಯಲ್ಪಡುವ ರಂಜಲು ಮರದ ಎಲೆಯ ಬಣ್ಣವುಳ್ಳಂಥವು; ಹರಿತಃ=ದಿಕ್ಕುಗಳು ಎಂಬರ್ಥ ಇಲ್ಲಿ ಗನ್ವಯಿಸದು.

## ಉಪದೇವತೆಗಳು

### 1. ಅಷ್ಟವಸುಗಳು :

ಪ್ರತಿಯೊಬ್ಬನಿಗೂ ಇಗ್ಗ್ಲೆಗಳು, ಇಕ್ಕಣ್ಣಗಳು, ಕರಂಡಮುಕುಟಗಳು, ಕೋರೆದಾಡೆಗಳು, ನುಣುಪಾದ ಕೂದಲು, ಆಭರಣಗಳು, ಉಪವಿಷ್ಟ ಯಾ

ಉತ್ಥಿತ ಮೂರ್ತಿಗಳು ಮತ್ತು ಖಡ್ಗಪಾಣಿ ಯಾ ಖೇಟಕಪಾಣಿ. ಇವು ಅನುಕ್ರಮವಾಗಿ ಬಲಮುಂಗೈ-ಎಡಮುಂಗೈಗಳ ಗುರುತುಗಳು.

(೧) ಧರವಸುವು ಪದ್ಮ-ಅಕ್ಷಮಾಲಾಧರ ಮತ್ತು ಹಲ-ಶಕ್ತಿಗಳನ್ನು ಹಿಡಿದವನು.
(೨) ಧ್ರುವವಸುವು ಕಮಲಾಕ್ಷಮಾಲಾ-ಚಕ್ರಧರ ಮತ್ತು ಕಮಂಡಲು-ಚಕ್ರಪಾಣಿ
(೩) ಸೋಮವಸುವು ಪದ್ಮ-ಮುಕ್ತಾಹಾರಧರ, ಅಂಕುಶ-ಶಕ್ತಿಪಾಣಿ.
(೪) ಆಪವಸುವು ಹಲ-ಶಕ್ತ್ಯಾಯುಧಧರ, ಅಂಕುಶ-ಶಕ್ತಿಪಾಣಿ.
(೫) ಅನಿಲವಸುವು ಅಂಕುಶ-ಅಕ್ಷಮಾಲಾಧರ, ಶಕ್ತಿ-ಉಪವೀತಧಾರಿ.
(೬) ಅನಲವಸುವು ಅಕ್ಷಮಾಲಾ-ಸ್ರುವಧರ, ಕಪಾಲ-ಶಕ್ತಿಪಾಣಿ
(೭) ಪ್ರತ್ಯೂಷವಸುವು ಖಡ್ಗ-ಅಂಕುಶಧರ, ಖೇಟಕ-ಶಕ್ತಿಪಾಣಿ.
(೮) ಪ್ರಭಾಸವಸುವು ದಂಡ-ಕಪಾಲಪಾಣಿ, ಅಂಕುಶ-ಶಕ್ತಿಧರ.

## 2. ಸಪ್ತನಾಗದೇವರುಗಳು :

(೧) ವಾಸುಕಿ = ಅನಂತ = ಮಹಾಶೇಷ; ಭೂಮಿಯನ್ನು ಹೊತ್ತವನು.
(೨) ತಕ್ಷಕ = ಹೆಡೆಯಲ್ಲಿ ಸ್ವಸ್ತಿಕ ಚಿಹ್ನವುಳ್ಳವನು.
(೩) ಕಾರ್ಕೋಟಕ = ೩ ಬಿಳಿಗೆರೆ ಹೆಡೆಯಲ್ಲಿರುವವನು.
(೪) ಪದ್ಮ = ಬಿಳಿಗೆರೆ ಮತ್ತು ಹವಳದ ಆಭರಣವುಳ್ಳವನು.
(೫) ಮಹಾಪದ್ಮ = ಹೆಡೆಯ ಮೇಲೆ ತ್ರಿಶೂಲ ಚಿಹ್ನವುಳ್ಳಾತನು.
(೬) ಶಂಖಪಾಲ = ಹೆಡೆಯ ಮೇಲೆ ಬಿಳಿಗೆರೆಯುಳ್ಳಾತನು.
(೭) ಕುಳಿಕ = ಹೆಡೆಯ ಮೇಲೆ ಅರ್ಧಚಂದ್ರ ಚಿಹ್ನವುಳ್ಳವನು.

ಈ ನಾಗರು ಕಶ್ಯಪ-ದಾಕ್ಷಾಯಣಿಯರ ಪುತ್ರರು. ಶ್ರಾವಣದ ಶುಕ್ಲ ಪಂಚಮಿಯು ಅವರ ಜನನಕಾಲ. ನಾಗನ ಕಲ್ಲುಗಳು ಭಾರತದಲ್ಲಿ ಎಲ್ಲೆಡೆ ಅಶ್ವತ್ಥನ ಕಟ್ಟೆಗಳಲ್ಲಿ ಪ್ರತಿಷ್ಠಿತವಾಗಿರುವುದು ಉತ್ಸರ್ಗವಾಗಿದೆ.

ನಾಗದೇವನು ನಾಗರ ರಾಜನು. ಅವನು ತ್ರ್ಯಂಬಕ, ಚತುರ್ಭುಜ, ಕರಂಡಮಕುಟಧಾರಿ ಅಥವಾ ವಿವಿಧಾಭರಣವಿಭೂಷಿತ, ಪದ್ಮಪೀಠಸ್ಥ; ಅವನ ಮುಂಗೈಗಳು ವರದಾಭಯಹಸ್ತಗಳು ಮತ್ತು ಹಿಂಗೈಗಳು ಎರಡು ಹಾವುಗಳ ತಲೆಯ ಮೇಲಿರುತ್ತವೆ. ನಾಗರಾಜನ ತಲೆಯ ಮೇಲೆ ಪಂಚಫಣಾಲಂಕೃತ ನಾಗನಿರುತ್ತಾನೆ.

ಅಥವಾ

ತಲೆಯ ಮೇಲೆ ರತ್ನಹೊತ್ತ ಈ ನಾಗರು ಅರ್ಧ ಮಾನವರೂಪಿಗಳು; ಹೊಕ್ಕುಳ ಕೆಳಗೆ ಹಾವಿನರೂಪವುಳ್ಳವರು, ತಲೆಯನ್ನು ಒಂದು, ಮೂರು, ಐದು ಅಥವಾ ಏಳು ಹೆಡೆಗಳು ಮುಚ್ಚಿಕೊಂಡಿರುತ್ತವೆ; ನಾಗರೆಲ್ಲಾ ದ್ವಿಜಿಹ್ವರು. ಅವರಷ್ಟು ಮಾನಸಚ್ಛಾಯಿಗಳು. ನಾಗರು ಕತ್ತಿಯನ್ನೂ ಗುರಾಣಿಯನ್ನೂ ಕೈಯಲ್ಲಿ ಹಿಡಿದಿರುತ್ತಾರೆ; ಹಾಗೇ ಅವರು ಅಕ್ಷಮಾಲಾ-ಕಮಂಡಲುಧಾರಿಗಳು.

ಸಾಕ್ಷಾತ್ತಾಗಿ ನಾಗದೇವನು ಬಲಗೈಯಲ್ಲಿ ಖಡ್ಗಧರ, ಎಡಗೈಯಲ್ಲಿ ತನ್ನ ಸತಿಯನ್ನು ಆಲಿಂಗಿಸಿಕೊಂಡಿರುತ್ತಾನೆ. ನಾಗಿಣಿಗೆ ಕರಂಡಮುಕುಟ, ಅವನ್ನು ಹೆಡೆಯು ಮುಚ್ಚಿರುತ್ತದೆ; ಅದರಲ್ಲಿ ಮೂರು ತಲೆಗಳಿರುತ್ತವೆ.

**3. ಸಾಧ್ಯರು :**

ಸಾಧ್ಯರು ದ್ವಾದಶರು. ಅವರೆಲ್ಲಾ ಬೆಳಕಿನ ಕಿರಣಗಳು. ಮಾನ, ಮಂತ್ರ, ಪ್ರಾಣ, ನರ, ಅಪಾನ, ವೀರ್ಯವಾನ್, ವಿನಿರ್ಭಯ, ನಯ, ದಂಶ, ನಾರಾಯಣ, ವೃಷ ಮತ್ತು ಪ್ರಭ ಎಂಬಿವು ಅವರ ಹೆಸರುಗಳು. ಇವರೆಲ್ಲಾ ಧರ್ಮಪುತ್ರರಾದ ಮಹಾತ್ಮರು. ಇವರೆಲ್ಲಾ ಪದ್ಮಾಸನಸ್ಥರು, ಅಕ್ಷಮಾಲಾ-ಕಮಂಡಲುಧಾರಿಗಳು.

**3. ಅಸುರರು :**

ಅಸುರರು ಕಶ್ಯಪಪುತ್ರರು. ಸುರರ ಜ್ಯೇಷ್ಠಭ್ರಾತೃಗಳು. ಅಸುರ = ಜಲಸೇಚಕ ಮೋಡವು. ನಿರುಕ್ತದಂತೆ ಗಂಧರ್ವರು, ಪಿತೃಗಳು, ದೇವತೆಗಳು, ಅಸುರರು ಮತ್ತು ರಕ್ಷಸ್ಸುಗಳು ಪಂಚಜನರೆನ್ನಿಸುತ್ತಾರೆ. ಸಾಯಣಾಚಾರ್ಯಾನುಸಾರವಾಗಿ ದೇವತೆಗಳು, ಮಾನವರು, ಹಾವುಗಳು, ಗಂಧರ್ವಾಪ್ಸರಸ್ಸುಗಳು ಮತ್ತು ಪಿತೃಗಳು ಪಂಚಜನರು. ಅಸುರರು ಕೋರೆದಾಡೆಗಳನ್ನುಳ್ಳ ರಾಕ್ಷಸರು. ನಾನಾ ಆಯುಧಪಾಣಿಗಳು. ನಾನಾಲಂಕಾರಭೂಷಿತರು ಮತ್ತು ಕಿರೀಟ-ಕುಂಡಲಧಾರಿಗಳು.

**5. ಅಪ್ಸರಸ್ಸುಗಳು :**

ಘೃತಾಚೀ, ರಂಭೆ, ವಿಪುಲೆ, ಉರ್ವಶೀ, ತಿಲೋತ್ತಮೆ, ಮೇನಕೆಯರು; ಒಟ್ಟು ಏಳೇ ಜನರು. ಮುಷ್ಟಿಗ್ರಾಹ್ಯಕಟಿಯುಳ್ಳ, ವಿಶಾಲವಾದ

ಕಂಗಳುಳ್ಳ, ಹೆಮ್ಮೊಲೆಯ, ಸ್ಮೇರವದನೆಯರಾದ ಮತ್ತು ಸುಂದರಾಭರಣ ಧಾರಿಣಿಯರಾದ ಹಾಗೂ ಭದ್ರಪೀಠದಲ್ಲಿ ಸಮಭಂಗಿಯಲ್ಲಿ ನೆಟ್ಟಗೆ ನಿಂತಿರುವ ನಿತ್ಯಯೌವನವುಳ್ಳ ದೇವಕನ್ನಿಕೆಯರು.

**6. ಪಿಶಾಚರು :**

ಅತ್ಯಂತ ಕ್ಷೀಣಶರೀರವುಳ್ಳ, ಮೂಳೆ-ನರನಾಡಿ-ಚರ್ಮ ಮಾತ್ರ ಎದ್ದು ಕಾಣುವಂತಿರುವ, ಒರಟುಗೂದಲಿನ ಮಂಡೆ ಬಿಚ್ಚಿಕೊಂಡ ಭಯೋತ್ಪಾದಕರು.

**7 ವೇತಾಳರು :**

ಅತಿ ಎತ್ತರದ, ಒಣಗಿ ಅಪ್ಪಚ್ಚಿಯಾದ ಹೊಟ್ಟೆಯ, ಗಲ್ಲದೆಲುಬು ಎದ್ದುಕಾಣುವಂತಿರುವ ಪಿಶಾಚಸದೃಶರು.

**8. ಪಿತೃಗಳು :**

ಮರೀಚಿ ಮುಂತಾದ ಋಷಿಗಳೂ ಇತರ ಮುನಿಗಳೂ ಹಿರಣ್ಯಗರ್ಭ ನಾಮಕ ಮನುವಿನ ಮಕ್ಕಳೂ ಸೇರಿ ಏಳು ಪಿತೃಗಣಗಳಿರುತ್ತಾರೆ :

(೧) ವಿರಾಟ್‌ಪುತ್ರರೂ ಸಾಧ್ಯಪಿತೃಗಳೂ ಆದ ಸೋಮಸದ್‌ವರ್ಗ.

(೨) ದೇವತಾಪಿತೃಗಳಾದ ಅಗ್ನಿಷ್ವಾತ್ತ ವರ್ಗ. ಇವರು ಮರೀಚಿಯ ಮಕ್ಕಳು.

(೩) ದೈತ್ಯರ ಪಿತೃಗಳೂ ದಾನವರೂ ಅತ್ರಿಸುತರಾದ ಯಕ್ಷರೂ, ಉರಗರೂ, ರಾಕ್ಷಸರೂ ಸೇರಿದ್ದು ಬರ್ಹಿಷದ್ವರ್ಗ.

(೪) ಶುಕ್ರಾಚಾರ್ಯರ ಮಕ್ಕಳೂ ಸೋಮಪಾಯಿಗಳೂ ಬ್ರಾಹ್ಮಣರ ತಂದೆಯವರೂ ಆದ ಪುರೋಹಿತವರ್ಗ.

(೫) ಕ್ಷತ್ರಿಯಪಿತೃಗಳಾದ ಹವಿರ್‌ಭುಗ್ವರ್ಗ.

(೬) ಪುಲಸ್ತ್ಯಸುತರೂ ವೈಶ್ಯರ ಗೋತ್ರರ್ಷಿಗಳೂ ಆದ ಆಜ್ಯಪವರ್ಗ.

(೭) ವಾಸಿಷ್ಠರೂ ಶೂದ್ರಪಿತೃಗಳೂ ಆದ ಸುಕಲಿ ವರ್ಗ.

ಆಗಮಗಳ ಪ್ರಕಾರ ಪಿತೃಗಣಗಳು ಮೂರೇ ಮೂರು : ಪಿತೃ, ಪಿತಾಮಹ ಮತ್ತು ಪ್ರಪಿತಾಮಹ—ಎಂದು. ಅವರು ಮಣೆಯ ಮೇಲೆ ಕುಳಿತುಕೊಂ

ಬವರು ಅಥವಾ ಭದ್ರಪೀಠಸ್ಥರು. ಪ್ರತಿಯೊಬ್ಬನೂ ಬ್ರಹ್ಮಸೂತ್ರಧಾರಿ. ತಲೆಯಲ್ಲಿ ಕೇಶಬಂಧ; ಆಭರಣಾಲಂಕೃತ; ಭಸ್ಮೋದ್ಧೂಲಿತ ಶರೀರಿ, ಊರುಗೋಲನ್ನು ಹಿಡಿದವನು; ಛತ್ರಪಾಣಿ; ದ್ವಿಭುಜ; ಎಡಗೈಯನ್ನು ಬಾಗಿದ ಎಡಮೊಣಕಾಲಿನ ವರೆಗೆ ಚಾಚಿಕೊಂಡವನು; ಬಲಗೈಯಲ್ಲಿ ಸೂಚೀಹಸ್ತಮುದ್ರೆ ಅಥವಾ ಕುಶಾಸನ ಮತ್ತು ಪಿಂಡಪಾತ್ರಧಾರಿಯು.

## 9. ಸಪ್ತರ್ಷಿಗಳು :

ಪಿತೃಗಳ ಹಾಗೂ ಇತರರ ಜನಕರೂಪ ಸೂರ್ಯಕಿರಣಗಳು. ನಿರುಕ್ತಾನುಸಾರವಾಗಿ ಭೃಗು, ಅಂಗಿರಸ್, ಅತ್ರಿ: ವೈಖಾನಸ, ಮರೀಚಿ, ಕ್ರತುಗಳು. ಅವರೊಂದಿಗೆ ಪುಲಸ್ತ್ಯ, ಪುಲಹ, ವಸಿಷ್ಠರನ್ನೂ ಸೇರಿಸಲಾಗಿದೆ. ಭೃಗುವು ಬ್ರಹ್ಮಾಗ್ನಿಕುಂಡದಲ್ಲಿ ಹುರಿಯಲ್ಪಟ್ಟವನು. ಅಂಗಿರಸ್ಸರು ಬೆಂಕಿಕೆಂಡದಿಂದ ಹುಟ್ಟಿದವರು. ಅತ್ರಿಯು ಮೂರಲ್ಲದ (ನಾಲ್ಕೆಂಬ) ಅಗ್ನಿಕುಂಡಜಾತ; ಅಗ್ನಿಕುಂಡದ ಬುಡದ ನೆಲದಲ್ಲಿ ಹುಟ್ಟಿದವರು ವೈಖಾನಸರು—ಎಂಬುದು ಯಾಸ್ಕಾಭಿಪ್ರಾಯ. ಬ್ರಹ್ಮಾಂಡ ಪುರಾಣಾನುಸಾರ—ಮರೀಚಿ, ಕ್ರತು, ಅತ್ರಿ, ಪುಲಸ್ತ್ಯ, ಪುಲಹ ಮತ್ತು ವಸಿಷ್ಠರು ಬ್ರಹ್ಮಯಾಗ ನಡೆದಾಗ ದಕ್ಷಿಣೆಯಿಂದ ಜನಿಸಿದವರು. ಇವರೆಲ್ಲರೂ ಬ್ರಹ್ಮನ ಮಾನಸಪುತ್ರರೆಂದು ನಂಬಿಗೆ.

“ಕಶ್ಯಪೋऽತ್ರಿ ಭರದ್ವಾಜೋ ವಿಶ್ವಾಮಿತ್ರೋऽಥ ಗೌತಮಃ
ಜಮದಗ್ನಿರ್ವಸಿಷ್ಠಶ್ಚ ಸಾಧ್ವೀ ಚೈವಾಷ್ಯರುಂಧತೀ”

ಎಂಬುದು ಪ್ರಸಿದ್ಧ. ಇವರಲ್ಲಿ ವಸಿಷ್ಠ-ಅರುಂಧತಿಯರು ಒಬ್ಬರೆಂದು ಗೃಹೀತ. ಹಾಗೇ ಇತರ ಮಾನಸಪುತ್ರರ ಸಪ್ತವರ್ಗಗಳೂ ಇವೆ :

(೧) ವ್ಯಾಸಾದಯೋ ಮಹರ್ಷಯಃ
(೨) ಭೇಲಾದಯಃ ಪರಮರ್ಷಯಃ
(೩) ಕಣ್ವಾದಯೋ ದೇವರ್ಷಯಃ
(೪) ವಸಿಷ್ಠಾದಯೋ ಬ್ರಹ್ಮರ್ಷಯಃ
(೫) ಶುಶ್ರುತಾದಯಃ ಶ್ರುತರ್ಷಯಃ
(೬) ಋತುಪರ್ಣಾದಯೋ ರಾಜರ್ಷಯಃ
(೭) ಜೈಮಿನ್ಯಾದಯಃ ಕಾಂಡರ್ಷಯಃ

ಆಗಮಾನುಸಾರ ಮನ್ವಂತರದಿಂದ ಮನ್ವಂತರಕ್ಕೆ ಸಪ್ತರ್ಷಿಗಳು ಬದಲಾಗುತ್ತಾರೆ.

ಈ ಋಷಿಗಳು ಪದ್ಮಪೀಠಗಳಲ್ಲಿ ಕುಳ್ಳಿರುತ್ತಾರೆ ಯಾ ನಿಂತಿರುತ್ತಾರೆ. ಇವರಿಗೆ ಗಡ್ಡವಿದೆ. ಇವರು ಜಟಾಮುಕುಟಧಾರಿಗಳು, ಉಪವೀತಿಗಳು, ತ್ರಿಪುಂಡ್ರಭಸ್ಮಫಣಾಪಟ್ಟರು, ಕೋಲೂರಿಕೊಂಡು ನಡೆದಾಡುವವರು, ಛತ್ರ ರಕ್ಷಿತರು ಅಥವಾ ಅವರು ತಮ್ಮ ಬಲಗೈಯನ್ನು ಜ್ಞಾನಮುದ್ರೆಯಲ್ಲಿಟ್ಟುಕೊಂಡವರು ಮತ್ತು ಎಡಗೈಗಳನ್ನು ಎಡಮೊಣಕಾಲಿನ ವರೆಗೆ ಇಳಿಬಿಟ್ಟುಕೊಂಡವರು; ಈ ಮೊಣಕಾಲುಗಳು ಬಾಗಿರುತ್ತವೆ. ಕಟಿಸೂತ್ರಗಳು (ಉಡಿದಾರಗಳು) ಅವರ ಕೆಳನಾರುಮಡಿಯನ್ನು ಬಿಗಿದಿಡುತ್ತವೆ.

**10. ಗಂಧರ್ವರು :**

ಆಗಮಗಳಲ್ಲಿ ಗಂಧರ್ವರ ವರ್ಣನೆ ಇಲ್ಲ.

**11. ಮರುತ್ತುಗಳು :**

ಮರುತ್ತುಗಳ ಹೆಗಲ ಮೇಲೆ ಭರ್ಜಿಗಳಿರುತ್ತವೆ. ಅವರು ಗೆಜ್ಜೆಕಟ್ಟಿಕೊಂಡ ಪಾದಸಂಧಿಗಳನ್ನುಳ್ಳವರು; ಬಂಗಾರದ ಆಭರಣಗಳನ್ನೂ ಮುಂಚಾಚಿದ ಯೋಧಶಿರಸ್ತ್ರಾಣಗಳನ್ನೂ ಧರಿಸಿ ಹೊಳೆಹೊಳೆಯುವ ತೇರುಗಳನ್ನೇರಿ ಕೈಯಲ್ಲಿ ಸೂಡಿಗಳನ್ನು ಹಿಡಿದಿರುತ್ತಾರೆ. ಅವರು ಮಧ್ಯಪೀಠಸ್ಥರು, ದ್ವಿಭುಜರು-ಅಲ್ಲದೆ ಬೇಕಾದಷ್ಟು ವಿಪುಲ ಸುಂದರ ತಲೆಗೂದಲನ್ನುಳ್ಳವರು.

**12. ಸಿದ್ಧರು :**

ಸಿದ್ಧರು ಕಲ್ಪಾಂತಾಯುಷ್ಯವುಳ್ಳ, ಅಲೌಕಿಕ ಅಷ್ಟಸಿದ್ಧಿಸಂಪನ್ನರಾದ, ಸೂರ್ಯನ ಸುವರ್ಲೋಕದಲ್ಲಿ ಸಪ್ತರ್ಷಿಗಳ ದಕ್ಷಿಣ ದಿಕ್ಕಿನಲ್ಲಿರುತ್ತಾರೆ.

**13.** ವಿದ್ಯಾಧರರು ಅಪ್ಸರಸ್ಸುಗಳಿಗೆ ಗಂಧರ್ವರಂತೆಯೇ ಸಂಬಂಧಿಸಿದವರು.

**14.** ಕಿನ್ನರರು
**15.** ಕಿಂಪುರುಷರು
**16.** ತುರಂಗವದನರು
**17.** ಮಯುಗಳು
} ದೇವತೆಗಳ ಸೇವಕರು

# ಕ್ಷೇತ್ರಪಾಲ

ಕ್ಷೇತ್ರಪಾಲನು ನಿರ್ವಾಣವಿಗ್ರಹದಿಂದ ಸಂಕೇತಿತನು; ಎಂದರೆ ರುದ್ರನ ಒಂದು ಅವತಾರದಂತೆ ದಿಗಂಬರನು, ದ್ವಾಪರದ ಬೌದ್ಧನಂತೆ ನಗ್ನನು, ಗೋಮಟೇಶ್ವರನಂತೆ ನಿರ್ವಸ್ತ್ರನು. ಅವನು ತ್ರ್ಯಕ್ಷನು. ೨, ೪, ೬ ಅಥವಾ ೮ ಬಾಹುಗಳನ್ನುಳ್ಳವನು. ಅವನ ವಿಗ್ರಹ ತ್ರಿವಿಧ: ಸಾತ್ವಿಕ, ರಾಜಸ, ತಾಮಸ—ಎಂದು.

**ಸಾತ್ವಿಕ:** ತ್ರಿಶೂಲ, ಕಪಾಲ ಅಥವಾ ಖಡ್ಗ, ಘಂಟೆಗಳನ್ನು ಮುಂದಿನೆರಡು ಕೈಗಳಲ್ಲಿ ಹಿಡಿದುವಲ್ಲದೆ, ಬಲ-ಎಡಗೈಗಳ ಮುದ್ರೆಗಳು ವರದ ಮತ್ತು ಅಭಯ.

**ರಾಜಸ :** ಬಲಗೈಗಳಲ್ಲಿ ತ್ರಿಶೂಲ, ಖಡ್ಗ ಮತ್ತು ಘಂಟೆಗಳು.

**ತಾಮಸ :** ಅಧಿಕ ಬಾಹುಮಂತ; ಬಲಗೈಯಲ್ಲಿ ಬಿಲ್ಲು ಮತ್ತು ಎಡಗೈಯಲ್ಲಿ ಅಂಬು.

ನೆಟ್ಟಗೆ ನಿಂತ ಕೂದಲು (ತಲೆತುಂಬ, ಮೈತುಂಬ); ಸಮಭಂಗ ಶರೀರ (ನೆಟ್ಟನೆ); ಪದ್ಮಪೀಠಸ್ಥ, ಸರ್ಪಾಭರಣ ಮತ್ತು ನಗ್ನತೆ ಎಂಬೀ ಲಕ್ಷಣಗಳು ಮೇಲಿನ ಸಾತ್ವಿಕಾದಿ ಕ್ಷೇತ್ರಪಾಲಮೂರ್ತಿಗಳೆಲ್ಲವುಗಳಿಗೂ ಸಾಧಾರಣವಾಗಿವೆ.

ಅಥವಾ

ನಾಗಯಜ್ಞೋಪವೀತ, ತಲೆಬುರುಡೆಗಳ ಹಾರ, ತಲೆಯ ಮೇಲ್ಸುತ್ತು ಹಾಗೂ ದುಂಡಗಿರುವ ಕಣ್ಣುಗಳು; ಬಲಗೈಗಳಲ್ಲಿ ತ್ರಿಶೂಲ, ಖಡ್ಗ ಮತ್ತು ಎಡಗೈಗಳಲ್ಲಿ ಕಪಾಲ, ಖೇಟಕ—೬, ಕೈಗಳಿದ್ದರೆ, ಅಧಿಕವಾದ ಬಲಗೈಯಲ್ಲಿ ಡಮರುವನ್ನೂ ಎಡಗೈಯಲ್ಲಿ ಖಟ್ವಾಂಗವನ್ನೂ ಕ್ಷೇತ್ರಪಾಲ ವಿಗ್ರಹವು ಹಿಡಿದಿರುತ್ತದೆ.

ಅಥವಾ

ಕಪಾಲ, ಶೂಲ, ಘಂಟೆ, ಪಾಶ, ಅಗ್ನಿ, ಟಂಕ, ಖಟ್ವಾಂಗ ಮತ್ತು ಅಭಯ ಹಸ್ತಗಳಿಂದ ವಿಗ್ರಹವು ಅಲಂಕೃತವಾಗಿರುತ್ತದೆ ಮತ್ತು ಅಘೋರ ಶಿವಾಚಾರ್ಯದತ್ತವಾದ ಶ್ವಾನವು ಅದಕ್ಕೆ ವಾಹನವಾಗಿರಬಹುದು.

ಕ್ಷೇತ್ರಪಾಲನ ಅಪರನಾಮಧೇಯಗಳು :

ಕಂಚುಕ, ಕಾರಿ, ಮುಕ್ತ, ನಿರ್ವಾಣಿ, ಸಿದ್ಧ, ಕಪಾಲಿ, ವಟುಕ ಮತ್ತು ಭೈರವ. ಆದುದರಿಂದ ಕ್ಷೇತ್ರಪಾಲ = ರುದ್ರನ ಹತ್ತುಸಾವಿರ ಅಂಶಗಳಲ್ಲಿ ಒಂದಂಶವನ್ನುಳ್ಳ ಭೈರವನು. ಈ ಭೈರವನು ವಿಶಿಷ್ಟನಲ್ಲದೆ, ಶಿವಾವತಾರನಲ್ಲ; ಇವನು ಶಿವ (ರುದ್ರ) ಅವತಾರನೂ ಅಲ್ಲ, ಪ್ರಥಮ ದರ್ಜೆಯ ರುದ್ರಸೇವಕನೂ ಅಲ್ಲ.

## ರೂಢಿಗತ ವಿಗ್ರಹಗಳು

ಆರ್ಯ ಯಾ ಹರಿಹರಪುತ್ರ ಯಾ ಶಾಸ್ತ ಯಾ ಅಯ್ಯನಾರ್ (ತಮಿಳು) ಯಾ ಅಯ್ಯಪ್ಪ (ಕನ್ನಡ) ಎಂಬುದು ಮಲೆಯಾಳ ವಿಶಿಷ್ಟ. ಅಯ್ಯನಾರಪ್ಪನ್ ಗ್ರಾಮದೇವತೆ, ಶೂದ್ರಪೂಜಿತ. ಮೋಹಿನೀರೂಪದಲ್ಲಿ ಹರಿ ಬಂದಾಗ ಅವನನ್ನು ಕೂಡಿದ ಹರನಿಂದ ಅಯ್ಯಪ್ಪನ ಜನನ.

ಶಾಸ್ತ = ಶಾತವಾಹನ = ಬುದ್ಧ = ಭೂತ—ಇಷ್ಟಾರ್ಥಗಳು. ಈ ಅಯ್ಯಪ್ಪನಿಗೆ ೪ ಕೈಗಳು, ಮೂರು ಕಣ್ಣುಗಳು, ಪದ್ಮವು ಆಸನ; ಮುಂಗೈಗಳು (ಬಲ-ಎಡ) ಅಭಯ-ವರದ ಹಸ್ತಗಳು. ಹಿಂಗೈಗಳು ಖಡ್ಗ-ಖೇಟಕಧಾರಿಗಳು.

ಅಥವಾ

ಇಗ್ಗೈಗಳು, ಇಕ್ಕಣ್ಣುಗಳು, ಯಜ್ಞೋಪವೀತ, ಬಾಹು-ಚರಣಗಳು ಮಡಿಸಿಕೊಂಡಿರುವುದು; ವಕ್ರವೇತ್ರಾಯುಧ; ಬಲಗೈಯಲ್ಲಿ—ಎಡಗೈಯಲ್ಲಿ ಹಣ್ಣು ಎಳೆಚಿಗುರುಗಳು; ತಲೆತುಂಬ ಕೂದಲು; ನಾಯಿಗಳೊಡನೆ ಶಾಸ್ತನ ಆಟ; ಇಲ್ಲವಾದರೆ ಕುರಿಗಳು, ಹುಂಜಗಳು ಇವುಗಳೊಡನೆ ಕೊಂಡಾಟ; ಶಾಸ್ತನ ಹೆಂಡಿರಿಬ್ಬರು ಎಡಬಲಗಳಲ್ಲಿ ಕುಳಿತಿರುವರು. ಶಾಸ್ತನೆಡಕ್ಕೆ ದುರ್ಮುಖನಾದ ದಮನಕನಿರುತ್ತಾನೆ. ಅಥವಾ ಬೌದ್ಧಶಾಸ್ತನು ಪೀಠಸ್ಥ, ವಜ್ರದಂಡ, ಬಲಗೈಯಲ್ಲಿ ಅರ್ಥಾತ್ ವಕ್ರನೇತ್ರ; ತಲೆಗೂದಲು ಬಿಚ್ಚಿಹರಡಿಕೊಂಡಿರುತ್ತದೆ. ಆನೆಯು ಎದುರಿರುತ್ತದೆ. ಅದು ಧ್ವಜವೂ ಹೌದು, ವಾಹನವೂ ಹೌದು. ಅವನ ಪಕ್ಕದಲ್ಲೊಬ್ಬ ಅಪ್ಸರೆ. ಬಸವನೂ ಅವನಿಗೆ ವಾಹನವಾಗುವದುಂಟು. ನಾಲ್ಕು ಕೈಗಳಿರಬಹುದು. ಹುಂಜವು ಅವನ ಧ್ವಜದ ತುದಿಮಣಿಯೆನ್ನಿಸಬಹುದು.

ಯೋಗಿಶಾಸ್ತ, ಬ್ರಹ್ಮಚಾರಿಶಾಸ್ತ ಅಥವಾ ಶಾಸ್ತವಿಗ್ರಹಗಳು ಅನುಕ್ರಮವಾಗಿ ಯೋಗಾಸನ, ವೀರಾಸನ ಅಥವಾ ಸುಖಾಸನದಲ್ಲಿ ಇರಬಹುದು.

# ಗ್ರಾಮದೇವತೆಗಳು

ಮಾರಿ, ಜಟ್ಟಿಗ, ಕರಿಬಂಟ, ಭೂತಪ್ಪ ಮುಂತಾದ ವಿಗ್ರಹಗಳು ಗ್ರಾಮ ಕಾಯುವ, ಗ್ರಾಮದ ಹೊರವಲಯದಲ್ಲಿರುವ ದೇವತೆಗಳು. ಜಟ್ಟಿಗ (ಜಟಿಂಗ) ಯಜಮಾನ ದೇವತೆ. ಕಲ್ಲುಕುಟ್ಟಿಗ, ಬಬ್ಬರ್ಯ, ಹುಲಿರಾಯ, ಹಾಯುಗುಳಿ, ಚೌಡಿ, ಕೊಲಿ, ಕುಂತಿ, ಬ್ರಹ್ಮರಾಕ್ಷಸ ಮುಂತಾದವು ಕೊರಡು ಹಿಡಿದಿರುವ ಜಟ್ಟಿಗ (ಜಟ್ಟಯ್ಯ) ದೇವನ ಸೇವಕರು. ಇವೆಲ್ಲಾ ದಾರುಶಿಲ್ಪಗಳಾಗಿರುವುದೇ ಹೆಚ್ಚು. ಕೋಳಿ, ಕುರಿ, ಕೋಣ ಮುಂತಾದವು ಗಳಿವುಗಳಿಗೆ ಬಲಿಗಳು.

# ಶಕ್ತಿದೇವತೆಗಳು

ಇಂದ್ರಾಣಿ, ವೈಷ್ಣವಿ, ಬ್ರಹ್ಮಾಣಿ, ಶಾಂತೆ ಅಥವಾ ಕೌಮಾರಿ, ನಾರಸಿಂಹಿ, ವಾರಾಹಿ, ಮಾಹೇಶ್ವರಿ ಅಥವಾ ಚಾಮುಂಡೆ, ಚಂಡಿಕೆ=೮.

ಅಥವಾ

ವೈಷ್ಣವಿ, ಬ್ರಹ್ಮಾಣಿ, ರೌದ್ರಿ, ಮಾಹೇಶ್ವರಿ, ನಾರಸಿಂಹಿ, ವಾರಾಹಿ, ಇಂದ್ರಾಣಿ, ಕಾರ್ತಿಕಿ, ಪ್ರಧಾನೆ=೯.

ಅಥವಾ

ನಿಂದ್ಯವಾದ ಶಾಕ್ತಪೂಜಿತ ನಗ್ನಮೂರ್ತಿಗಳು ಯೋನಿಸ್ವರೂಪದವುಗಳು ವಾಮಾಚಾರಾನುಸಾರವಾಗಿ.

ಈ ಶಕ್ತಿಗಳ ಆಯುಧಗಳು ಚಾವಟಿ, ಭರ್ಜಿ, ಈಟಿ, ಶಕ್ತಿ, ಬಾಣ, ಕತ್ತಿ, ಧ್ವಜದಂಡ—ಇವುಗಳು.

---

**ಟಿಪ್ಪಣಿ :** ಎಲ್ಲವ್ವನನ್ನು ರೇಣುಕೆ ಎಂಬುದು ಮೂಢನಂಬಿಗೆ. ರೇಣುಕೆ ಜಮದಗ್ನಿಪತ್ನಿ, ಪರಶುಧರನ ತಾಯಿ. ಅವಳ ದೇವೀತ್ವವು ಪಾರ್ವತೀತ್ವಸದೃಶವಾದುದು. ಅವಳು ಗ್ರಾಮದೇವತೆಯಂತಾದುದು ಎಲ್ಲವ್ವನನ್ನು ಅವಳ ಪರ್ಯಾಯವೆಂದು ಪೂಜಿಸಲಾರಂಭಿಸಿದಾಗ. ದೇವದಾಸ್ಯಾದಿ ವ್ಯವಹಾರಕ್ಕೆ ಎಲ್ಲವ್ವ ಮೂಲ. ಬತ್ತಲೆಯುಡುಗೆಯು, ಸೊಪ್ಪುಡುಗೆಯು ಹರಕೆಗೆ ಚಂದ್ರಗುತ್ತಿಯ ರೇಣುಕೆ ಓಡುತ್ತಾ ಬತ್ತಲಾಗಿ ಶಿಲಾಗುಹಾಂತರ್ಗತೆಯಾದುದು ಕಾರಣ. ಪಿತ್ರಾಜ್ಞೆಯಂತೆ ವಿಷ್ಣುವಿನ ಅವತಾರಿ ಪರಶುರಾಮ ರೇಣುಕಾಮಾತೆಯನ್ನು ತಲೆಗಡಿಯಲು ಬೆನ್ನು ಹತ್ತಿದಾಗ ಅವಳು ಬತ್ತಲೆಯಾಗಿ ಕಲ್ಗುಹೆ ಹೊಕ್ಕಳು. ಅವಳಿಗಿಂದು ನಡೆಯುತ್ತಿರುವುದು ಪೃಷ್ಠ (ಕುಂಡೆ) ಪೂಜೆ. ಇದು ಪುರಾಣಪ್ರಸಿದ್ಧ.

ಶಕ್ತ್ಯಾಯುಧವೆಂದರೆ ಚತುಷ್ಕೋನ ಆಕೃತಿಯ ಅಥವಾ ಅಂಡಾಕೃತಿಯ ಲೋಹಕೃತ ಹಾಗೂ ತುದಿಯಲ್ಲಿ ಕಬ್ಬಿಣದ ಸೀಗಿಲತ್ತಿಯಂತಿರುವ ಹಾಗೂ ಮರದ ಹಿಡಿಕೆಯುಳ್ಳ ಆಯುಧ.

ಪರಾಶರನ ತಂದೆ ಅಥವಾ ವಸಿಷ್ಠನ ಜ್ಯೇಷ್ಠಸುತನು ಶಕ್ತಿನಾಮಕನು.

ಶಾಕ್ತತಾಂತ್ರಿಕರು ದುರ್ಗಾ (ಶಕ್ತಿಯ)ಸಾಧಕರು; ಅವರ ದಕ್ಷಿಣಾಚಾರವು ಗ್ರಾಹ್ಯ ಮತ್ತು ವಾಮಾಚಾರವು ತ್ಯಾಜ್ಯವು.

ದೇವತೆಯ ಕ್ರಿಯಾಶಕ್ತಿಯೇ ಶಕ್ತಿಯು. ಶಕ್ತಿಯನ್ನು ಮೂರ್ತೀಕರಿಸಿದವರು ಆ ದೇವತೆಯನ್ನು ಮೂರೆಂದರು, ಎಂಟೆಂದರು, ಕೆಲವೊಮ್ಮೆ ಒಂಭತ್ತೆಂದರು. ಇನ್ನೂ ಕೆಲವರು ಶಕ್ತಿದೇವತೆಗಳು ೫೦ ಎಂದರು—ವಿಷ್ಣುವಿಗೈವತ್ತು, ಶಿವನಿಗೈವತ್ತು=೧೦೦. ಕೊನೆಗೆ ಎಷ್ಟುದೇವತೆಗಳಿದ್ದಾರೋ ಅವರೆಲ್ಲರಿಗೂ ಒಬ್ಬಳಿಗಿಂತ ಹೆಚ್ಚು ಶಕ್ತಿಪತ್ನಿಯರಾದರು. ಆದುದರಿಂದ ಪುಂದೇವತೆಗಳಿಗಿಂತ ಸ್ತ್ರೀದೇವತೆಗಳ ಸಂಖ್ಯೆ ಹೆಚ್ಚಾಯಿತು. ಪ್ರತಿಯೊಂದು ಪುಂದೇವತೆಯೂ ''ಏಕೋऽಹಂ ಬಹುಪತ್ನೀಕಃ'' ಎಂಬಂತಾಯಿತು.

"ಭೇದಾಃ ಸಹಸ್ರಂ ತವ ದೇವಿ ಸಂತು
ತ್ವಂ ಮೂಲಶಕ್ತಿರ್ಮಮ ಮಾತರೇಕಾ ।
ಸ್ತೋತ್ರಾಣಿ ತೇ ಬುದ್ಧಿಮತಾಂ ವಿಭೂತಿ-
ದ್ವಾರಾ ಬಹುನೀವ ವಿಭಾಂತಿ ಲೋಕೇ ॥''

—'ಪ್ರಚಂಡ ಚಂಡೀತ್ರಿಶತೀ' ಪುಟ-೨೦

ನವರಾತ್ರಿಯ ನವದುರ್ಗೆಯರು: ಕುಮಾರಿಕೆ, ತ್ರಿಮೂರ್ತಿ, ಕಲ್ಯಾಣಿ, ರೋಹಿಣಿ, ಕಾಲಿ, ಚಂಡಿಕೆ, ಶಾಂಭವಿ, ದುರ್ಗೆ ಮತ್ತು ಭದ್ರೆ. ಬಗಲಾಮುಖಿ, ಛಿನ್ನಮಸ್ತೆ ಮುಂತಾದ ನವಪರ್ಯಾಯಗಳು ವಂಗೀಯ, ಶಾಕ್ತತಂತ್ರೀಯ. ವಾಸಿಷ್ಠಗಣಪತಿಮುನಿಗಳು ಛಿನ್ನಮಸ್ತೆಗೆ ಮೂಲಾಧಾರದಿಂದೆದ್ದ, ಕುಂಡಲಿನಿ ಸಹಸ್ರಾರಚಕ್ರಕ್ಕೇರಿದಾಗ ಜೀವಾತ್ಮನು ಪರಮಾತ್ಮೈಕ್ಯವನ್ನು ಪಡೆಯುವ ಶಕ್ತಿ ಎಂದು ಪ್ರಾಧಾನ್ಯವನ್ನು ಕೊಟ್ಟಿದ್ದಾರೆ—ಎಂಬುದಿಲ್ಲಿ ಗಮನಾರ್ಹವಾದುದು.

# ಪೀಠಪ್ರಕಾರಗಳು

ಪೀಠಗಳು ಪಿಂಡಿಕೆಗಳು. ಅವುಗಳ ಪ್ರಕಾರಗಳು : [೧] ಸಮಚತುಷ್ಕೋಣ, [೨] ವಿಷಮಚತುಷ್ಕೋಣ; [೩] ಸಮಷಟ್ಕೋಣ; [೪] ವಿಷಮಷಟ್ಕೋಣ; [೫] ಅಷ್ಟಕೋಣ; [೬] ದೀರ್ಘಾಷ್ಟಕೋಣ, [೭] ಸಮದ್ವಾದಶಕೋನ; [೮] ವಿಷಮದ್ವಾದಶಕೋನ; [೯] ಸಮಷೋಡಶಕೋನ; [೧೦] ವಿಷಮಷೋಡಶಕೋನ; [೧೧] ಸಾಮಾನ್ಯ ವಿಷಮಕೋನ, [೧೨] ಸಮವರ್ತುಲಕೋನ; [೧೩] ವಿಷಮವರ್ತುಲಕೋನ; [೧೪] ತ್ರಿಕೋಣ; [೧೫] ಅರ್ಧಚಂದ್ರ; [೧೬] ವಿಶಿಷ್ಟ ಅರ್ಧಚಂದ್ರ. ವಿಷಮವೆಂಬುದರಿಂದ ದೀರ್ಘವೃತ್ತಾಕಾರ ಯಾ ಅಂಡಾಕಾರ; ಚತುಷ್ಕೋನಾದಿ ಚತುರ್ಭುಜಗಳಾದರೆ ಎರಡೆರಡು (ಎದುರುಬದುರು) ಭುಜಗಳು ಸಮಾಂತರ ರೇಖೆಯುಳ್ಳವುಗಳಾಗಿರುತ್ತವೆ. ವಿಶಿಷ್ಟವು ಕಚ್ಚುಕಚ್ಚಾದ ಅರ್ಧಚಂದ್ರನ=ಅರ್ಧ ಪರಿಧಿಯುಳ್ಳದ್ದು—ಅದರ ಮೇಲಿನ (ಒಂದು ಬದಿಯ) ರೇಖೆ ಸರಳ.

ಪೀಠಗಳು 'ಯೋನಿ'ಗಳಲ್ಲ, ಆಕರಗಳು; 'ಲಿಂಗ'ಗಳೂ ಶಿಶ್ನಚಿಹ್ನಗಳಲ್ಲ. ಲಿಂಗವು ನಿರಾಕಾರ ಪರಬ್ರಹ್ಮ ಸಂಕೇತ. ಹಾಗೇ ಸಾಲಗ್ರಾಮವೂ—ಅದು ವೃಷಣ ಚಿಹ್ನವಲ್ಲ.

ಒಂದನೆಯದಾದ ಚತುರ್ಭುಜಾಕಾರದ ಪೀಠದ ಪ್ರಕಾರಗಳು ೯; ಅವುಗಳಲ್ಲಿ ಉತ್ತಮೋತ್ತಮವೆಂಬುದರ ಉದ್ದಳತೆಯು ಲಿಂಗದ ಉದ್ದದ ೩/೪ರಷ್ಟಿರುತ್ತದೆ; ಅಧಮಾಧಮ ಎಂಬುದು ಲಿಂಗದ ಉದ್ದಳತೆಯ ಅರ್ಧಷ್ಟಿರುತ್ತದೆ.

ಮಾನಸಾರ ಶಿಲ್ಪಶಾಸ್ತ್ರಾನುಸಾರವಾಗಿ—

೧. ನಾಗರಪೀಠ [ಚತುರ್ಭುಜವುಳ್ಳದ್ದು]
೨. ದ್ರಾವಿಡಪೀಠ [ಅಷ್ಟಭುಜವುಳ್ಳದ್ದು]
೩. ವೇಸರಪೀಠ [ವೃತ್ತಾಕಾರವುಳ್ಳದ್ದು]
೪. ಧಾರಾಪೀಠ [ವೈಶ್ವತ್ರಿಕ]

ಪೀಠದ ಒಂದು ಮಗ್ಗುಲಿನ ಉದ್ದವು ಲಿಂಗದ [ಪೀಠದ ಮೇಲೆ ಇರಿಸಿದ ಮೂರ್ತಿಯ] ವ್ಯಾಸದ ಮೂರು ಪಟ್ಟಿನಷ್ಟಿರುತ್ತದೆ ಅಥವಾ ಲಿಂಗದ ಪೂಜಾಭಾಗಕ್ಕೆ ಇಲ್ಲವೆ ಅದರ ವಿಷ್ಣುಭಾಗಕ್ಕೆ ಸರಿಸಮವಾಗಿರುತ್ತದೆ. ಪೀಠದ

* ಪೀಠ—ಆಸನ ಅಥವಾ (ಯೋನ್ಯಾದಿ ಪದಸೂಚಕ) ಮೂರ್ತಿ ಯಾ ಲಿಂಗವು ನೆಟ್ಟಿರುವ ನಿಂತಿರುವ, ಕುಳಿತಿರುವ ಯಾ ಮಲಗಿರುವ ಮಣೆ, ವಿಶ್ರಾಮಪದ.

ಉದ್ದಗಲವು ಲಿಂಗದ ವಿಷ್ಣುಭಾಗದ ಪರಿಧಿಯವರೆಗೆ ಬರಬಹುದು. ಹಾಗೇ ಪೀಠದ ಎತ್ತರವು ವಿಷ್ಣುಭಾಗದ ಮೇಲ್ತುದಿಯ ತನಕ ಬರಬಹುದು; ಅಥವಾ ಅದು ಇಡಿ ಪೂಜಾಭಾಗವನ್ನು ಅಳವಡಿಸಿಕೊಳ್ಳಬಹುದು—ವಿಷ್ಣುಭಾಗದ ಅರ್ಧಕ್ಕೆ ಯಾ ಕಾಲುಭಾಗಕ್ಕೆ ಸರಿದೊರೆಯಾಗಬಹುದು.

ಪೀಠವು ಒಂದರ ಮೇಲೊಂದರಂತೆ ಇಟ್ಟ ಒಂದು, ಎರಡು ಅಥವಾ ಮೂರು ಕಲ್ಲುಹಲಗೆಗಳಿಂದ ರಚಿತವಾಗಿರಬಹುದು. ಪೀಠಗಳನ್ನು ವಿವಿಧ ಕುಸುರುಗೆಲಸಗಳಿಂದ ಅಲಂಕರಿಸಬಹುದು. ಈ ಸೂಕ್ಷ್ಮ ಆಲಂಕಾರಿಕ ವಕ್ರ ರೇಖೆಗಳನ್ನು ಸ್ತರಗಳ ಮೇಲೆ ಸ್ತರಗಳಂತೆ ನಿರ್ಮಿಸಲಾಗುತ್ತದೆ. ವಿವಿಧ ರಚನಾವಿಧಾನಾನುಸಾರ ಇವುಗಳ ಆಕೃತಿ ಮತ್ತು ಸಂಖ್ಯೆಗಳಿಗುಣವಾಗಿ ಅವುಗಳಿಗೆ ಹೆಸರಿಡಲಾಗಿದೆ: ಉದಾ—ಭದ್ರಪೀಠ, ಮಹಾಂಬುಜಪೀಠ, ಶ್ರೀಕರ ಪೀಠ, ವಿಕರಪೀಠ ಮಹಾವಜ್ರಪೀಠ, ಸೌಮ್ಯಕಪೀಠ, ಚಂದ್ರಪೀಠ ಮತ್ತು ವಜ್ರಪೀಠ. ರಚನಾವಿಧಾನದ ವಿವಿಧ ಸಾಮುಗ್ರಿಗಳಾವುದೆಂದರೆ—ಉಪಾನ, ಜಗತಿ, ಕುಮುದ, ಪದ್ಮ, ಕಂಪ, ಕಂಠ, ಪಟ್ಟಿಕೆ, ನಿಮ್ನ ಮತ್ತು ಘೃತವಾರಿ. ಪೂಜಕನಿಗೆದುರಾದಂತೆ ಪೀಠದ ನಾಲೆಯು [ತೀರ್ಥವಾಹಿಯು] ಲಿಂಗದ ಎಡಕ್ಕೆ ಇರುತ್ತದೆ. ಈ ಜಲವಾಹಕದ ಉದ್ದಳತೆಯೂ ಅಡ್ಡಳತೆಯೂ ಪೀಠದ ಮೂಲಭಾಗವು ಪೀಠದ ಬದಿಯ ಉದ್ದಳತೆಯ ೧/೩ ಯಾ ೧/೪ ರಷ್ಟಿರಬೇಕು ಮತ್ತು ತುದಿಯಲ್ಲಿ ಅದರ ಅಗಲವು ಮೂಲಭಾಗದ ಅಗಲದ ೩/೪ರಷ್ಟಿರಬೇಕು. ನಾಲೆಯ ಬದಿನೋಟವು ಆನೆಯ ತುಟಿಯಂತಿರಬೇಕು.

## ಆಸನಗಳು

[೧] ಅನಂತಾಸನ=ತ್ರಿಕೋಣಾಕೃತಿಯುಳ್ಳದ್ದು.

[೨] ಸಿಂಹಾಸನ=ಸಮ ಚತುರ್ಭುಜಾಕಾರದ ಆಸನ.

[೩] ವಿಮಲಾಸನ=ಷಟ್ಕೋಣ ಅಥವಾ ಷಡ್ಭುಜ.

[೪] ಯೋಗಾಸನ=ಅಷ್ಟಕೋಣ ಅಥವಾ ಅಷ್ಟಭುಜ.

[೫] ಪದ್ಮಾಸನ=ವೃತ್ತಾಕಾರದ ಯಾ ದೀರ್ಘ ವೃತ್ತಾಕಾರದ ಆಸನ [ಚಂದ್ರಜ್ಞಾನ]

[೬] ಭದ್ರಪೀಠ=ವೃತ್ತಾಕಾರದ ಯಾ ಸಮಚತುರ್ಭುಜಾಕಾರದ ಆಸನ.

[೭] ಕೂರ್ಮಾಸನ=ಅಂಡಾಕೃತಿಯುಳ್ಳದ್ದು ಯಾ ದೀರ್ಘ ವೃತ್ತಾಕಾರ ಉಳ್ಳದ್ದು.

[೮] ನವಸಿಂಹಾಸನ=ಚತುಷ್ಪಾದಾಸನ; ವೃತ್ತಾಕೃತಿಯನ್ನು ಅಥವಾ ಸಮಚತುರ್ಭುಜಾಕೃತಿಯನ್ನು ಉಳ್ಳದ್ದು.

# (ಶಿವ) ರುದ್ರಲಿಂಗ ಪ್ರಕಾರಗಳು

**ಏಕಾದಶರುದ್ರರು :**

| ಅಂಶುಮದ್‌ಭೇದಾಗಮದಂತೆ | ವಿಶ್ವಕರ್ಮಶಿಲ್ಪದಂತೆ | ರೂಪಮಂಡನದಂತೆ |
|---|---|---|
| ೧. ಮಹಾದೇವ | ಅಜ | ತತ್‌ಪುರುಷ |
| ೨. ಶಿವ | ಏಕಪಾದ | ಅಘೋರ |
| ೩. ಶಂಕರ | ಅಹಿರ್ಬುಧ್ನ್ಯ | ಈಶಾನ |
| ೪. ನೀಲಲೋಹಿತ | ವಿರೂಪಾಕ್ಷ | ವಾಮದೇವ |
| ೫. ಈಶಾನ | ರೇವತ | ಸದ್ಯೋಜಾತ |
| ೬. ವಿಜಯ | ಹರ | ಮೃತ್ಯುಂಜಯ |
| ೭. ಭೀಮ | ಬಹುರೂಪ | ಕಿರಣಾಕ್ಷ |
| ೮. ದೇವದೇವ | ತ್ರ್ಯಂಬಕ | ಶ್ರೀಕಂಠ |
| ೯. ಭವೋದ್ಭವ | ಸುರೇಶ್ವರ | ಅಹಿರ್ಬುಧ್ನ್ಯ |
| ೧೦. ರುದ್ರ | ಜಯಂತ | ವಿರೂಪಾಕ್ಷ |
| ೧೧. ಕಪಾಲೀಶ | ಅಪರಾಜಿತ | ಬಹುರೂಪ ಯಾ ತ್ರ್ಯಂಬಕ |

ಎಲ್ಲ ಲಿಂಗಗಳೂ 'ಸಿಲಿಂಡ್ರಿಕಲ್' ಆಗಿರುತ್ತವೆ.

**ನಾಗರಲಿಂಗವು** ಮಯಮತದ ಪ್ರಕಾರ ಲಿಂಗದ ಇಡಿ ಉದ್ದದ—ಅದೇ ದೇವಾಲಯ (ಗರ್ಭಗೃಹ)ದ ಒಬ್ಬದಿಯನ್ನು ಅನುಸರಿಸಿದ್ದರಿಂದ ಅದರ—೧೬ ಸಮವಿಭಾಗವುಳ್ಳದ್ದಾಗಿರುತ್ತದೆ. ಅದರ ೩ ಯಾ ೪ ಯಾ ೫ ಸಮ ವಿಭಾಗಗಳಷ್ಟಿರುತ್ತದೆ. ಜಯದ ಲಿಂಗವು ಪಂಚಸಮವಿಭಾಗದಷ್ಟಿದೆ; ಪೌಷ್ಟಿಕ ಲಿಂಗವು ೪ ಸಮವಿಭಾಗದಷ್ಟಿರುತ್ತದೆ; ಸಾರ್ವಕಾಮಿಕಲಿಂಗವು ೩ ಸಮ ವಿಭಾಗದಷ್ಟಿರುತ್ತದೆ.

**ದ್ರಾವಿಡ ಲಿಂಗವು ಹೀಗಿದೆ :**

ಲಿಂಗದ ಇಡಿ ಅಳತೆಯನ್ನು ೨೧ ಭಾಗಗಳನ್ನಾಗಿ ವಿಭಜಿಸಬೇಕು. ಇಂಥ ೬ ವಿಭಾಗಸಮಾನವಾದದ್ದು ಜಯದ ಲಿಂಗವು; ಇಂಥ ೫ ವಿಭಾಗ ಸಮಾನ ವಾದದ್ದು ಪೌಷ್ಟಿಕಲಿಂಗವು; ಈ ಬಗೆಯ ೪ ವಿಭಾಗ ಸಮವಾದದ್ದು ಸಾರ್ವಕಾಮಿಕ.

ವೇಸರಲಿಂಗವು ಈ ಪ್ರಕಾರವಾಗಿದೆ. ಇಡಿಲಿಂಗವನ್ನು ೨೪ ಭಾಗಗಳನ್ನಾಗಿ ಮಾಡಬೇಕು, ಮತ್ತು ಆ ಭಾಗಗಳಲ್ಲಿ ೮ ಭಾಗಗಳಷ್ಟಿರುವುದು ಜಯದವು; ೭ ಭಾಗಗಳಷ್ಟಿರುವುದು ಪೌಷ್ಟಿಕವು ಹಾಗೂ ೬ ಭಾಗಗಳಷ್ಟಿರುವುದು ಸಾರ್ವಕಾಮಿಕವು.

**ಲಿಂಗವರ್ಗಗಳು :**

ಲಿಂಗವು ಮೂರ್ತಿವಿದ್ಯೆಯ ಮೂಲ. ಅದರ ವರ್ಗಗಳು ಅನೇಕ. ಅದರ ಮಹಾವಿಭಾಗಗಳೆರಡು: **ಚಲ** ಯಾ ಜಂಗಮ ಲಿಂಗ ಮತ್ತು **ಸ್ಥಾವರ** ಯಾ ಅಚಲಲಿಂಗ. ಚಲಲಿಂಗವು ಮೃಣ್ಮಯ, ಲೋಹಜ, ರತ್ನಜ, ದಾರುಜ, ಶೈಲಜ ಮತ್ತು ಕ್ಷಣಿಕ ಎಂದು ಷಡ್ವಿಧವಾಗಿದೆ. ಮೃಣ್ಮಯದಲ್ಲಿ ಪಕ್ವ, ಅಪಕ್ವ ಎಂದು ದ್ವಿವಿಧ. ಲೋಹಜದಲ್ಲಿ ಹೇಮಜ, ರೌಪ್ಯಜ, ತಾಮ್ರಜ, ಕಾಂಸ್ಯಜ, ಲೋಹಜ, ಸೀಸಜ, ಹಿತ್ತಾಳಿಜ ಮತ್ತು ತವರಜ ಎಂದು ಎಂಟು ವಿಧ. (Of gold, silver copper, bell metal, iron, lead, lapis calamineries pewter and tuenag). ರೀತಿ : ಆರಕೂಟ= ಹಿತ್ತಾಳಿ, ಲೋಹ=ಕಾಲಾಯಸ, ತವರ=ತ್ರಪು; ಸೀಸ, ರಂಗ, ವಂಗ. ಲೋಹ= ಯಾವುದಾದರೂ ಲೋಹ, ಧಾತು (Base Metal). ರತ್ನಜದಲ್ಲಿ ಮೌಕ್ತಿಕಜ, ಪ್ರವಾಳಜ, ವೈಡೂರ್ಯಜ, ಪಟ್ಕೋನ ಸಿಲಿಕಜ, ಸ್ಫಟಿಕಜ, ಪುಷ್ಯರಾಗಜ, ಮರಕತಜ ಮತ್ತು ನೀಲಜ ಎಂದು ಸಪ್ತವಿಧ. ಪಂಚಲೋಹ ನವರತ್ನ ಲಿಂಗಗಳು ಕಡಿಮೆ. ಸ್ಫಟಿಕ=ಹರಳು=crystal.

**ಸ್ಥಾವರ ಯಾ ಅಚಲಲಿಂಗಗಳ ವಿವರ :**

**ಸ್ಥಾವರ :** ಸ್ವಾಯಂಭುವ (ಉದ್ಭವಲಿಂಗ, ಭಾರತದ ೬೮ ಸ್ಥಳಗಳಲ್ಲಿದೆ), ಪೂರ್ವ ಯಾ ಪುರಾಣ ದೈವತ ಯಾ ದೈವಿಕ, ಗಾಣಪತ್ಯ, ಆಸುರ, ಸೌರ (ಸೂರ್ಯಜ), ಆರ್ಷ, ರಾಕ್ಷಸ; ಮಾನುಷ—ಅತ್ಯಧಿಕ ಸಂಖ್ಯಾತಗಳು ಮನುಷ್ಯಕೃತ ಲಿಂಗಗಳು ಮತ್ತು ಬಾಣ. ಮಾನುಷಕೃತಕ ಸ್ಥಾವರಲಿಂಗವು ದಶವಿಧ—ಅದು ಬ್ರಹ್ಮಭಾಗ, ವಿಷ್ಣುಭಾಗ ಮತ್ತು ರುದ್ರಭಾಗಗಳಿಂದ ಕೂಡಿರುತ್ತದೆ. ಚತುರ್ಭುಜಭಾಗವು ಬ್ರಹ್ಮಭಾಗವು; ಅಷ್ಟಭುಜಭಾಗವು ವಿಷ್ಣುಭಾಗ; ಮತ್ತು ವೃತ್ತಾಕಾರದ ತುದಿಯು ರುದ್ರಭಾಗವು. ರುದ್ರಭಾಗಕ್ಕೆ ಬ್ರಹ್ಮಸೂತ್ರವಿದೆ ಮತ್ತು ಭಿನ್ನ ಭಿನ್ನ ಶಿರೋವರ್ತನಗಳಿವೆ. ಬ್ರಹ್ಮಭಾಗವು

ಪೀಠವಲ್ಲಿ ಕಂತಿಹೋಗಿರುವುದು ಸಹಜವು. ಆದುದರಿಂದ ಪ್ರತಿಯೊಂದು ದೇವಲಯಾಂತರ್ಗತ ಸ್ಥಾವರ ಲಿಂಗವೂ ತ್ರಿಮೂರ್ತಿಗಳಿಗೆ ಸಂಕೇತ. ಅದಕ್ಕೆ ಅಪವಾದವಿಲ್ಲದೆ ಜನಿವಾರವಿರುತ್ತದೆ.

## ಸಾರ್ವದೇಶಿಕ ಲಿಂಗಗಳ ಅಳತೆಗಳು

ಗರ್ಭಗುಡಿಯ (ದೇವಾಲಯದ ಕೇಂದ್ರಸ್ಥಲದ, ಮಧ್ಯಶಾಲೆಯ) ಒಬ್ಬದಿಗೆ ಸಮವಾಗಿರುವುದು ಸಾರ್ವಜನಿಕ ಲಿಂಗವು. ಉತ್ತಮ-ಮಧ್ಯಮ-ಅಧಮ ಲಿಂಗಗಳಿಲ್ಲದೆ, ಇನ್ನಾರು ಮಾದರಿಯ ಲಿಂಗಗಳಿವೆ: ಗರ್ಭಗುಡಿಯ ಉದ್ದದ ಯಾ ಅಗಲದ ೩/೫, ೫/೯ ಯಾ ೧/೨ ಅನುಪಾತಗಳ ಅಳತೆಯ ಲಿಂಗಗಳು ಅವರ ಉಪಪ್ರಕಾರಗಳು. ಈ ಆರು ಲಿಂಗಭೇದಗಳೂ ಉತ್ತಮಾಧಮ ಮಧ್ಯಮಗಳೆಂದು ತ್ರಿವಿಧ.

ನಾಗರ ಮಾದರಿಯ ದೇಗುಲದ ಅಧಮಾಧಮ ಲಿಂಗವು ಆ ಮಾದರಿಯ ಚತುರ್ಭುಜ ಗರ್ಭಾಗಾರದಲ್ಲಿ ಒಬ್ಬದಿಯ ೫ರಷ್ಟಿರಬಹುದು. ಉತ್ತಮೋತ್ತಮ ಲಿಂಗವು ಗರ್ಭಗುಡಿಯ ಗೋಡೆಯ ಒಬ್ಬದಿಯ ೬ರಷ್ಟು ಎತ್ತರವಾಗಿರಬಹುದು. ಈ ಎರಡು ಅತಿಮಿತಿಗಳ ನಡುವೆ ಬಿನ್ನಭಿನ್ನ ಎತ್ತರದ ಸಪ್ತವಿಧ ಲಿಂಗಗಳಿವೆ : (೧) ಅಧಮ-ಮಧ್ಯಮ; (೨) ಅಧಮೋತ್ತಮ; (೩) ಮಧ್ಯಮಾಧಮ; (೪) ಮಧ್ಯಮೋತ್ತಮ; (೫) ಮಧ್ಯಮ-ಮಧ್ಯಮ; (೬) ಉತ್ತಮ-ಮಧ್ಯಮ ಮತ್ತು (೭) ಉತ್ತಮಾಧಮ—ಎಂದು. ಉತ್ತಮೋತ್ತಮ ಮತ್ತು ಅಧಮಾಧಮ ಲಿಂಗಗಳ ಉದ್ದಳತೆಗಳ ವ್ಯತ್ಯಾಸಗಳ ಏಳನೆಯ ಒಂದಂಶದಷ್ಟನ್ನು ಸೇರಿಸಿದರೆ ಈ ನಾಗರ ಲಿಂಗಗಳ ವಿವಿಧ ಬಗೆಗಳ ಅಳತೆ ಗೊತ್ತಾಗುತ್ತದೆ.

ದ್ರಾವಿಡ ದೇವಾಲಯಗಳಲ್ಲಿ ಪ್ರತಿಷ್ಠಾಪಿಸಿದ ಉತ್ತಮೋತ್ತಮ ವರ್ಗದ ಲಿಂಗವು ದೇವಾಲಯದ ಕೇಂದ್ರ ಸ್ಥಳದ ಒಬ್ಬದಿಯ ೧೩/೨೧ರಷ್ಟಾಗುತ್ತವೆ. ಅಧಮಾಧಮ ವರ್ಗದ ಲಿಂಗದ ಅಳತೆಯು ಆ ಕೇಂದ್ರದ ಸ್ಥಳದ ಒಬ್ಬದಿಯ ೧೦/೨೧ರಷ್ಟಾಗುತ್ತದೆ ಮತ್ತು ವ್ಯತ್ಯಾಸವು ೩/೨೧ ಯಾ ೧/೭. ಈ ವ್ಯತ್ಯಾಸವನ್ನು ಏಳು ಸಮ ಪಾಲಾಗಿ ವಿಭಜಿಸಿದರೆ ಮತ್ತು ಎರಡನೆಯದರ ೧, ೨ ಇತ್ಯಾದಿಗಳನ್ನು ಸೇರಿಸಿದರೆ ಈ ವರ್ಗದ ಲಿಂಗಗಳ ಅಳತೆ ಗೊತ್ತಾಗು

ತ್ತದೆ; ಈ ಅಧಮಾಧಮಲಿಂಗದ ೭ ಬಗೆಯ ಚಿಕ್ಕ ಮಾಧ್ಯಮಿಕ ಪರಿಮಾಣದ ಅಳತೆ ತಿಳಿದುಬರುತ್ತದೆ.

ವೇಸರ ದೇವಾಲಯಗಳ ಗರ್ಭಗೃಹದ ಉತ್ತಮೋತ್ತಮ ಲಿಂಗದ ಉದ್ದವು ೧೬/೨೫ (ಹಿಂದಿನಂತೆಯೇ ಸೆಂಟ್ರಲ್ ಶ್ರೈನಿನ ಬದಿಯ ೧೬/೨೫ನೆಯ ಭಾಗ). ಅಧಮಾಧಮದ ಉದ್ದವು ೧೩/೨೫ ಮತ್ತು ಉದ್ದಗಳ ವ್ಯತ್ಯಾಸವು ೭ ಸಮ ಭಾಗ ಮಾಡಿ ಅದಕ್ಕೆ ಈ ಚಿಕ್ಕ ಭಾಗಗಳ ಒಂದು, ಎರಡು ಇತ್ಯಾದಿ ಭಾಗಗಳನ್ನು ಸೇರಿಸಿದರೆ ಮಧ್ಯಮ ಮಾಪಿನ ಏಳು ಬಗೆಗಳನ್ನು ತಯಾರಿಸಬಹುದು.

### ಲಿಂಗ ಪ್ರಕಾರಗಳು

ಛತ್ರಾಕಾರ, ತ್ರಪುಷಾಕಾರ, ಕುಕ್ಕುಟಾಂಡಾಕಾರ, ಅರ್ಧ ಚಂದ್ರಾಕಾರ ಮತ್ತು ಬುದ್‌ಬುದಸದೃಶ ಎಂದು ಐದು ಮಾದರಿಗಳಿವೆ (1) the umbrella shaped. (2) cucumber like, (3) ovular (4) erescent shaped and (5) bubble shaped.

## ಬ್ರಹ್ಮಸೂತ್ರಗಳು

ಲಿಂಗವು ತ್ರಿಮೂರ್ತಿಗಳ ಸಂಕೇತ. ಅದರ ತುದಿ ರುದ್ರಭಾಗವು, ಮಧ್ಯವು ವಿಷ್ಣುಭಾಗವು, ಬುಡವು ಬ್ರಹ್ಮಭಾಗವು. ರುದ್ರಭಾಗವು ಪೂಜಾ ಭಾಗ. ಅದರ ಮೇಲ್ಮೈಯ ಮೇಲೆ ಎರಡು ಉದ್ದನೆಯ ರೇಖೆಗಳನ್ನು ಕೊರೆಯಲಾಗಿರುತ್ತದೆ. ಇವೇ ಲಕ್ಷಣೋದ್ಧಾರಣ ಯಾ ಮಣಿರೇಖೆ ಅಥವಾ ಪಾರ್ಶ್ವಸೂತ್ರ. ಪೂಜಾಭಾಗದ ಉದ್ದವನ್ನು ವಿಭಜಿಸಿ ಮೂರು ಸಮಪಾಲು ಮಾಡಿ ಅವುಗಳಲ್ಲಿ ಎರಡನ್ನು ಕೆಳಗಡೆ ಎಂಟು ಸಮಪಾಲು ಮಾಡಿದರೆ— ಮೇಲೆ ಹೇಳಿದ ಎರಡು ಸಮಾಂತರ ರೇಖೆಗಳಲ್ಲಿ ಒಂದು ಈ ಕೆಳ ಚಿಕ್ಕ ವಿಭಾಗವಾಗುತ್ತದೆ. ಈ ಗೆರೆಗಳ ದಪ್ಪ ಮತ್ತು ಆಳಗಳು ಈ ವಿಭಜನೆಯ ೧/೯ರಷ್ಟಿರುತ್ತವೆ. ಎರಡು ರೇಖೆಗಳನ್ನು ಉದ್ದದ (ಎತ್ತರದ) ಎರಡು ಸಮಾಂತರ ಗೆರೆಗಳಿಂದ ಕೆಳಗಿಳಿಯುತ್ತ ಬಂದರೆ ಪೂಜಾಭಾಗದ ಅತಿ ಚಿಕ್ಕ ಎರಡು ವಿಭಾಗಗಳವರೆಗೆ ಬಂದು ನಿಲ್ಲಬೇಕು. ಪಾರ್ಶ್ವಸೂತ್ರಗಳನ್ನು ಲಿಂಗದ ಅಷ್ಟಮಾದ ಸ್ತರದ ಮೇಲೆ ಗುರುತಿಸಬೇಕು—ಅವು ಒಂದುಗಡೆ

ಕೂಡಿರುತ್ತವೆ. ನಡುವಿನ ಕೇಂದ್ರೀಯ ಸಮಾಂತರ ರೇಖೆಗಳೆರಡೂ ತುದಿಯಲ್ಲಿ ಕೂಡಿರುತ್ತವೆ; ಅಲ್ಲಿ ನಾವು ಒಂದು (curve) ಡೊಂಕನ್ನು ಕಾಣುತ್ತೇವೆ—ಈ ಡೊಂಕು ಲಿಂಗದ ಶಿರೋಭಾಗವನ್ನು ಹೋಲುತ್ತದೆ.

## ಮಾನುಷ ಲಿಂಗಗಳು

೧. ಅಷ್ಟೋತ್ತರ ಶತಲಿಂಗ—೧೦೮ ಚಿಕ್ಕ ಲಿಂಗಗಳು; ಇವು ಪೂಜಾಭಾಗದಲ್ಲಿ ಡೊಂಕಾಗಿರುತ್ತವೆ. ಸುರಾಢ್ಯ ಲಿಂಗದ ಪೂಜಾಭಾಗವಿದು. ಮುಖ್ಯ ಲಿಂಗಕ್ಕೆ ಈ ೧೦೮ ಲಿಂಗಗಳು ತಾಗಿಕೊಂಡಿರುತ್ತವೆ.

೨. ಸಹಸ್ರಲಿಂಗ—೧೦೦೦ ಆಢ್ಯಲಿಂಗಕ್ಕೆ ಮೇಲೆ ಹೇಳಿದಂತೆ ಅಂಟಿಕೊಂಡಿರುತ್ತವೆ. ಆಗ ಇದು ಸಹಸ್ರಲಿಂಗ ಎನ್ನಿಸುತ್ತದೆ.

೩. ಧಾರಾಲಿಂಗ—ಸಮಲಿಂಗದ ಮೇಲೆ ಕೊರೆದ ಊರ್ಧ್ವಮುಖವಾದ ೫ ರಿಂದ ೬೪ ಲಿಂಗಗಳುಳ್ಳಂಥದು.

೪. ಶೈವೇಷ್ಟಲಿಂಗ.

೫. ಮುಖಲಿಂಗ—ಲಿಂಗದ ಪೂಜಾಭಾಗದ ಮೇಲೆ ಕೆತ್ತಿದ ಒಂದು ಅಥವಾ ಹಲವು ಮಾನುಷ ಮುಖಗಳಿರುವ ಲಿಂಗವು ಮುಖಲಿಂಗವು.

೬. ಸಾರ್ವದೇಶಿಕ ಲಿಂಗ.

೭. ಸರ್ವತೋಭದ್ರಲಿಂಗ ಅಥವಾ ಸರ್ವಸಮ ಲಿಂಗ.

ಸರ್ವತೋಭದ್ರಲಿಂಗವು ತ್ರಿವಿಧ: ಆಢ್ಯಲಿಂಗ, ವರ್ಧಮಾನ ಯಾ ಸುರಾಢ್ಯಲಿಂಗ ಮತ್ತು ಶೈವಾಧಿಕಲಿಂಗ—ಎಂದು. ಪ್ರಥಮ ಏಳು ಲಿಂಗಗಳೆಲ್ಲವುಗಳ ಅಳತೆಯೂ ಗರ್ಭಗೃಹದ ಅಳತೆಯ ೩/೫, ೫/೯ ಯಾ ೧/೨ ದಷ್ಟಿರುತ್ತದೆ; ಸರ್ವಸಮಲಿಂಗವು (ಸರ್ವತೋಭದ್ರಲಿಂಗ)ಗಳಲ್ಲಿ ತ್ರಿಭಾಗವುಳ್ಳ ಆಢ್ಯಲಿಂಗವು; ಲಿಂಗದ ಇಡಿ ಅಳತೆಯ ೮||, ೮ ಯಾ ೭||ಯಷ್ಟಿರುತ್ತದೆ; ಶೈವಾಧಿಕ ಲಿಂಗವು ಯಾ ಸುರಾಢ್ಯಲಿಂಗವು ತನ್ನ ಭಾಗತ್ರಯದಲ್ಲಿ ೭, ೭, ೮; ೫, ೫, ೬; ೪, ೪, ೫; ಅಥವಾ ೩, ೩, ೪ ರಷ್ಟಿರುತ್ತವೆ. ವರ್ಧಮಾನ ಅಥವಾ ಸುರಾಢ್ಯಲಿಂಗವೂ ಸ್ವಸ್ತಿಕ ಯಾ ಅನಾಢ್ಯಲಿಂಗವೂ ತ್ರೈರಾಶಿಕ ಯಾ ತ್ರೈಭಾಗಿಕ ಲಿಂಗವೂ ಸೇರಿ (ಸಾರ್ವದೇಶಿಕದಿಂದ ತ್ರೈಭಾಗಿಕದ ವರೆಗೆ) ೯ ಬಗೆಯವುಗಳಾಗುತ್ತದೆ. ಇವುಗಳ ಎತ್ತರ ಯಾ ಉದ್ದವು ಪರಿಧಿಗನುಗುಣವಾಗಿ ಬ್ರಹ್ಮಭಾಗ ೮, ವಿಷ್ಣುಭಾಗ ೭ ಮತ್ತು ರುದ್ರಭಾಗ ೬ ಆಗಿರುತ್ತವೆ.

**ರುದ್ರನ ಸಂಹಾರ ಮೂರ್ತಿಗಳು :**

ಕಾಮಾಂತಕಮೂರ್ತಿ, ಗಜಾಸುರಸಂಹಾರಮೂರ್ತಿ, ಕಾಲಾರಿಮೂರ್ತಿ, ತ್ರಿಪುರಾಂತಕಮೂರ್ತಿ, ಶರಭೇಶಮೂರ್ತಿ, ಬ್ರಹ್ಮಶಿರಶ್ಛೇದಕಮೂರ್ತಿ, ಭೈರವ ಮೂರ್ತಿ, ವೀರಭದ್ರಮೂರ್ತಿ, ಜಲಂಧರಹರಮೂರ್ತಿ, ಮಲ್ಲಾರಿಶಿವಮೂರ್ತಿ, ಅಂಧಕಾಸುರವಧಮೂರ್ತಿ—ಎಂದು ೧೧.

## ಭೈರವನ ಸಾಮಾನ್ಯ ಲಕ್ಷಣಗಳು :

(ವಿಷ್ಣುಧರ್ಮೋತ್ತರಾನುಸಾರ)

ಲಂಬೋದರ, ಉರುಟಾದ ಹಳದಿಗಂಗಳು, ಎಡ ಬಲಬದಿಗಳಲ್ಲಿ ಕೋರೆದಾಡೆಗಳು, ಅಗಲವಾದ ಮೂಗುಹೊಳ್ಳೆಗಳು, ಸರ್ಪಭೂಷಣ, ಗಜ ಚರ್ಮಾಂಬರ, ಆಯುಧ ಹಿಡಿದ ಅನೇಕ ಕೈಗಳು, ಪಾರ್ವತಿಯನ್ನು ಹಾವು ಹಿಡಿದುಕೊಂಡು ಹೆದರಿಸುವ ಭಂಗಿಯಲ್ಲಿ ಇರುವುದು.

೧. ವಟುಕಭೈರವ—ಅಷ್ಟಭುಜ, ಖಟ್ವಾಂಗಧಾರಣ, ಪಾಶ, ಶೂಲ, ಡಮರು, ಕಪಾಲ, ಸರ್ಪಗಳನ್ನೂ ಮಾಂಸದ ಚೂರನ್ನೂ ಹಿಡಿದು ಅಭಯಹಸ್ತನಾಗಿರುವವನು. ಬದಿಯಲ್ಲಿ ನಾಯಿ; ಅಥವಾ ರಕ್ತವರ್ಣಜಟಿ, ನೇತ್ರತ್ರಯ (ರೂಪಮಂಡನಾನುಸಾರ), ಶ್ವಾವಾಹನ, ಸಂಪೂರ್ಣ ದಿಗಂಬರ ಹಾಗೂ ಭೂತಗಣಪರಿವಾರ.

೨. ಸ್ವರ್ಣಾಕರ್ಷಣ ಭೈರವ—ಚತುರ್ಭುಜ, ನೇತ್ರತ್ರಯ, ಸರ್ವಾಭರಣ ಭೂಷಣ, ಸ್ವರ್ಣ-ನವರತ್ನಪಾತ್ರೆ ಹಿಡಿದ ಕೈ; ಚಾಮರ, ತೋಮರ, ಮಹಾಶೂಲಗಳು ಭುಜದ ಮೇಲಿರಬೇಕು.

೩. ಎಂಟು ವರ್ಗಗಳ ಎಂಟು ಬಗೆಯ ಭೈರವರು ಒಟ್ಟು ೬೪. ಆ ಎಂಟು ವರ್ಗಗಳು—ಅಸಿತಾಂಗ, ರುರು, ಚಂಡ, ಕ್ರೋಧ, ಉನ್ಮತ್ತ, ಕಪಾಲ, ಭೀಷಣ ಮತ್ತು ಸಂಹಾರ ಭೈರವರುಗಳು.

## ವೀರಭದ್ರ

ಸಹಸ್ರಬಾಹು, ಸಹಸ್ರಾಕ್ಷ, ಬಲಿಷ್ಠ ತೋಳುಗಳು, ಬದಿಯ ಕೋರೆ ದಾಡೆಗಳು ಮತ್ತು ಶಂಖ-ಚಕ್ರ-ಧನುರ್ಧಾರಣ. ಹತ್ತು ಕೈಗಳಲ್ಲಿ ಬಾಣ, ಪರಶು, ಖಡ್ಗ, ಧನುಸ್, ಮುಸಲ, ಪಾಶ, ವೃತ್ತಾಕಾರದ ಗುರಾಣಿ, ಖಡ್ಗ— ಇವುಗಳನ್ನು ಹಿಡಿದಿರುತ್ತಾನೆ. ವೀರಭದ್ರನಿಗೆ ಜಟಾಮುಕುಟ; ಅವನು ದಕ್ಷ ಪ್ರಜಾಪತಿಯ ತಲೆಯೇರಿ ನಿಂತಿರುತ್ತಾನೆ.

## ಇತರ ರುದ್ರಮೂರ್ತಿಗಳು

ಗಂಗಾಧರಮೂರ್ತಿ, ಅರ್ಧನಾರೀಶ್ವರಮೂರ್ತಿ, ಹರ್ಯರ್ಧಮೂರ್ತಿ ಯಾ ಬಾದಾಮಿಯ ಹರಿಹರಮೂರ್ತಿ, ಪುಣೆಯ ಹರಿಹರಮೂರ್ತಿ, ಕಲ್ಯಾಣಸುಂದರ ಮೂರ್ತಿ, ವೃಷಭಾರೂಢಮೂರ್ತಿ (ಕಂಚಿನದು) ಮತ್ತು ವಿಷಾಪಹಾರಮೂರ್ತಿ.

### ರುದ್ರನ ನೃತ್ತಮೂರ್ತಿಗಳು

ನಟರಾಜ, ನೃತ್ತಮೂರ್ತಿ, ಕಟಿಸಮಮೂರ್ತಿ, ಲಲಿತಮೂರ್ತಿ, ಲಲಾಟ ತಿಲಕಮೂರ್ತಿ, ಚತುರಮೂರ್ತಿ, ತಲಸಂಸ್ಫೋಟಮೂರ್ತಿ.

### ಪ್ರಸಿದ್ಧ ತ್ರಿವಿಧ ದಕ್ಷಿಣಾಮೂರ್ತಿ

(೧) ಜ್ಞಾನದಕ್ಷಿಣಾಮೂರ್ತಿ, (೨) ಯೋಗದಕ್ಷಿಣಾಮೂರ್ತಿ ಮತ್ತು (೩) ವೀಣಾಧರದಕ್ಷಿಣಾಮೂರ್ತಿ, (೪)ಕಂಕಾಲಮೂರ್ತಿ,(೫)ಭಿಕ್ಷಾಟನಮೂರ್ತಿ ಗಳೂ ಸೇರಿದರೆ ಒಟ್ಟು ಐದು ದಕ್ಷಿಣಾಮೂರ್ತಿಗಳಾಗುತ್ತವೆ.

## ರುದ್ರನ ಅನುಗ್ರಹಮೂರ್ತಿ

೧. ಚಂಡೇಶ್ವರಾನುಗ್ರಹಮೂರ್ತಿ.

೨. ವಿಷ್ಣ್ವನುಗ್ರಹಮೂರ್ತಿ ಯಾ ಚಕ್ರದಾನಮೂರ್ತಿ.

೩. ನಂದೀಶಾನುಗ್ರಹಮೂರ್ತಿ.

೪. ವಿಘ್ನೇಶ್ವರಾನುಗ್ರಹಮೂರ್ತಿ.

೫. ಕಿರಾತಾರ್ಜುನಮೂರ್ತಿ ಯಾ ಅರ್ಜುನಾನುಗ್ರಹಮೂರ್ತಿ.

೬. ರಾವಣಾನುಗ್ರಹಮೂರ್ತಿ.

## ವಿಶಿಷ್ಟ ಭೈರವಗಣಗಳು

ಒಂದನೆಯ ಗಣ—ಕಾಪಾಲ, ಶಶಿಭೂಷಣ, ಹಸ್ತಿಚರ್ಮಾಂಬರ, ಯೋಗೀಶ, ಬ್ರಹ್ಮರಾಕ್ಷಸ, ಸರ್ವಜ್ಞ, ಸರ್ವದೇವೇಶ ಎಂದು ಎಂಟು ಪೂರ್ವೋಕ್ತಾಯುಧಪಾಣಿಗಳು. ಇವರೆಲ್ಲಾ ಕಪಾಲಭೈರವಗಣದವರು.

ಎರಡನೆಯ ಗಣ—ಭೀಷಣ, ಭಯಹರ, ಸರ್ವಜ್ಞ, ಕಾಲಾಗ್ನಿ, ಮಹಾರೌದ್ರ, ದಕ್ಷಿಣ, ಮುಖರ, ಅಸ್ಥಿರ. ಇವರೆಲ್ಲಾ ಭೀಷ್ಮಭೈರವಗಣದವರು, ಪೂರ್ವೋಕ್ತಾಯುಧಪಾಣಿಗಳು.

ಮೂರನೆಯಗಣ— ಅತಿರಿಕ್ತಾಂಗ, ಕಾಲಾಗ್ನಿ, ಪ್ರಿಯಂಕರ, ಘೋರನಾದ, ವಿಶಾಲಾಕ್ಷ, ಯೋಗೀಶ, ದಕ್ಷಸಮುಸ್ಥಿತ—ಇವರೆಲ್ಲಾ ಸಂಹಾರಭೈರವಗಣದವರು, ಪೂರ್ವೋಕ್ತಾಯುಧಪಾಣಿಗಳು.

ನಮೋಸ್ತ್ವನಂತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷ ಶಿರೋರುಬಾಹವೇ ।
ಸಹಸ್ರನಾಮ್ನೇ ಪುರುಷಾಯ ಶಾಶ್ವತೇ
ಸಹಸ್ರಕೋಟಿಯುಗಧಾರಿಣೇ ನಮಃ ॥

# ಉಪಸಂಹಾರ

ಗ್ರೀಕ್ ಕಲೆ ಮತ್ತು ಭಾರತೀಯ ಕಲೆಗಳ ತುಲನಾತ್ಮಕ ಅಭ್ಯಾಸ ಮಾಡಿದವರು ಗ್ರೀಕರಿಗೆ ದೇಹಸೌಷ್ಠವ (ಉಭಯ ಪಾರ್ಶ್ವಸಮಾನತೆ Harmony) ಮುಖ್ಯವೆಂದು ಹೇಳುತ್ತಾರೆ; ಭಾರತೀಯರಿಗೆ ದೇಹವು ತಿರಸ್ಕಾರ್ಯವಲ್ಲದಿದ್ದರೂ ಆ ಅಂಗರಚನೆ ಆಯಾ ವ್ಯಕ್ತಿತತ್ತ್ವದ ಆತ್ಮಭಾವ (Mood)ವನ್ನು ಮೂಡಿಸುವಂತಿರುವುದೇ ಮುಖ್ಯವೆನ್ನುತ್ತಾರೆ. ಈ ಆತ್ಮಭಾವವು ಸಾಂದರ್ಭಿಕ. ಕಾಳಿದಾಸನ—

"ತ್ರೈಗುಣ್ಯೋದ್ಭವಮತ್ರಲೋಕಚರಿತಂ ನಾನಾರಸಂದೃಶ್ಯತೇ"

ಎಂಬ ಸಾರ್ವಕಾಲಿಕ ಕಲಾನಿಯಮವನ್ನು ನೆನೆಯಬೇಕು. ವ್ಯಕ್ತಿಗಳಲ್ಲಿ—ಅವರು ಶಾಸ್ತ್ರೀಯಾರ್ಥದಲ್ಲಿ ವ್ಯಕ್ತಿಗಳೇ ಆದರೆ—ಸತ್ತ್ವಪ್ರಾಧಾನ್ಯ, ರಜಃಪ್ರಾಧಾನ್ಯ ಅಥವಾ ತಮಃಪ್ರಾಧಾನ್ಯ ಎಂಬುದು ಹುಟ್ಟಿನಿಂದ ಸಾವಿನವರೆಗೆ ಪ್ರಚ್ಛನ್ನವಾಗಿ ಸ್ಥಿರನಿಯಾಮಕವಾಗಿರುತ್ತದೆ; ಚಾರಿತ್ರನಿರೂಪಕವಾಗಿರುತ್ತದೆ. ಅಧಮ ಮಧ್ಯಮ ಮತ್ತು ಉತ್ತಮವಾಗುತ್ತಾ ಹೋಗುವ ಜೀವನವನ್ನು ನಮ್ಮ ಸಂಸ್ಕೃತಿಯು ಒತ್ತಿ ಹೇಳುತ್ತದೆ. ಜನ್ಮಾಂತರಗಳ ಕಾಲಾವಧಿ ಉಕ್ತ ಪರಿವರ್ತನೆಗೆ ಅವಕಾಶ ಕೊಡುತ್ತದೆ. ಆದುದರಿಂದ ಆಂತ್ಯತಿಕ ದುರಂತತೆ (ಆವಿದ್ಧತೆ) ಇಲ್ಲಿ ಯಾವ ವ್ಯಕ್ತಿಗೂ ಇಲ್ಲ. ದೇವ-ಮಾನವ-ದಾನವ ಮೂರ್ತಿಗಳೆಲ್ಲವುಗಳಿಗೂ ಇದು ಅನ್ವಯಿಸುತ್ತದೆ. ಸಾಲೋಕ್ಯ ಪಾತ್ರತೆಯ ಪೂರ್ವಾವಸ್ಥೆಯು ತ್ರೈಗುಣ್ಯಕ್ರೀಡಾವಧಿಯು. ಕಲೆಯಲ್ಲಿ ಸರ್ವಕಾರಣನಾದ ಈಶ್ವರನ ಪಾತ್ರವೇನು ? ಭಾಸನು ಹೇಳುತ್ತಾನೆ :

"ನಾರಾಯಣಸ್ತ್ರಿಭುವನೈಕ ಪರಾಯಣೋ ವಃ
ಪಾಯಾದುಪಾಯಗತಯುಕ್ತಿಕರಃ ಸುರಾಣಾಂ
ಲೋಕತ್ರಯಾವಿರತ ನಾಟಕತಂತ್ರವಸ್ತು
ಪ್ರಸ್ತಾವನ ಪ್ರತಿಸಮಾಪನ ಸೂತ್ರಧಾರಃ"

ನಾರಾಯಣ=ಪರಬ್ರಹ್ಮ=ತ್ರಿಗುಣಾತೀತನು. ತನ್ನ ಪುರುಷೋತ್ತಮತ್ವದಲ್ಲಿ ಸೂತ್ರಧಾರ.

**ಮೂಲ ಮತ್ತು ಜನ್ಯ ಕಲಾಭಾವಗಳು** (ಅಗ್ನಿಪುರಾಣದಂತೆ)

೧. ಶೃಂಗಾರದಿಂದ ಹಾಸ್ಯರಸ.
೨. ರೌದ್ರದಿಂದ ಕರುಣರಸ.
೩. ವೀರದಿಂದ ಅದ್ಭುತರಸ.
೪. ಬೀಭತ್ಸದಿಂದ ಭಯಾನಕರಸ.

ಇವುಗಳಿಗೆ ರಜಸ್ತಮಸ್ಸುಗಳು ಪ್ರೇರಕಗಳು. ಶಮಸ್ಥಾಯಿಯಾದ ಶಾಂತ ರಸಕ್ಕೆ ಸತ್ವಗುಣವು ಪ್ರೇರಕ.

ವಿಗ್ರಹಗಳ ಮುಖಗಳಲ್ಲಿ ಈ ರಸಗಳ ಸ್ಥಾಯಿಗಳಾದ ರತಿ, ಹಾಸ್ಯ, ಭಯ, ಜುಗುಪ್ಸೆ, ವಿಸ್ಮಯ, ಶೋಕ, ಕ್ರೋಧ, ಉತ್ಸಾಹ, ಶಮಗಳಲ್ಲಿ ಯಾವುದಾದರೊಂದನ್ನು ಮೂಡಿಸುವವನೇ ಚತುರ ಶಿಲ್ಪಿ. ಅವನಿಗೆ

"ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ
ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ"

ಎಂಬುದು ಗೊತ್ತಿರುತ್ತದೆ. ವಿಗ್ರಹಗಳ ಇತರ ಅಂಗಗಳ ವಿನ್ಯಾಸಗಳು ಈ ಅಂತ್ಯಸಿದ್ಧಿಗೆ ಅಣಿಯಾಗುವಂತೆ ರಚಿತವಾಗಿರುತ್ತವೆ. ಅಂಗೋಪಾಂಗಗಳ ವಿವಿಧ ವಿನ್ಯಾಸಗಳೆಲ್ಲ ಮುಖ-ನಯನಗಳಲ್ಲಿ ಮೂಡಬೇಕಾದ (Aesthetic Mood) ಸ್ಥಾಯಿಗಳಿಗೆ ಅನುಕೂಲಕರವಾಗಿರಬೇಕು. ಆಗ ಮಾತ್ರ ಉದ್ದೇಶವು ಸಫಲವಾಗುತ್ತದೆ.

ಸ್ಮರನಿಗೆ ಸ್ಮರತ್ವವೇ ಸೌಂದರ್ಯ; ಸ್ಮರಹರನಿಗೆ ಸ್ಮರಹರತ್ವವೇ ಸೌಂದರ್ಯ—ಎಂಬುದನ್ನು ಭಾರತೀಯ ಶಿಲ್ಪಿ ಬಲ್ಲನು. ಹಾಗೇ ವಸಿಷ್ಠನಿಗೆ ವಸಿಷ್ಠತ್ವವೇ ಸೌಂದರ್ಯ ಮತ್ತು ಅವನ ಕಾಮಧೇನುವಿಗೆ ಕಾಮಧೇನುತ್ವವೇ ಸೌಂದರ್ಯ. ಕಲೆಯಲ್ಲಿ ಸರ್ವವೂ ಸುಂದರ—ಅದದು ಅದದರಂತಿದ್ದರೇ ಸುಂದರ. ಹೆಣಕ್ಕೆ ಸೌಂದರ್ಯವಿರುವುದು ಹೆಣದಂತಿದ್ದರೇ! ಇದ್ದಲಿಗೆ ಸೌಂದರ್ಯವಿರುವುದು ಇದ್ದಲಾಗಿದ್ದರೇನೇ! ರಸಸೃಷ್ಟಿಯ ರಹಸ್ಯ ಇದು.

## ಅಂತೆ ಇರುವುದು

ಶಿಲ್ಪದಲ್ಲಿ 'ಅಂತೆ ಇರುವುದು' ಎಂದರೆ ಉಪಮೆ, ದೃಷ್ಟಾಂತ, ನಿದರ್ಶನ. ಈ ಉಪಮೆಯು Explicit Metaphor ವಿವೃತವಾದ ರೂಪಕ;

ಸಂವೃತ ರೂಪಕಾವಯವಗಳು ಉಪಮೆ. ಇಂಥ ಸಂಚಾರ-ವಿಹಾರ ಕ್ರಿಯೆಗಳಲ್ಲಿ ನಂಬಿಗೆಯನ್ನು ಕೆಡಿಸದಷ್ಟು ಅತಿಶಯ (Hyperbole) ಇರುತ್ತದೆ. ಇದೇ ಜೀವನದ ನೈಜತೆಯನ್ನು ಕಲಾನೈಜತೆಯಿಂದ ಪ್ರತ್ಯೇಕಿಸುವ ಕಾರಕವು. ತತ್ತುಲ್ಯತ್ವೇ ಸತಿ ತದ್ಭಿನ್ನತ್ವಂ—ಎಂಬುದು ಸೂತ್ರವು.

ಜೀವನದ ಎಲ್ಲ ಮೂಲ, ಸ್ಥೂಲ ಜ್ಞಾನಗಳಿಗೂ ಹೋಲಿಕೆಯು ಮೊದಲನೆಯ ಆಧಾರವು. ಆದರದು ಆತ್ಯಂತಿಕ ನಿಕಷವಲ್ಲ. ಆತ್ಯಂತಿಕವಾದರೆ ಗುರುತಿಸಲಾರದಷ್ಟು ಅದು ಏಕತ್ವಜನಕವಾಗುತ್ತದೆ. ಅತಿಶಯಕ್ಕೂ ಇದೇ ಮಾತು ಅನ್ವಯಿಸುತ್ತದೆ. ಈ ಹಾಳತವನ್ನು ಬಲ್ಲವನೇ ಪ್ರತಿಭಾವಂತ ಶಿಲ್ಪಿ.

ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ
ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ ||

ಎಂಬ ಎರಡು ಉದಾಹರಣೆಗಳು ಸಾಕು. ರಾಮನು ಗಗನೋಪಮನು, ರಾವಣನು ಸಾಗರೋಪಮನು.

ಹಾಗೇ

‘‘ತಾಂಬೂಲರಾಗವಲಯಂ ಸ್ಫುರದ್ದಶನ ದೀಧಿತಿ
ನೀಲೋತ್ಪಲಾಭನಯನಂ ತವೇವವದನಂತವ’’

ನಿನ್ನ ಮುಖವು (ಬಾಯಿಯು) ನಿನ್ನ ಮುಖದಂತೆಯೇ ಇದೆ=ಎಂಬಲ್ಲಿ ಬಿಂಬ-ಪ್ರತಿಬಿಂಬ ಭಾವದ ಮೂಲಕ ಒಬ್ಬಳ ಮುಖವನ್ನು ಕನ್ನಡಿಯಲ್ಲಿ ಪ್ರತಿಬಿಂಬಿಸಿ ಹೋಲಿಸಿದಂತೆ ಹೇಳಲಾಗಿದೆ. ಇಲ್ಲಿ ಅನನ್ಯತೆಯೇ ಅತಿಶಯ.

ಜಗತ್ತು ದೇವರಂತೆ ಇದೆ; ದೇವರೇ ಆಗಿಲ್ಲ. ‘‘ಸರ್ವಂ ಖಲ್ವಿದಂ ಬ್ರಹ್ಮ’’ ಎಂದ ಬಳಿಕ ‘‘ತಜ್ಜಲಾನ್’’ ಎಂದು ಜಗತ್ತನ್ನು ಬ್ರಹ್ಮಜಾತ ಎಂದು ಹೇಳಿದ್ದು ಜನರು ಮೋಸ ಹೋಗಬಾರದೆಂದು. ಚಿತ್ರಗತ ಪ್ರಿಯನ ಕೊರಳಿಗೆ ಜೀವಿಸಿರುವ ಸುಂದರಿ ಹಾರ ಹಾಕಹೋಗುವ ಸಿರಾಕಾಂತ್ಯ ಉಂಟಾಗಬಾರದೆಂದು.

ಹಾಗೇ

‘‘ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ, ಕಣ್ಣಿಗೂ ಕಣ್ಣಾಗಿ ಒಳಗಿಹುದು’’ ಎಂದು ಅಂಬಿಕಾತನಯದತ್ತರು ಹೇಳಿದ್ದಿಲ್ಲಿ ಸ್ಮರಣೀಯ. ಮೋಸಗಾರಿಕೆ ಸಹಾ ಒಂದು ‘‘ಕಲೆ’’ಯಾದುದರಿಂದ ದೇಹ ಸೌಂದರ್ಯಕ್ಕೆ ಮರುಳಾಗಿಯೂ ಆತ್ಮಸೌಂದರ್ಯವನ್ನು ಮರೆಯಬಾರದು; ಒಂದು ಅನಿತ್ಯ, ಇನ್ನೊಂದು

೯೭

ನಿತ್ಯವು. ಆತ್ಮಸ್ವರೂಪಸೂಚಕವಾದ ಕಲೆಯು ತ್ರಿಕರಣಶುದ್ಧತೆಯಿಂದ ಮಾತ್ರ ಸಾಧ್ಯ. ಆತ್ಮಭಾವ ವ್ಯಂಜಕವಲ್ಲದ ಮೂರ್ತಿರಚನೆ ಅಸಫಲ. ಆತ್ಮವೆಂದರಿಲ್ಲಿ ಅಂತರ್ಗತವಾದ ಚಿರಸ್ಥಾಯಿಯಾದ ವ್ಯಕ್ತಿತ್ವ (Personality)ದ ಒಂದು ಸ್ಥಿರ ಮನೋಭಾವ.

ಕಲಾಸೌಂದರ್ಯಕ್ಕೆ

ಶಿಲ್ಪಕಾಯ, ನಾದಕಾಯ, ಶಬ್ದಾರ್ಥಕಾಯ, ವರ್ಣಕಾಯ, ರೇಖಾ ಕಾಯ ಮತ್ತು ಸಂಜ್ಞಾ (ಸಂಕೇತ) ಕಾಯಗಳು ಅಭಿವ್ಯಕ್ತಿಸಾಧನಗಳು. ''ಕಲಾ ಸಂಕಲನ ಪ್ರಜ್ಞಾ ವಿದ್ಯಾಶಿಲ್ಪಾದಿ ಕರ್ಮಸು''. ''ಸಂಕಲನಂ ಸೃಷ್ಟಿಃ, ವ್ಯವಕಲನಂ ವಿನಷ್ಟಿಃ'' ಇತಿಭಾಮಹಃ ||

''ನಮಃಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ''

|| ಇತ್ಯೋಂ ||

ಶಿರಸಿ, ಉ. ಕ.
೧-೩-೧೯೮೮


— ಬಿ. ಎಚ್. ಶ್ರೀ.


## ಪೀಠ ಪ್ರಕಾರಗಳು

ತ್ರೈಕೋಣಿಕ ಪೀಠ →



ತ್ರಿಪಾದ ಚಾಂದ್ರಿಕ ಪೀಠ →





↑ ವರ್ತಮಾನ - ಮಲಬಾರಿನಲ್ಲಿರುವ ಕೂರ್ಮಾಕೃತಿಯ ಪೀಠದ ಪಾರ್ಶ್ವ ದೃಶ್ಯ.




↑ ಬಂಗಾಳದಲ್ಲಿರುವ ಮಕರಾಕೃತಿಯ ಪೀಠ



↑ ಮಲಬಾರಿನ ಕೂರ್ಮಾಕೃತಿಯ ಆಸನದ (ಪೀಠದ) ತುದಿ ನೋಟ.

## ಹಸ್ತ ಮುದ್ರೆಗಳು


ನಿಂತಿರುವ ಅಥವಾ ಮಲಗಿರುವ ವಿಷ್ಣು ಮೂರ್ತಿಗಳ ಶ್ರೀ ದೇವತೆಗಳಿಗೂ ಸಾಮಾನ್ಯವಾದ ಕಟಕ ಹಸ್ತ ಎಂಬ ಹಸ್ತ ಮುದ್ರೆ.
ವ್ಯಾಖ್ಯಾನ, ಸಂದರ್ಶನ ಅಥವಾ ಚಿಕ್ ಎಂಬ ಹಸ್ತ ಮುದ್ರೆ.
ತರ್ಜನೀ ಹಸ್ತವೆಂಬ ಹಸ್ತ ಮುದ್ರೆ.
ವಿಸ್ಮಯ ಹಸ್ತವೆಂಬ ಹಸ್ತ ಮುದ್ರೆ.
ಸೂಚೀಹಸ್ತವೆಂಬ ಹಸ್ತ ಮುದ್ರೆ.
ಯೋಗ ಮುದ್ರಾಸನ ಎಂಬ ಯೋಗಾಸನದಲ್ಲಿ ಕುಳಿತ ಮೂರ್ತಿಯ ಹಸ್ತ ಮುದ್ರೆ.
ಜ್ಞಾನ ಮುದ್ರೆ ಎಂಬ ಹಸ್ತ ಮುದ್ರೆ
(ಇದೊಂದು ವಿಶಿಷ್ಟ ಯೋಗಾಸನದಲ್ಲಿಯ ಮೂರ್ತಿಗೆ ವಿಶೇಷ)


# ಪೀಠಪ್ರಕಾರಗಳು




ಎಲ್ಲೋರಾದ ಪದ್ಮಾಕೃತಿಯ ಆಸನ (ಪೀಠ)



ಯಾವಾಗಲೂ ವರ್ತುಲವಾಗಿಯೋ ಅಂಡಾಕೃತಿಯುಳ್ಳದ್ದಾಗಿಯೋ ಇರುವ ಸಾಮಾನ್ಯ ಪದ್ಮಾಸನ (ಪೀಠ)



ಎಲ್ಲೋರಾದ ಒಂದು ಬಗೆಯ ಕೂರ್ಮಾಸನ (ಕೂರ್ಮಪೀಠ)



ಪೆಟ್ಟಿಗೆಯ ಆಕೃತಿಯ ಪೀಠ

## ವಸ್ತ್ರಾದಿ ಪ್ರಸಾಧನಗಳು



↑ಕೃಷ್ಣಾಜಿನಾಚ್ಛಾದನವೆಂಬ ಹೊದಿಕೆ

## ಅಲಂಕಾರಗಳು



↑ಕಪಾಲ ವೆಂಬ
ಶಿವಹಸ್ತಾಲಂಕಾರ
(ಶಿವಹಸ್ತಾಲಂಕಾರ)



ಕಿರೀಟ ಮುಕುಟಗಳು



↑ಪದ್ಮಕುಸುಮ



ಬ್ರಹ್ಮನ ವಿಶಿಷ್ಟ↑
ಜಟಾಮುಕುಟ
(ಶಿರಸ್ತ್ರಾಣ)


ವಕುಳ ಶಿರಶ್ಚಕ್ರವೆಂಬ
ಶಿರಸ್ತ್ರಾಣ
ಕಮಲಾಕೃತಿಯ
ಶಿರಶ್ಚಕ್ರ
ಜಟಾವಲಯವೆಂಬ
ಕೇಶಬಂಧ–೧
ಜಟಾಭಾರವೆಂಬ
ಕೇಶಬಂಧ–೨
ಜಟಾಭಾರವೆಂಬ ಕೇಶಬಂಧ–೩




1

6


## ಆಭರಣ ಅಲಂಕರಣ


ರುದ್ರನ ವಿಶಿಷ್ಟ ಜಟಾಮಕುಟ (ಶಿರಸ್ತ್ರಾಣ)
ಚಕ್ರವರ್ತಿಗಳು ಕೆಲವು ಅಧಿಕಾರಿ ಧರಿಸುವ ಕರಂಡ ಮಕುಟ ಎಂಬ ಶಿರಸ್ತ್ರಾಣ
ಸಾಮಾನ್ಯ ಕಡದ ಮಕುಟ (ಶಿರಸ್ತ್ರಾಣ)
ಎಂಬ ಶಿರಸ್ತ್ರಾಣ


## ತಾಪಸೋಪಕರಣಗಳು




[illegible] = a shield or the club of Balarāma



## ಪೀಠ ಪ್ರಕಾರಗಳು.



ವಿಷಮದ್ವಾದಶಕೋನ -ಪೀಠ
ಸಮಷೋಡಶಕೋಣ -ಪೀಠ
ವಿಷಮಷೋಡಶ -ಕೋಣ ಪೀಠ
ವರ್ತುಲ ಪೀಠ
ವಿಷಮವಾರ್ತಿಕ -ಪೀಠ
ಅರ್ಧ ಚಾಂದ್ರಿಕ ಪೀಠ

# ಆಯುಧಗಳು



ಎರಡು ಬಗೆಯ
ಉದ್ದವಾದ
ಮರದ ಹಿಡಿ-
-ಯುಳ್ಳ
← ತ್ರಿಶೂಲಗಳು.



← ಮೇಲೆ ಮತ್ತು ಕೆಳಗೆ ಪಕ್ಷಿ-
- ನಖತ್ರಯವುಳ್ಳ ನಡು-
- ಹಿಡಿಕೆಂಯುಳ್ಳ ವಜ್ರಾಯುಧ.




ಎರಡು ಬಳುಕುಗಳುಳ್ಳ ಮಧ್ಯಂಯುಳ್ಳ ಧನುಸ್ಸು




ಎರಡು ಬಳುಕುಗಳನ್ನುಳ್ಳ ಮತ್ತು
ಉದ್ದವಾದ ನಡುಬಳುಕಿನಿಂದಾಗಿ
ತುದಿ-ಭಾಗಗಳ ಸಣ್ಣ ಬಳುಕುಗಳನ್ನುಳ್ಳ
ಹೆಚ್ಚಿಲ್ಲ.


RHA



ಆಯುಧಗಳು
ಹಿಡಿದಿರುವ ಖಟ್ವಾಂಗವೆಂಬ ರುದ್ರಾಯುಧದ
ವಿಶಿಷ್ಟ ಮಾದರಿ. ಇದಕ್ಕೆ ಎಲುಬಿನ ಹಿಡಿಯಿಲ್ಲ.
ಹಗ್ಗದ ಉಂಡೆ
ಮಾಡಿದ
ಮುಂಗಾಲಿನ
ಮೂಳೆಗೆ ಮಾನವ
ತಲೆಬುರುಡೆ-
-ಯನ್ನು ಸಿಕ್ಕಿಸಿ
ಮಾಡಿದ ಖಟ್ವಾಂಗ
ಎಂಬ ರುದ್ರಾಯುಧ


ಆಯುಧಗಳು
ಸರಳವಾದ ಚಕ್ರಾಯುಧ
ಅಲಂಕೃತ ಚಕ್ರಾಯುಧ
ಎಡಗೈಯನ್ನು ರುಕ್ಮಿಣಿಯ
ಹೆಗಲ ಮೇಲಿಟ್ಟು ಬಲಗೈಯಲ್ಲಿ ಕೃಷ್ಣನು
ಹಿಡಿಯುವ ಲೋಹಕೃತವಾದ ವೇತ್ರಯಷ್ಟಿ
(ಬೆತ್ತದ ಕೋಲು)
ಉಕ್ಕಿನ ಅಲಗಿನ, ಕಡಾವು ಹಾಕಿದ ಮರದ ಹಿಡಿಕೆ-
-ಯನ್ನುಳ್ಳ, ಬಂಗಾರಕ್ಕೆ ಸಿಕ್ಕಿಸಿದ ಆ ಹಿಡಿಯ
ತೂತಿನಲ್ಲಿ ಸಿಕ್ಕಿಸಿದ, ಯುದ್ಧದಲ್ಲಿ ಬಳಸುವ
ಹೆಗ್ಗೊಡಲಿ - ಗದಾಸ್ತ್ರ ಪರಶು.
ಶಕ್ತಿ ಎಂಬ ಭರ್ಚಿಯ ಒಂದು
ನಮೂನೆ. ಇದು ಚತುಷ್ಕೋಣಾ-
-ಕೃತಿಯ ಆಯುಧ; ಇದಕ್ಕೆ
ಬುಡದಲ್ಲಿ ತೂತು ಕೊರೆದು
ಅದರಲ್ಲಿ ಸಿಕ್ಕಿಸಿದ ಮರದ
ಹಿಡಿಕೆ ಇರುತ್ತದೆ ಮತ್ತು ಇದು
ಲೋಹಾಯುಧ.
ಶಿವನ ಎರಡು
ಬಗೆಯ
ಅಗ್ನ್ಯಸ್ತ್ರಗಳು
(ಆಯುಧಗಳು)

## ಆಯುಧಗಳು




ಯುದ್ಧೋಪಯುಕ್ತ ದಾರು ಮುಸಲ (ಮರದ ಒನಕೆ).




ಯುದ್ಧೋಪಯುಕ್ತವಾದ ಹಲಾಯುಧ (ನೇಗಿಲು).




ಹಗ್ಗದ ನಾರಿನ ಬದಲು ಕಬ್ಬಿಣದ ತಂತಿಯನ್ನು ಹೆದೆಯಾಗಿ ಉಳ್ಳ ಧನುಸ್ಸು.



ಯುದ್ಧದಲ್ಲಿ ಬಳಸುವ ಟಂಕವೆಂಬ (ಅರ್ಧ ಚಿಲ್ಲು [illegible]) ಕಿರಿ ಆಯುಧ.





ಲೋಹದ ಹರಿತವಾದ ಮುಕ್ಕು ಚೂಪಾದ ತುದಿ ಇರುವ ಹಾಗೂ ಬಾಲದಲ್ಲಿ ಹಕ್ಕಿಯ ಪುಕ್ಕಗಳನ್ನು ಸಿಕ್ಕಿಸಿದ ಬಾಣವೆಂಬ ಆಯುಧವು.



ಯುದ್ಧದಲ್ಲಿ ಬಳಸುವ ಕೊಡಲಿ


RAJA



ಕ್ಷೇತ್ರಪ್ರಕಾರಗಳು
ಸಮಚತುಷ್ಕೋನ ಕ್ಷೇತ್ರ
ವಿಷಮ ಚತುಷ್ಕೋನ ಕ್ಷೇತ್ರ
ಅಷ್ಟಕೋಣ ಕ್ಷೇತ್ರ
ವಿಷಮಾಷ್ಟಕೋಣ ಕ್ಷೇತ್ರ
ಷಟ್ಕೋಣ ಕ್ಷೇತ್ರ
ವಿಷಮಷಟ್ಕೋಣ ಕ್ಷೇತ್ರ
ಸಮದ್ವಾದಶಕೋನ ಕ್ಷೇತ್ರ




ವಾಹನಗಳು
ಜಿಂಕೆ
ಪೂಜೋಪಕರಣಗಳು
ಆಹುತಿ ಹಾಕಲು ತಕ್ಕ ಅಗ್ನಿಕುಂಡ
(ಹೋಮ ಪೂಜಾ ಸಾಧನ)
ಗಂಟೆ-೧
ಗಂಟೆ-೨
ಸ್ರುವವೆಂಬ
ಪೂಜೋಪಕರಣ
(ಚಮಚ)

## ಆಭರಣ ಅಲಂಕರಣ


ಪ್ರಭಾಮಂಡಲವನ್ನು ಅಥವಾ
ಪ್ರಭಾವಳಿಯನ್ನು
ತೋರಿಸುವ ಶಿರಶ್ಚಕ್ರವೆಂಬ
ಶಿರಸ್ತ್ರಾಣ.
ಲಕ್ಷ್ಮೀ ಅಥವಾ ಚಕ್ರವರ್ತಿನಿಯರು
ಅಥವಾ ಅಧಿರಾಜಪತ್ನಿಯರು
ಮತ್ತು ನರ್ತಕಿಯರು ಧರಿಸುವ
ಕುಂತಳಾಕೃತಿಯ ಶಿರಸ್ತ್ರಾಣ.
ರಾಜರ ಸಾಮಂತರು
(ಸೇನಾಪತಿಗಳು) ಧರಿಸುವ
ಶಿರಸ್ತ್ರಕವೆಂಬ ಶಿರಸ್ತ್ರಾಣ.
ಮಕರ ಕುಂಡಲವೆಂಬ
ಕರ್ಣಾಲಂಕಾರ


ಆಯುಧಗಳು
ತುದಿಯಲ್ಲಿ ಸಪೂರವಾಗುತ್ತಾ ಹೋಗುವ ಮತ್ತು ಬುಡದಲ್ಲಿ ಉಬ್ಬುಳ್ಳ ಗದೆ
ಗುಟ್ಟಕ್ಕೆ ಸುತ್ತಿಕೊಳ್ಳುವ ಯಾ ನೆಲಕ್ಕೆ ಅಂಟಿಕೊಳ್ಳುವ ಅಗಲವೂ ಹರಿತವೂ ಆದ ರತ್ನಖಚಿತ ಲೋಹಾಂಗುಲಿಯು; ಅದಕ್ಕೆ ಸುತ್ತಿಕೊಂಡ ರತ್ನಖಚಿತ ಪಟ್ಟೆಯಿಂದ ಹಿಡಿದುಕೊಳ್ಳುವುದು
ಗದೆ
ಅಲಂಕೃತ ಗದೆ
ಖಡ್ಗ (ನಮೂನೆ-೧)
ಖಡ್ಗ (ನಮೂನೆ-೨)
ವರ್ತುಲ ಫಲಕ ಯಾ ಢಾಲು, ಗುರಾಣಿ
ಚಿತ್ರದ


ಹಸ್ತ ಮುದ್ರೆಗಳು
ವರದ ಹಸ್ತ
ವಿಸ್ಮಯ ಹಸ್ತ
ಗಜ ಹಸ್ತ
ಕಟ್ಯವಲಂಬಿತ ಹಸ್ತ
ಮೂರು ಬಗೆಯ ಅಭಯ ಹಸ್ತ ಮುದ್ರೆಗಳು


# ವಾದ್ಯದ ಬಗೆಗಳು




ಮುರಳಿ, ವೇಣು, ಬನ್ಸ್ರಿ ಕೊಳಲು ಎಂಬ ಊದುವ ವಾದ್ಯ. ಇದು ಬಿದಿರುಗೊಳವೆ; ಇದಕ್ಕೆ ಆರು ಅಥವಾ ಎಂಟು ಕಣ್ಣುಗಳು (ತೂತುಗಳು) [illegible] ಮೇಲೆ ಇರುತ್ತವೆ. ಸರಿಗಮಪದನಿಸಾದಿ ಸ್ವರಗಳು ತೂತುಗಳಿಂದ ಹೊರಡುವಂತೆ ಬೆರಳುಗಳಿಂದ ಇದನ್ನು ನುಡಿಸುತ್ತಾರೆ.



ಕೈಯಲ್ಲಿ ಹಿಡಿವ ಸಾದಾ ಶಂಖ





ಲೋಹತಟ್ಟುಗಳಿಂದ ಅಲಂಕೃತವಾದ ಇಬ್ಬದಿಗಳಲ್ಲಿ [illegible] ಶೃಂಗಗಳನ್ನುಳ್ಳ ಶಂಖ

ಇನ್ನೊಂದು ವಿಧದ ಅಲಂಕೃತ ಶಂಖ





ಢಕ್ಕೆ (ಬುಡುಬುಡಿಕೆ)



ಡಮರು

ಗಣಪತಿ - ಹಳೆಬೀಡು



ಗೊಮ್ಮಟೇಶ್ವರ – ಶ್ರವಣ ಬೆಳಗೊಳ



ನರಸಿಂಹ – ಬೇಲೂರು





ಮುಖಲಿಂಗ - ಬ್ರಹ್ಮೇಶ್ವರ



ಸರಸ್ವತಿ - ಬನವಾಸಿ



ಪರಶುರಾಮ ಬನವಾಸಿ



ಪಾರ್ವತಿ - ಸೋಮನಾಥಪುರ



ವಿಷ್ಣು - ಬಾದಾಮಿ




ಹನುಮಂತ - ಬೇಲೂರು



ಅರ್ಧನಾರೀಶ್ವರ - ಮೈಸೂರು



ಶ್ರೀಮತಿ ಮುಕ್ತಾ
ನೆಹರು ರಸ್ತೆ
ಶಿವಮೊಗ್ಗ



## ಪ್ರೊ॥ ಶ್ರೀಧರರ ಬಗ್ಗೆ ಸಹೃದಯರ ಅನಿಸಿಕೆಗಳು ಮತ್ತು ಹಾರೈಕೆಗಳು

- "ಶ್ರೀಧರರನ್ನು ಇಪ್ಪತ್ತು-ಇಪ್ಪತ್ತೈದು ವರ್ಷಗಳಿಂದ ನಾನು ಬಲ್ಲೆ. ಅವರ ನೌಕರಿ, ವೃತ್ತಪತ್ರದ ಚಾಕರಿ, ಮಾಸ್ತರಿಕೆಯ ಪೇಚಾಟ, ಸಂಸಾರಿಕೆಯ ತಪಸ್ಸು! ಅವರು ಕವಿಗಳು, ವಿಮರ್ಶಕರು, ಶಿಕ್ಷಕರು, ವಿದ್ವಾಂಸರು."
  **......ದ. ರಾ. ಬೇಂದ್ರೆ**

- "ಪ್ರೊ॥ ಶ್ರೀಧರ ಅವರು ತಮ್ಮ ಬಹುಶ್ರುತತ್ವದಿಂದ ಭಾಷಾಪ್ರಭುತ್ವದಿಂದ ಸಮರ್ಥ ಲೇಖಕರೆಂದು ಹೆಸರು ಪಡೆದಿದ್ದಾರೆ. **—ಸ. ಸ. ಮಾಳವಾಡ**

- "ಮೊದಲಿಗೆ ಶಿರಸಿಯಂಥ ಊರಿನಲ್ಲಿದ್ದುಕೊಂಡು ಈ ಗ್ರಂಥವನ್ನು ರಚಿಸಿರುವುದಕ್ಕಾಗಿ ನಾನು ನಿಮ್ಮನ್ನು ಅಭಿನಂಧಿಸುತ್ತೇನೆ." **—ಹಾ. ಮಾ. ನಾಯಕ**

- "ಅತ್ಯಗತ್ಯವಾದ, ಆದರೆ ನಿರ್ವಹಣ ದುಸ್ಸಾಧ್ಯವಾದ ಇಂಥ ವಿದ್ವತ್ಕಾರ್ಯವನ್ನು ಸಾಧಿಸಿರುವ ಪ್ರೊ॥ ಬಿ. ಎಚ್. ಶ್ರೀಧರರನ್ನು ನಾನು ನಾಡಿನ ಪರವಾಗಿ ಅಭಿನಂದಿಸುತ್ತೇನೆ."
  **—ಜಿ. ವೆಂಕಟಸುಬ್ಬಯ್ಯ**

- "ಇಂಥ ಹಲವಾರು ಪುಸ್ತಕಗಳನ್ನು ಬರೆಯುವಂತಾಗಲಿ ಎಂದು ಹಾರೈಸುತ್ತೇನೆ."
  **—ರಂ. ಶ್ರೀ. ಮುಗಳಿ**

- "ಪ್ರಾಧ್ಯಾಪಕರೂ, ಉದ್ದಾಮ ಪಂಡಿತರೂ, ಶ್ರೇಷ್ಠ ಲೇಖಕರೂ ಆಗಿರುವ ಬಿ. ಎಚ್. ಶ್ರೀಧರ ಅವರು ಈ ಕೃತಿಯನ್ನು ನೂತನ ರೀತಿಯಲ್ಲಿ ರಚಿಸಿರುತ್ತಾರೆ. ಅಭಿಜಾತ ಹಾದಿಯಲ್ಲಿ ನಡೆದು ಅತಿವಾದಕ್ಕೆಡೆಗೊಡದೆ ಯಶಸ್ವಿಯಾಗಿದ್ದಾರೆ."
  **—ಡಾ॥ ಎಂ. ಮರಿಯಪ್ಪ ಭಟ್ಟ**

- "ನಲವತ್ತೈದು ವರ್ಷದಿಂದ ಅವರ ಸ್ನೇಹದ ಸುಯೋಗ ಲಭಿಸಿದೆ. ಅವರ ಕಾವ್ಯಶಕ್ತಿ ತುಂಬುನದಿಯಂತೆ ಹರಿದುಬಂದಿದೆ. **—ಎಚ್. ವೈ. ಶಾರದಾಪ್ರಸಾದ, ದೆಹಲಿ**

- "ಖ್ಯಾತ ವಿದ್ವಾಂಸರೂ, ಕವಿಗಳೂ ಆದ ಪ್ರೊ॥ ಬಿ. ಎಚ್. ಶ್ರೀಧರ ಇನ್ನೂ ಹೆಚ್ಚಿನ ಕೃತಿಗಳನ್ನು ರಚಿಸುವಂತಾಗಲೆಂದು ಹಾರೈಸುತ್ತೇನೆ"
  **—ಡಿ. ವೀರೇಂದ್ರ ಹೆಗ್ಗಡೆ**

- "ನಡುಗಾಲದ ನನ್ನ ಮಿತ್ರರಾದ ಬಿ. ಎಚ್. ಶ್ರೀಧರರ ವಿಚಾರದಲ್ಲಿ ನನಗೆ ಅಪಾರ ಪ್ರೇಮ, ಆದರಗಳಿವೆ. ಅವರ ತೀಕ್ಷ್ಣಮತಿ, ನಿಸ್ಪೃಹ ಬದುಕು, ಸತ್ಯನಿಷ್ಠುರತೆಗಳು ಅವರ ಬಗ್ಗೆ ನನ್ನಲ್ಲಿ ಆದರ ಹುಟ್ಟಿಸಿವೆ." **—ಡಾ॥ ಶಿವರಾಮ ಕಾರಂತ**

**—(ಕಾವ್ಯಸೂತ್ರ ಮತ್ತು ಇತರ ಕೃತಿಗಳಿಂದ)**